ಗೌರಿ ಲಂಕೇಶರ
ಲಂಕೇಶ್
ಸೆಪ್ಟೆಂಬರ್ 20, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ






ಯಡ್ಡಿ ಬೇನಾಮಿ ಆಸ್ತಿ ಖರೀದಿ

'ಜೋಕು'ಮಾರಸ್ವಾಮಿ

ಮಸಾಜ್ ಪಾರ್ಲರ್‌ಗಳಲ್ಲಿ ವೇಶ್ಯಾವಾಟಿಕೆ

ಕಾರ್ಪೊರೇಟರ್ ಪತಿಯೇ ಪೋಷಕ





ಮಚ್ಚನ ಕೊಲೆಗೆ ಪ್ರತೀಕಾರ!

ತಿಮ್ಮೇನಳ್ಳಿ ಸೂರಿ ಖಲಾಸ್!



ಹಿಂದೂ ಧರ್ಮ ಪ್ರಚಾರಕ್ಕಿಳಿದಿರುವ ಕೋರ್ಟುಗಳು..!


ಕರ್ನಾಟಕ ಸರ್ಕಾರ 1997ರಲ್ಲಿ ಮತ್ತು 2003ರಲ್ಲಿ ಹೊರಡಿಸಿದ್ದ ಧಾರ್ಮಿಕ ದತ್ತಿ ಕಾಯಿದೆಯನ್ನು ಹೈ ಕೋರ್ಟಿನ ದ್ವಿಸದಸ್ಯ ನ್ಯಾಯಪೀಠ ರದ್ದುಗೊಳಿಸಿದೆ. ಸರ್ಕಾರ ಸೆಕ್ಯುಲರ್ ಆಗಿರಬೇಕು ಮತ್ತು ದೇವರು ಧರ್ಮ ಇತ್ಯಾದಿಗಳ ವಿಷಯದಲ್ಲಿ ಸರ್ಕಾರ ನಿರಪೇಕ್ಷ ವಾಗಿರಬೇಕು ಎಂಬ ಸಂವಿಧಾನದ ಆಶಯಗಳನ್ನು ಜಾರಿಗೆ ತರಬೇಕೆಂಬ ಆಶಯದಿಂದ ಸರ್ಕಾರದ ಕ್ರಮವನ್ನು ಕೋರ್ಟು ರದ್ದುಗೊಳಿಸಿದ್ದರೆ ಎಲ್ಲರೂ ಮೆಚ್ಚಿಕೊಳ್ಳಬಹುದಾಗಿತ್ತು. ಆದರೆ ಕೋರ್ಟು ಇದನ್ನು ರದ್ದುಗೊಳಿಸಲು ನೀಡಿರುವ ಕಾರಣ ಸರ್ಕಾರ ಸಾಕಷ್ಟು ಧರ್ಮ ನಿರಪೇಕ್ಷವಾಗಿಲ್ಲ ಎಂಬುದಲ್ಲ... ಬದಲಿಗೆ ಸಾಕಷ್ಟು ಧರ್ಮಬಧ್ದ ಆಗಿಲ್ಲ ಮತ್ತು ಸಾಕಷ್ಟು ಹಿಂದೂ ಪರವಾಗಿಲ್ಲ ಎಂಬುದು.

1997ರ ಈ ಕಾಯಿದೆ ಹಿಂದೂ ದೇವಸ್ಥಾನ ಮತ್ತು ಮಠಗಳಿಗೆ ಅನ್ವಯಿಸುತ್ತದೆ. ಅದರ ಪ್ರಕಾರ ಆ ದೇವಸ್ಥಾನಗಳಲ್ಲಿ ಅರ್ಚಕರನ್ನು ನೇಮಿಸುವುದರಿಂದ ಹಿಡಿದು ಎಲ್ಲಾ ಆಡಳಿತಾತ್ಮಕ ವಿಷಯಗಳಿಗೂ ಸರ್ಕಾರ ಮಧ್ಯಪ್ರವೇಶ ಮಾಡುವ ಹಕ್ಕನ್ನು ಕಾದಿರಿಸಿಕೊಂಡಿತ್ತು. ಆದರೆ ಅದೇ ಸಮಯದಲ್ಲಿ ಈ ಕಾಯಿದೆಯ 2003ರ ತಿದ್ದುಪಡಿ ಬಾಬಾಬುಡನ್‌ಗಿರಿಯಂತ ಸೌಹಾರ್ದ ಕೇಂದ್ರಗಳನ್ನು ಹಿಂದೂ ಎಂಬ ಪರಿವ್ಯಾಪ್ತಿಗೆ ಎಳೆದು ತಂದು ಪರೋಕ್ಷವಾಗಿ ಚಡ್ಡಿಗಳ ಅಜೆಂಡಾವನ್ನು ಜಾರಿ ಮಾಡುತ್ತಿತ್ತು. ಕೋರ್ಟಿಗೆ ಈ ಕಾಯಿದೆಯ ಬಗ್ಗೆ ಏನಾದರೂ ಆಕ್ಷೇಪಣೆಯಿದ್ದರೆ ಇದರ ಬಗ್ಗೆ ಇರಬೇಕಾಗಿತ್ತು. ಆದರೆ 'ನ್ಯಾಯ ಪೀಠ' ಆಕ್ಷೇಪಣೆ ಮಾಡಿರುವುದು ಇದರ ಬಗ್ಗೆ ಅಲ್ಲ. ಬದಲಿಗೆ ಈ ಕಾಯಿದೆ ಹಿಂದೂ ಎನ್ನುವ ವ್ಯಾಖ್ಯಾನದಲ್ಲಿ ಜೈನರನ್ನು, ಬೌದ್ಧರನ್ನು ಮತ್ತು ಸಿಖ್‌ರನ್ನು ಹೊರಗಿಡುತ್ತದೆ ಹಾಗೂ ಆ ಮೂಲಕ "ಈಗಾಗಲೇ ವಿಭಜಿತವಾಗಿರುವ ಹಿಂದೂ ಸಮುದಾಯವನ್ನು ಮತ್ತಷ್ಟು ವಿಭಜಿತ ಗೊಳಿಸುತ್ತದೆ" ಎಂಬುದು ಅದರ ಪ್ರಧಾನ ಆಕ್ಷೇಪ. ಅದೇ ರೀತಿ ಈ ದೇಶದಲ್ಲಿ ಸೆಕ್ಯುಲರ್ ಸಂವಿಧಾನ ವೊಂದು ಜಾರಿಗೆ ಬಂದಮೇಲೆ ಖಾಸಗಿ ಕ್ಷೇತ್ರಗಳನ್ನು ಹೊರತು ಪಡಿಸಿ ಮಿಕ್ಕೆಲ್ಲಾ ಸಾರ್ವಜನಿಕ ಕ್ಷೇತ್ರಗಳಲ್ಲಿ ದೇವಸ್ಥಾನಗಳೂ ಒಳಗೊಂಡಂತೆ ಅಲ್ಲಿ ವಂಶಪಾರಂಪರ್ಯ ಸ್ಥಾನಗಳು ದೊರೆಯುವಂತಿಲ್ಲ. ಅದೇರೀತಿ ಸರ್ಕಾರದಿಂದ ಅನುದಾನ ಪಡೆದುಕೊಳ್ಳುವ ದೇವಸ್ಥಾನ ಗಳಲ್ಲಿ ಅರ್ಚಕರ ನೇಮಕಾತಿಯನ್ನು ವಂಶ ಪಾರಂಪರ್ಯವಾಗಿ ಮಾಡುವುದನ್ನು ಈ ಕಾಯಿದೆ ನಿರ್ಬಂಧಿಸಿತ್ತು. ಆದರೆ ಕೋರ್ಟು ಇದನ್ನು ವಿರೋಧಿಸಿದೆ. ಮತ್ತು ವಂಶಪಾರಂಪರ್ಯವಾಗಿ ಅರ್ಚಕರ ನೇಮಕಾತಿಗೆ ಮತ್ತೆ ಅವಕಾಶ ನೀಡಿದೆಯಲ್ಲದೆ "ಸರ್ಕಾರ ಅನುದಾನ ನೀಡುತ್ತದೆ ಎಂದ ಮಾತ್ರಕ್ಕೆ ಆಡಳಿತ ಹಾಗೂ ಧಾರ್ಮಿಕ ವಿಚಾರಗಳಲ್ಲಿ ಮೂಗು ತೂರಿಸು ವಂತಿಲ್ಲ" ಎಂದು ಆದೇಶ ಹೊರಡಿಸಿದೆ. ಅಂದರೆ ಸರ್ಕಾರವೇ ಮುಂದೆ ನಿಂತು ಹಿಂದೂ ಧರ್ಮದ ಪುನರ್ ನಿರ್ಮಾಣ ಮಾಡುತ್ತಿದೆ. ಹಾಗಾದರೆ ಸಂವಿಧಾನ..?

ಭಾವಾರ್ಕ
ಶಿವಸುಂದರ್

ಸುಮತೀಂದ್ರ ನಾಡಿಗ ಮತ್ತು ನಿರಂಜನ.. ಹಾಗೂ ಅಮೇಧ್ಯ ಮತ್ತು ಸುಗಂಧ

ಸುಮತೀಂದ್ರ ನಾಡಿಗರಿಗೆ ಈ ಬಾರಿ ದಕ್ಷಿಣ ಕನ್ನಡದ ಸಂಸ್ಥೆಯೊಂದು ನಿರಂಜನ ಪ್ರಶಸ್ತಿಯನ್ನು ನೀಡಿದೆ. ಇದೇ ಸಂಸ್ಥೆ ಕಳೆದ ಬಾರಿ ಇದೇ ಪ್ರಶಸ್ತಿಯನ್ನು ಭೈರಪ್ಪನವರಿಗೆ ನೀಡಿತ್ತು. ಆಗಿನಿಂದಲೂ ಕನ್ನಡದ ಪ್ರಜ್ಞಾವಂತರ ಲೋಕ, ಪ್ರಗತಿಪರ ಸಾಹಿತ್ಯ ಚಳವಳಿಯ ಅಧ್ವರ್ಯು ಆಗಿದ್ದ ಮತ್ತು ಖ್ಯಾತ ಕಮ್ಯುನಿಷ್ಟ್ ಸಿದ್ಧಾಂತಿಯೂ, ಸಮಾನತಾವಾದಿಯೂ ಆಗಿದ್ದ ನಿರಂಜನರಿಗೂ; ಕಣಕಣಗಳಲ್ಲೂ ಹಿಂದೂತ್ವವನ್ನೇ ಉಸಿರಾಡುವ ಮತ್ತು ವರ್ಣ ಮತ್ತು ವರ್ಗ ತಾರತಮ್ಯವನ್ನೇ ಉಸಿರಾಡುವ ಸುಮತೀಂದ್ರ ನಾಡಿಗ ಮತ್ತು ಭೈರಪ್ಪನವರಿಗೂ ಯಾವ ಬಾದರಾಯಣ ಸಂಬಂಧವಿದಿರಬಹುದೆಂದು ತಲೆ ಕೆಡಿಸಿಕೊಳ್ಳುತ್ತಿದೆ. ಅದರ ಬಗ್ಗೆ ಯೋಚಿಸುತ್ತಿರುವಾಗಲೇ ಕೆಲವರು ಪುಂಡು ಹುಡುಗರು ಮನುಷ್ಯನ ಅಮೇಧ್ಯಕ್ಕೂ ಸುಗಂಧಕ್ಕೂ ಸಾಮ್ಯತೆ ಏನೆಂದು ಕ್ಯಾಂಟಿನಿನಲ್ಲಿ



ಚರ್ಚೆ ಮಾಡುತ್ತಿದ್ದುದು ಜ್ಞಾಪಕಕ್ಕೆ ಬಂತು. ಕೊನೆಗೆ ಅವರು ನಿರ್ಧರಿಸಿದ್ದು ಇಷ್ಟು. ಎರಡೂ ವಾಸನೆ ಸೂಸುವ ವಸ್ತುಗಳೇ.. ಆದರೆ ವ್ಯತ್ಯಾಸವಿಷ್ಟೆ.. ಒಂದು ಸುವಾಸನೆ ಬೀರುತ್ತದೆ ಮತ್ತೊಂದು ದುರ್ವಾಸನೆ ಬೀರುತ್ತದೆ.. ಆದರೆ ಇನ್ನು ಬಗೆಹರಿಯದ ಸಮಸ್ಯೆ ಏನೆಂದರೆ ಸುಗಂಧ ಪ್ರಶಸ್ತಿಯನ್ನು ಅಮೇಧ್ಯಕ್ಕೆ ನೀಡಬಹುದೇ..?



ಹಾವಾಡಿಗರನ್ನು ಶಿಕ್ಷಿಸಬೇಕೆನ್ನುವವರು 'ಕ್ರೊಕೊಡೈಲ್ ಹಂಟರ್'ನನ್ನು ಹೊಗಳುವುದೇಕೆ?

ಮೊನ್ನೆ ಟಿವಿ ಮತ್ತು ಪತ್ರಿಕೆಗಳ ತುಂಬಾ ಒಂದೇ ಸುದ್ದಿ. 'ಕ್ರೊಕೊಡೈಲ್ ಹಂಟರ್' ಎಂದೇ ಖ್ಯಾತಿ ಪಡೆದಿದ್ದ ಆಸ್ಟ್ರೇಲಿಯಾದ ವನ್ಯಜೀವಿ 'ಪ್ರೇಮಿ' ಸ್ಟೀವ್ ಇರ್ವಿನ್ ಸ್ಟಿಂಗ್ ರೇ ಎಂಬ ಮೀನಿನ ಹೊಡೆತಕ್ಕೆ ಸಿಕ್ಕಿ ಮೃತನಾದ ಸುದ್ದಿ. ಈ ಸ್ಟೀವ್ ಇರ್ವಿನ್ 1992ರಿಂದಲೂ ಮೊಸಳೆ ಹಿಡಿಯುವುದರಲ್ಲಿ ಫೇಮಸ್.. ಮತ್ತು ಸ್ವಚ್ಛಂದ ಜಲಚರ ಜೀವಿಗಳನ್ನು ಟಿವಿ ಕಣ್ಣುಗಳಲ್ಲಿ ಸೆರೆ ಹಿಡಿದು ಅವುಗಳ ಜೀವನ ಕ್ರಮವನ್ನು ಇಡಿ ಜಗತ್ತಿಗೇ ತೋರಿಸುತ್ತಾ ಬಂದಿದ್ದ. ಅದರಲ್ಲೂ ಸ್ಯಾಟಲೈಟ್ ಚಾನೆಲ್‌ಗಳು ವಿಶ್ವಾದ್ಯಂತ ಹರಡಿಕೊಂಡ ಮೇಲೆ ಅನಿಮಲ್ ಪ್ಲಾನೆಟ್ ಮತ್ತು ನ್ಯಾಷನಲ್ ಜಿಯೋಗ್ರಾಫಿಯಂಥ ಚಾನೆಲ್‌ಗಳು ಈತ ಸೆರೆ ಹಿಡಿದ ಚಿತ್ರಗಳನ್ನು ವಿಶ್ವದಾದ್ಯಂತ ಪ್ರಸರಿಸಿದವು. ಇದರಿಂದಾಗಿಯೇ ಇರ್ವಿನ್‌ಗೆ ವಿಶ್ವಖ್ಯಾತಿಯೂ ದಕ್ಕಿತು. ಆದ್ದರಿಂದಲೇ ಆತ ಈ ರೀತಿಯಲ್ಲಿ ದುರ್ಮರಣ ಅಪ್ಪಿದ್ದರಿಂದ ಜಗತ್ತಿನಾದ್ಯಂತ ವನ್ಯಜೀವಿ ಪ್ರೇಮಿಗಳು ಎಲ್ಲಕ್ಕಿಂತ ಹೆಚ್ಚಾಗಿ ಆವನ ಶೋ ಪ್ರೇಮಿಗಳು ಕಂಬನಿ ಮಿಡಿಯುತ್ತಿದ್ದಾರೆ.

ಆದರೆ ಆತ ನಿಜಕ್ಕೂ ಮಾಡುತ್ತಿದ್ದದ್ದು ನಮ್ಮ ಹಾವಾಡಿಗರು ಅಥವಾ ಕರಡಿ ಹಿಡಿಯುವವರು ಮಾಡುತ್ತಿದ್ದ ಕೆಲಸವನ್ನೇ! ಸಾಗರದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಕ್ರೂರ ಹಾಗೂ ಇತರ ಜಲಚರಗಳನ್ನು ಹಿಡಿದು ಪಳಗಿಸಿ ದೃಶ್ಯೀಕರಿಸಿ ಜನರ ಮುಂದೆ ಇಡುತ್ತಿದ್ದ. ನಮ್ಮ ಹಾವಾಡಿಗರು, ಕರಡಿ ಹಿಡಿಯುವವರು ಮಾಡುತ್ತಿದ್ದದ್ದೂ ಇದೇ ಕೆಲಸವನ್ನೇ.. ವಿಷಪೂರಿತ ಹಾವುಗಳ ವಿಷ ತೆಗೆದು ಬೀದಿ ಬೀದಿಯಲ್ಲಿ ಜನರ ಎದುರು ಪ್ರದರ್ಶನಕ್ಕಿಟ್ಟು ಹೊಟ್ಟೆಹೊರೆದುಕೊಳ್ಳುತ್ತಾರೆ. ಇರ್ವಿನ್ ಮಾಡುತ್ತಿರುವುದೂ ಅದೇ ಅಲ್ಲವೆ.. ಹಾಗಾದರೆ ಟಿವಿಯಲ್ಲಿ ಇರ್ವಿನ್ ಶೋ ನೋಡಿ ಬೆರಗಾಗಿ ಚಪ್ಪಾಳೆ ತಟ್ಟುವ ಈ ದೇಶದ ಕುಲೀನ ಜನ ನಮ್ಮ ಹಾವಾಡಿಗರು ಮತ್ತು ಕರಡಿ ಹಿಡಿಯುವವರು ಬೀದಿಯಲ್ಲಿ ಪ್ರದರ್ಶನ ಮಾಡಿದರೆ ಅದನ್ನು 'ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾನೂನಿನಡಿ ಬಂಧಿಸಬೇಕು' ಎಂದು ಆಗ್ರಹಿಸುವುದೇಕೆ? ಇರ್ವಿನ್‌ಗಾಗಿ ಕಣ್ಣೀರಿಟ್ಟ ಈ ಕುಲೀನ ಜನರೇ ಮೊನ್ನೆ ಬೀದಿಯಲ್ಲಿ ಕರಡಿ ಕುಣಿತ ತೋರಿಸಿ ಮತ್ತು ಹಾವುಗಳನ್ನು ಪ್ರದರ್ಶನಕ್ಕಿಟ್ಟು ಹೊಟ್ಟೆಹೊರೆದುಕೊಳ್ಳುವ ಹಾವಾಡಿಗರನ್ನು ಬಂಧಿಸಬೇಕೆಂದು ಆಗ್ರಹಿಸಿದ್ದರು. ಅದೇ ರೀತಿ ಇರ್ವಿನ್‌ನ ಟಿ.ವಿ.ಶೋಗಳ ಪ್ರದರ್ಶನಕ್ಕೆ ಅನುಮತಿ ನೀಡಿದ ಸರ್ಕಾರ ಈ ಹಾವಾಡಿಗರನ್ನು ಕಾಯಿದೆಯಡಿ ಬಂಧಿಸಿತು. ಏನೀ ಡಬಲ್ ಸ್ಟಾಂಡರ್ಡ್? ಏನೀ ಗುಟ್ಟು?



ಅದು ಹಾವಿನ ಮೇಲಿನ ಪ್ರೇಮವಲ್ಲ... ಹಾವಾಡಿಗರ ಬದುಕಿನ ಬಗೆಗಿನ ತಾತ್ಸಾರ..

ಪ್ರಾಣಿಗಳ ಬಗ್ಗೆ ದಯೆ ಮತ್ತು ಅನುಕಂಪ ಇರುವುದು ತುಂಬ ಒಳ್ಳೆಯದು. ಅದನ್ನು ನಮ್ಮ ಸಂವಿಧಾನದ ನಿರ್ದೇಶನಾ ತತ್ವದಲ್ಲೂ ಅಳವಡಿಸಲಾಗಿದೆ. ಆದರೆ ಆ ಪ್ರಾಣಿದಯೆಯ ಮೂಲ ಸಕಲ ಜೀವಾತ್ಮಗಳ ಬಗ್ಗೆಯೂ ಇರುವ ಪ್ರೀತಿಯಿಂದ ಸ್ಫುರಿಸಬೇಕಲ್ಲವೇ... ಅದರಲ್ಲೂ ನಿಮ್ಮ ಸಹಜೀವಿಗಳ ಬಗ್ಗೆ, ಅವರ ಭೀಕರ ಬದುಕಿನ ವಾಸ್ತವಗಳ ಬಗ್ಗೆ ಸಹಾನುಕಂಪದಿಂದ ಹೊರಡಬೇಕಲ್ಲವೆ..? ತನ್ನ ನೆರೆಹೊರೆಯವರನ್ನು ತನ್ನಂತೆ ಪ್ರೀತಿಸದವರು ದೂರದ ಪ್ರಾಣಿಗಳ ಬಗ್ಗೆ ತೋರಿಸುವ ಮರುಕ ನಿಜಕ್ಕೂ ಭೂತದಯೆಯಿಂದ ಹೊರಟಿರುವ ಪ್ರೀತಿಯಲ್ಲವೇ ಅಲ್ಲ. ತನ್ನ ನೆರೆಯಲ್ಲಿ ವಾಸಿಸುವ ಮನುಷ್ಯನನ್ನು ಪ್ರಾಣಿಗಳಿಗಿಂತ ಕಡೆಯಾಗಿಯೂ ಎಲ್ಲಿಯೋ ಇರುವ ಪ್ರಾಣಿಗಳನ್ನು ಸಹಜೀವಿಯಂತೆಯೂ ನೋಡುವ ಈ ದ್ವಂದ್ವ ಪಕ್ಕಾ ಆಷಾಡಭೂತಿತನ. ಹಾಗೆ ನೋಡಿದಲ್ಲಿ ಹಾವಾಡಿಗರ ಕೈಯಲ್ಲಿ ಸೊರಗಿರುವ ಹಾವನ್ನು ಕಾಣಬಲ್ಲ ಇವರ ಕಣ್ಣು ಇರ್ವಿನ್‌ನ ಕೈಯಲ್ಲಿ ಗೋಳಾಡುವ ಮೊಸಳೆಯನ್ನು ಏಕೆ ಗುರುತಿಸುವುದಿಲ್ಲ? ಅಥವಾ ಈ ಬಗೆಯ ಮೋಜಿಗಾಗಿ ಪ್ರಾಣಿಗಳ ಬದುಕಿನ ಮೇಲೆ ಆಕ್ರಮಣ ಮಾಡುವ ವಿಲಾಸಿ ಶೋಗಳನ್ನಾಗಲೀ ಏಕೆ ವಿರೋಧಿಸುವುದಿಲ್ಲ? ಅದಕ್ಕಿಂತ ಹೆಚ್ಚಾಗಿ ಹಾವಾಡಿಗನ ಕೈಯಲ್ಲಿ ಸೊರಗಿರುವ ಹಾವನ್ನು ಕಾಣಬಲ್ಲ ಕಣ್ಣು ಹಾವಾಡಿಗನ ಸೊರಗಿರುವ ಹೊಟ್ಟೆಯನ್ನೇಕೆ ಕಾಣುವುದಿಲ್ಲ, ಈ ಕುರುಡಿಗೆ ಕಾರಣವೇನು? ಈ ಕುರುಡು, ಕಣ್ಣಿನ ಕುರುಡಲ್ಲ... ಇದು ಕುಲೀನ ವರ್ಗದ ವರ್ಗದೃಷ್ಟಿಕೋನದ ಕುರುಡು... ಏಕೆಂದರೆ ಇರ್ವಿನ್ ಆ ಶೋ ನೋಡುವ ವರ್ಗಕ್ಕೆ ಸೇರಿದವನೇ ಆಗಿರುತ್ತಾನೆ. ಆದರೆ ಹಾವಾಡಿಗ ಆ ನೋಡುಗರ ತಾತ್ಸಾರ ಮತ್ತು ತಿರಸ್ಕಾರದಿಂದ ನೋಡುವ ವರ್ಗಕ್ಕೆ ಸೇರಿದವನಾಗಿರುತ್ತಾನೆ. ಹೀಗಾಗಿ ಸಾರಾಂಶದಲ್ಲಿ ಅವರ ವನ್ಯಜೀವಿ ಪ್ರೇಮ ಅವರ ಕುಲೀನ ಬದುಕಿನ ಜೀವನಕ್ರಮದಿಂದ ಹೊರಟಿರುವ ದೃಷ್ಟಿಕೋನದ ಮತ್ತೊಂದು ಉದಾಹರಣೆ. ಅಲ್ಲಿರುವುದು ಹಾವಿನ ಮೇಲಿನ ಪ್ರೇಮವಲ್ಲ, ಹಾವಾಡಿಗರ ಬದುಕಿನ ಬಗೆಗಿನ ವರ್ಗ ತಾತ್ಸಾರ ಮತ್ತು ಭಾರತದಂತ ಸಂದರ್ಭದಲ್ಲಿ ಜಾತಿ ತಾತ್ಸಾರ ಸಹಾ..

ಗುಟ್ಟು ● ರಟ್ಟು

No Comments



"ಮಾಲೆಗಾಂವ್‌ನಲ್ಲಿ ಸ್ಫೋಟ ಮಾಡಿದವರು ಯಾರೆಂದು ಎಲ್ಲರಿಗೂ ಗೊತ್ತು"

-ಶಿವರಾಜ್ ಪಾಟೀಲ್

"ಮತಗಳಿಕೆಯ ಕಾರಣಕ್ಕಾಗಿಯೇ ಯಾವ ರಾಜಕೀಯ ಪಕ್ಷಗಳೂ ಸಾಕ್ಷರತೆ ಹೆಚ್ಚಿಸುವ ಪ್ರಯತ್ನದಲ್ಲಿ ತೊಡಗಲಿಲ್ಲ"

-ಹೆಚ್.ಡಿ. ಕುಮಾರಸ್ವಾಮಿ




"ಅಶಿಸ್ತು ತಡೆಯದಿದ್ದರೆ ಬಿ.ಜೆ.ಪಿ. ಮುಳುಗಿಯೇ ಹೋಗುತ್ತದೆ"

- ರಾಜನಾಥ್ ಸಿಂಗ್, ಬಿಜೆಪಿ ಅಧ್ಯಕ್ಷ

"IAS-IPS ಗಳ ಬಣ್ಣ ತೊಳೆಯಬಲ್ಲೆ"

-ತೆಲಗಿ. ಮಂಪರಿನಲ್ಲಿ



" ಮಂಪರು ಸೀಡಿಯಲ್ಲಿ ತೋರಿಸಿದ್ದೆಲ್ಲಾ ಸುಳ್ಳು. ನಾನು ಅದನ್ನೆಲ್ಲ ಹೇಳಿಯೇ ಇಲ್ಲ"

-ತೆಲಗಿ. ಮಂಪರಿನ ನಂತ[ರ]

"ಬಿಜೆಪಿ ಅಧಿಕಾರಕ್ಕೆ ಬಂದರೆ ವಂದೇ ಮಾತರಂ ಕಡ್ಡಾಯ ಮಾಡುತ್ತೇವೆ"

-ರಾಜನಾಥ್‌ಸಿಂಗ್. ಬಿಜೆಪಿ ಅಧ್ಯ[ಕ್ಷ]

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ವಿಶ್ವಸಂಸ್ಥೆ ಹಿಂದೆಂದಿಗಿಂತಲೂ ಹೆಚ್ಚು ಬಲಿಷ್ಠವಾಗಿದೆ"



-ಶಶಿ ತರೂರ್. ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಸ್ಥಾನದ ಆಕಾಂಕ್ಷಿ

"ಜೆಡಿ(ಎಸ್) ಈಗಲೂ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಸಮಾನ ದೂರದಲ್ಲಿದೆ"

-ದೇವೇಗ[ೌಡ]

"ಮನೆಮನೆಗೆ ತೆರಳಿ ಪಡಿತರ ಚೀಟಿ ಹಂಚುತ್ತೇವೆ"

-ಗೋವಿಂದ ಕಾರಜೋ[ಳ]

"ನನಗೆ ಯಾವ ಜಾತಿಯೂ ಇಲ್ಲ..ನನ್ನದು ಮಾನವ ಜಾತಿ"

-ಕುಮಾರಸ್ವಾ[ಮಿ]

"ಸ್ವಾತಂತ್ರ್ಯಕ್ಕೆ ಮುನ್ನ ವಂದೇ ಮಾತರಂ ಹಾಡದವರನ್ನು ದೇಶದ್ರೋಹಿಗಳೆಂದು ಕರೆಯಲಾಗುತ್ತಿತ್ತು.."

-ಚಿಮ[ೂ]

ವಾರದ ಘೋಷಣೆ:




"ನಾನೊಬ್ಬ ಮಗಳು. ಒಬ್ಬ ಹೆಂಡತಿ. ಒಬ್ಬ ತಾಯಿ. ಒಂದು ಹೆಣ್ಣು. ಒಬ್ಬ ನಟಿ. ಒಬ್ಬ ಭಾರತೀಯಳು. ಮತ್ತು ಒಬ್ಬ ಮುಸ್ಲಿಂ. ಇದಿಷ್ಟು ನನ್ನ ಅಸ್ತಿತ್ವ ನಿರ್ಧರಿಸುವ ಸಂಗತಿಗಳು. ನನ್ನ ಪಾಲಿಗೆ ಇವೆಲ್ಲವೂ ಅತಿ ಮುಖ್ಯ ಅಂಶಗಳು"

-ಶಬಾನಾ ಅಜ್ಮಿ. ಈ ಬಾರಿಯ ಬಸ[ವ] ಪ್ರಶಸ್ತಿ ಪುರಸ್ಕೃ[ತೆ]


ಝೆನ್

ಮಾನವ ಚೇತನಗಳು ದೇವರು-ಧರ್ಮಗಳ ಹೆಸರಿನಲ್ಲಿ ಜಡ್ಡುಗಟ್ಟುತ್ತಿರುವಾಗ ಬೌದ್ಧಪಂ[ಥ] ಹುಟ್ಟಿತು. ಅದರೊಳಗೂ ಧಾರ್ಮಿಕ ಸಂಸ್ಥೀಕರಣಗೊಳ್ಳತೊಡಗಿದಾಗ ಆ ಪಂ[ಥ] ಭಾರತ ಬಿಟ್ಟಿತು. ಕ್ರಮೇಣ ಜಪಾನ್ ಧರ[..] ದೇಶಗಳಲ್ಲಿ ಬಲಿತ ಈ ಬೌದ್ಧ ತತ್ವ ಪಂ[ಥ] ಝೆನ್ ಆಗಿ ಮಾನವ ಚೇತನಕ್ಕೆ 'ಸ್ವಪ್ರಯತ್ನದ' ತಾತ್ವಿಕ ತಳಹದಿ ಹಾಕಿತು. ಈ ಝೆನ್‌ನ ಕೆಲವು ಸಾಲುಗಳು ಈ ಸಲದ ಸೂಕ್ತಿಗಳಾಗಿವೆ. ಧರ್ಮದ ಹಂಗು ಕಳಚಿ ಓದಿ.

-ಮೂರ್ತಿ



ಧರ್ಮದ ಮೂಲಧರ್ಮ ಉಂಟಲ್ಲ; ಅದಕ್ಕೆ ಧರ್ಮವೇ ಇಲ್ಲ



ಮಾಲೆಗಾಂವ್‌ನ ಬೆಂಕಿಗೆ ವಾರಣಾಸಿ ಉದಕವಾಗುವುದೇ..?

ರಾತ್ರಿ ಒಂಬತ್ತು ಗಂಟೆ ಆಗಿತ್ತು, ಆಗಲೇ ಜನರೆಲ್ಲ ತಮ್ಮ ಮನೆ ಸೇರಿ ಭೆಟ್ಟುಳದ ಮುಖ್ಯ ರಸ್ತೆ ನಿರ್ಜನವಾಗಿತ್ತು. ಬೆಂಗಳೂರಿನ ಬಸ್‌ಗಾಗಿ ಒಬ್ಬಳೇ ನಿಂತು ಕಾಯುತ್ತಿರುವುದನ್ನು ಗಮನಿಸಿದ ನಾಲ್ಕು ಪುರುಷರು ನಾನಿದ್ದಲ್ಲಿಗೆ ಬಂದು ನಮಸ್ಕಾರ ಅಂದರು. ಅವರನ್ನು ನೋಡುತ್ತಿದ್ದಂತೆ ಅವರೆಲ್ಲ ಪೊಲೀಸರೆಂದು ಗೊತ್ತಾಯಿತು. ಹಲವು ನಿಮಿಷ ಅವರೊಂದಿಗೆ ಹರಟೆ ಹೊಡೆದ ನಂತರ ಅವರಲ್ಲೊಬ್ಬರು "ಮುಂಬೈಯಲ್ಲಿ ಬಾಂಬ್ ಬ್ಲಾಸ್ಟ್ ಆಗಿದೆ" ಅಂದರು. ತಕ್ಷಣ ಮುಂಬೈ ರೈಲ್ವೆ ಬಾಂಬ್ ಸ್ಫೋಟಗಳು ನೆನಪಾಗಿ "ಎಷ್ಟು ಜನ ಸತ್ತಿದ್ದಾರೆ?" ಅಂದೆ. "ಇಪ್ಪತ್ತು ಜನ ಇರಬೇಕು. ಮಾಲೆಗಾಂವ್‌ನ ಮಸೀದಿ ಹತ್ತಿರ ಬಾಂಬ್ ಬ್ಲಾಸ್ಟ್ ಆಗಿವೆ" ಅಂದರು ಅವರು. ಆಗ ಇತ್ತೀಚೆಗೆ ನಾನ್‌ಡೆಡ್‌ನಲ್ಲಿ ಭಜರಂಗದಳದವರು ಬಾಂಬ್ ತಯಾರಿಸುತ್ತಿರುವಾಗ, ಅದು ಸ್ಫೋಟಗೊಂಡು ಆರ್‌ಎಸ್‌ಎಸ್ ಮುಖಂಡನೊಬ್ಬ ಸೇರಿದಂತೆ ಹಲವು ಹಿಂದೂತ್ವವಾದಿಗಳು ಸತ್ತಿದ್ದು ನೆನಪಾಯಿತು. ಗುಜರಾತಿನಲ್ಲಾದ ಮುಸ್ಲಿಮರ ಮಾರಣ ಹೋಮಕ್ಕೆ ಇಸ್ಲಾಮಿಕ್ ಉಗ್ರವಾದಿಗಳು ಮುಂಬೈನ ಟ್ರೈನುಗಳಲ್ಲಿ ಬಾಂಬ್ ಇಟ್ಟು ಹಲವಾರು ಅಮಾಯಕರನ್ನು ಕೊಂದಿದ್ದರೆ, ಅದಕ್ಕೆ ಪ್ರತೀಕಾರವಾಗಿ ಹಿಂದೂ ಮೂಲಭೂತವಾದಿಗಳು ಮಾಲೆಗಾಂವ್‌ನಲ್ಲಿ ಬಾಂಬ್ ಸ್ಫೋಟಿಸಿ ರಕ್ತ ಹರಿಸಿರಬಹುದೇ ಅನ್ನಿಸಿತು.

ಮುಯ್ಯಿಗೆ ಮುಯ್ಯಿ, ಹಿಂಸೆಗೆ ಪ್ರತಿಹಿಂಸೆ.... ಇದೆಲ್ಲ ನಿಲ್ಲುವುದೆಂದು ಎಂದು ಯೋಚಿಸುತ್ತಲೇ ಬಸ್ ಹತ್ತಿದೆ. ಆಗ ನನಗೆ ನೆನಪಾಗಿದ್ದೇ ವಾರಣಾಸಿಯ ವೀರಭದ್ರ ಮಿಶ್ರ ಎಂಬ ಮಹಾಂತ ಮತ್ತು ಅಬ್ದುಲ್ ಬಾಟನ್ ನೊಮನಿ ಎಂಬ ಮೌಲ್ವಿ. (ಇವರಿಬ್ಬರ ಬಗ್ಗೆ ಎರಡು ತಿಂಗಳ ಹಿಂದೆ 'ದಿ ಹಿಂದು' ಪತ್ರಿಕೆಯಲ್ಲಿ ಒಂದೆರಡು ಲೇಖನಗಳು ಪ್ರಕಟಗೊಂಡಿದ್ದವು). ಕಳೆದ ಮಾರ್ಚ್ 7 ರಂದು ವಾರಣಾಸಿಯ ಸಂಕಟ್ ಮೋಚನ್ ಮಂಟಪದ ಮೇಲೆ ಮುಸ್ಲಿಮ್ ಉಗ್ರರು ಬಾಂಬ್ ಸ್ಫೋಟಿಸಿ ಹಲವು ಜನರನ್ನು ಬಲಿ ತೆಗೆದುಕೊಂಡಿದ್ದರು. ಹಿಂದೂ ಧರ್ಮದ ಪುಣ್ಯ ಸ್ಥಳವಾಗಿರುವ ವಾರಣಾಸಿಯಲ್ಲಿ, ಅದರಲ್ಲೂ ಹಿಂದೂಗಳ ಪ್ರಮುಖ ದೇಗುಲದ ಮೇಲೆ ದಾಳಿ ನಡೆದದ್ದನ್ನು ನೋಡಿ ಹಿಂದೂತ್ವವಾದಿಗಳು ಬೊಬ್ಬೆ ಹೊಡೆದಿದ್ದರು. ವಿನಯ್ ಕಟಿಯಾರ್ ಎಂಬ ಪ್ರಚಂಡ ಚಿಡ್ಡಿ 'ಹರ, ಹರ ಮಹದೇವ್' ಎಂದು ಅರಚುತ್ತಾ ವಾರಣಾಸಿಯುಲ್ಲಿ ಹಾಜರಾಗಿ ಕೋಮುಗಲಭೆಗೆ ಪ್ರೋತ್ಸಾಹಿಸಲು ಯತ್ನಿಸಿದರೆ, ರಥಯಾತ್ರೆಗಳ ಪ್ರವೀಣ ಎಲ್.ಕೆ. ಅಡ್ವಾಣಿ ರಕ್ತ ಚೆಲ್ಲಿದ್ದ ಜಾಗದಿಂದಲೇ ಮತ್ತೊಂದು ರಥಯಾತ್ರೆ ಪ್ರಾರಂಭಿಸುವುದಾಗಿ ಘೋಷಿಸಿದ್ದರು.

ಇವರಿಬ್ಬರ ಕಿಡಿಗೇಡಿತನವನ್ನು ಮತ್ತು ಅವರಿಂದ ಆಗಲಿರುವ ಮಾರಣ ಹೋಮವನ್ನು ಅರಿತ ಸಂಕಟ್ ಮೋಚನ್ ದೇಗುಲದ ಮಹಾಂತ ವೀರ್‌ಭದ್ರ ಮಾಡಿದ್ದೇನು ಗೊತ್ತಾ? "ನೀವಿಬ್ಬರು ಇಲ್ಲಿಗೆ ಬರುವ ಅವಶ್ಯಕತೆ ಇಲ್ಲ" ಎಂದು ಹೇಳಿ ಹಿಂದೂವಾದಿಗಳ ಮುಖಕ್ಕೆ ಬಾಗಿಲು ಜಡಿದರು ಮಾತ್ರವಲ್ಲ, ಬನಾರಸ್‌ನ ಮುಫ್ತಿ ಅಬ್ದುಲ್ ಬಾಟನ್ ನೊಮನಿಯವರನ್ನು ಸಂಕಟ್ ಮೋಚನ್ ಮಂಟಪಕ್ಕೆ ಆಹ್ವಾನಿಸಿ ಅವರೊಂದಿಗೆ ಶಾಂತಿ ಸ್ಥಾಪಿಸಲು ಮುಂದಾದರು. ಮುಸ್ಲಿಮ್ ಸಂಪ್ರದಾಯಸ್ಥರ ವಿರೋಧದ ನಡುವೆಯೂ ಮಹಾಂತರಿಂದ ಗಂಗಾ ಜಲವನ್ನು ಸ್ವೀಕರಿಸಿದ ಮುಫ್ತಿಯವರು ವಾರಾಣಾಸಿಯ ಮೇಲಿನ ಬಾಂಬ್ ದಾಳಿಯನ್ನು ಖಂಡಿಸಿದರಲ್ಲದೆ, ತಕ್ಷಣವೇ ಎಲ್ಲ ದೇವಸ್ಥಾನಗಳಿಗೂ, ಆಸ್ಪತ್ರೆಗಳಿಗೂ ಭೇಟಿ ನೀಡಿ ಶಾಂತಿಯನ್ನು ಕಾಪಾಡುವಂತೆ ಮನವಿ ಮಾಡಿಕೊಂಡರು. ಇವರಿಬ್ಬರ ಮುಂದಾಳತ್ವದಲ್ಲಿ ವಾರಣಾಸಿಯಲ್ಲಿ ಯಾವ ಗಲಭೆಯೂ ನಡೆಯಲಿಲ್ಲ. ಅಷ್ಟೇ ಅಲ್ಲ, ಬಾಂಬ್ ಸ್ಫೋಟಗೊಂಡ ದಿನ ಸೂರ್ಯಾಸ್ತವಾಗುವ ಹೊತ್ತಿಗೆ ಸಂಕಟ್ ಮೋಚನ್ ಮಂಟಪದಲ್ಲಿ ಪೂಜೆ ಮತ್ತು ಆರತಿ ಪ್ರಾರಂಭವಾಯಿತಲ್ಲದೆ, ಸಂಜೆಯ ಭಜನೆಯನ್ನು 'ಶಾಂತಿ ಮತ್ತು ಸತ್ಬುದ್ಧಿ'ಗೆ ಆಶಿಸುವ ಪ್ರಾರ್ಥನೆಯಾಗಿ ಪರಿವರ್ತನೆಗೊಂಡಿತ್ತು.

ಶಾಂತಿ ಮತ್ತು ಕೋಮು ಸೌಹಾರ್ದದ ಬಗ್ಗೆ ಇವರಿಬ್ಬರಿಗೂ ಎಷ್ಟು ಕಾಳಜಿ ಎಂದರೆ ಇವತ್ತು ಮುಸಲ್ಮಾನರ ಸಭೆಗಳಿಗೆ ಮಿಶ್ರ ಬರಲೇಬೇಕೆಂಬ ಒತ್ತಡ; ಹಿಂದೂ ಸಭೆಗಳಿಗೆ ನೊಮನಿ ಹಾಜರಾಗಲೇಬೇಕೆಂಬ ಹಂಬಲ. ಅಷ್ಟೇ ಅಲ್ಲ, ಇವತ್ತು ಇವರಿಬ್ಬರು ವಾರಣಾಸಿಯಲ್ಲಿ ಎಷ್ಟು ಜನಪ್ರಿಯರಾಗಿದ್ದಾರೆ ಎಂದರೆ ಅವರನ್ನು ಹಲವಾರು ಜನ ಅನುಸರಿಸುತ್ತಿದ್ದಾರೆ. ಪ್ರತಿ ವರ್ಷ ವಾರಣಾಸಿಯಲ್ಲಿ ಗಂಗಾನದಿಯ ಮೇಲೆ ಅದ್ಧೂರಿಯಾಗಿ ನಡೆಯುವ ರಾಮನವಮಿ ಮೆರವಣಿಗೆಯನ್ನು ಮಿಶ್ರಾರವರೇ ಉದ್ಘಾಟಿಸುತ್ತಾರೆ. ಈ ವರ್ಷ ಈ ಮೆರವಣಿಗೆಗೆ ಮಿಶ್ರಾರವರು ಇಬ್ಬರನ್ನು ವಿಶೇಷ ಅತಿಥಿಗಳಾಗಿ ಆಹ್ವಾನಿಸಿದ್ದರು. ಬನಾರಸಿನ ಮುಫ್ತಿ ನೋಮನಿ ಮತ್ತು ನೂರ್ ಫಾತೀಮ ಎಂಬ ವಕೀಲೆ. (ಫಾತೀಮಾರವರು ಕಳೆದ ವರ್ಷ ಒಂದು ದೇವಸ್ಥಾನ ಕಟ್ಟಿಸಿದ್ದಾರೆ). ಅವತ್ತಿನ ಮತ್ತೊಂದು ವಿಶೇಷ ಆಕರ್ಷಣೆ ಬಿಸ್ಮಿಲ್ಲಾ ಖಾನ್‌ರವರ ಮಗ ಮೊಹಮ್ಮದ್ ಜಮೀನ್ ಖಾನ್‌ರವರು 'ರಾಮಧುನ್' ನುಡಿಸಿದ್ದು.

ಕಂಡಹಾಗೆ



ಮಿಶ್ರ ಮತ್ತು ನೊಮನಿಯವರ ಈ ಸೌಹಾರ್ದ ಕ್ರಿಯೆಯಿಂದ ವಾರಣಾಸಿಯ ಜನ ಎಷ್ಟು ಸಂತೋಷಗೊಂಡರೆಂದರೆ, ಬುರ್ಕಾ ತೊಟ್ಟಿದ್ದ ಮುಸ್ಲಿಂ ಮಹಿಳೆಯರು "ಭಯೋತ್ಪಾದನೆ ತಡೆಯುವುದು ನಮ್ಮ ಕರ್ತವ್ಯ" ಎಂದು ಘೋಷಿಸುತ್ತಾ ಮೆರವಣಿಗೆಯಲ್ಲಿ ಹೊರಟರಲ್ಲದೆ, ಬಾಂಬ್‌ಗಳು ಸ್ಫೋಟಗೊಂಡ ಸ್ಥಳದಲ್ಲೇ 'ಹನುಮಾನ್ ಚಾಲೀಸ'ವನ್ನು ಹಾಡಿದರು. ಅವತ್ತಿನ ಈ ಭಾವೈಕ್ಯತಾ ಸಂಭ್ರಮದಲ್ಲಿ ಬಿರ್ಜು ಮಹಾರಾಜ್, ಪಂಡಿತ್ ಜಸರಾಜ್ ಸೇರಿದಂತೆ ಹಲವಾರು ಪ್ರಖ್ಯಾತ ಕಲಾವಿದರೂ ಭಾಗವಹಿಸಿದರು.

ಪರಸ್ಪರ ದ್ವೇಷ, ಅನುಮಾನಗಳ ಬದಲಾಗಿ ಶಾಂತಿ ಮತ್ತು ಸಹಬಾಳ್ವೆಯನ್ನೇ ಆಯ್ಕೆ ಮಾಡಿಕೊಂಡಿರುವುದರಿಂದ ವಾರಣಾಸಿಯ ಜನರಿಗೆ ಹಲವು ಸಮಸ್ಯೆಗಳನ್ನೂ ಬಗೆಹರಿಸಿಕೊಳ್ಳಲು ಸುಲಭವಾಗಿದೆ. ಉದಾಹರಣೆಗೆ ಶಿಯಾ ಜಮಾ ಮಸೀದಿಯ ಪಕ್ಕದಲ್ಲಿ ಇದ್ದ ಶಿವಲಿಂಗದ ಮೇಲೆ ಇತ್ತೀಚೆಗೆ ಮರವೊಂದು ಬಿದ್ದು ಶಿವಲಿಂಗ ಮುರಿದಿತ್ತು. ಇದರ ಬಗ್ಗೆ ಕೋಮುವಾದಿಗಳು ಊಹಾಪೋಹಗಳನ್ನು ಹರಡಲಾರಂಭಿಸಿದರು. ಇದರ ಬಗ್ಗೆ ಗೊತ್ತಾದ ಕೂಡಲೆ ಮಹಾಂತ ಮಿಶ್ರ ಮತ್ತು ಮುಫ್ತಿ ನೊಮನಿಯವರು ಜೊತೆಗೂಡಿ ಅದೇ ಜಾಗದಲ್ಲಿ ಹೊಸ ಶಿವಲಿಂಗವನ್ನು ಸ್ಥಾಪಿಸಲು ಯಾರ ಅಭ್ಯಂತರವೂ ಇರದಂತೆ ನೋಡಿಕೊಂಡರು.


ಇತ್ತೀಚೆಗೆ ಎಲ್ಲೆಡೆ ಕೇಳಿಬರುತ್ತಿರುವಂತೆ ವಾರಣಾಸಿಯಲ್ಲೂ ಮದರಸಗಳಲ್ಲಿ ಮುಸ್ಲಿಂ ಭಯೋತ್ಪಾದಕರಿಗೆ ರಕ್ಷಣೆ ನೀಡಲಾಗುತ್ತಿದೆ ಎಂಬ ಆರೋಪ ಕೇಳಿಬಂದಿತ್ತು. ಇದರಿಂದ ಅಲ್ಲಿನ ಮುಸ್ಲಿಮರು ಕೋಪಗೊಳ್ಳದೆ, ಇಂತಹ ಪೂರ್ವಗ್ರಹಪೀಡಿತ ಆಲೋಚನೆಗಳನ್ನು ಹೋಗಲಾಡಿಸಲು ಯತ್ನಿಸುತ್ತಿದ್ದಾರೆ. ಅದರಂತೆ ಮದರಸಗಳ ವಿದ್ಯಾರ್ಥಿಗಳ ಆಯ್ಕೆ, ಆಡಳಿತದಲ್ಲಿ ಪಾರದರ್ಶಕತೆ ಮತ್ತು ಸಂಶಯಾಸ್ಪದವಾಗಿ ವರ್ತಿಸುವ ವಿದ್ಯಾರ್ಥಿಗಳ ವಿಚಾರಣೆ ಪ್ರಾರಂಭವಾಗಿವೆ. ಇದರ ಉದ್ದೇಶ ಮದರಸಗಳ ಬಗೆಗಿನ ಗುಮಾನಿಗಳನ್ನು ತೊಡೆದುಹಾಕುವುದು ಮತ್ತು ಇಸ್ಲಾಮಿನಲ್ಲಿ ಭಯೋತ್ಪಾದನೆಗೆ ಅವಕಾಶವಿಲ್ಲ ಎಂದು ಸಾರುವುದು....

ಅಂದಹಾಗೆ ಇತ್ತೀಚೆಗೆ ನಡೆದ ಸಭೆಯೊಂದರಲ್ಲಿ ಮಹಾಂತ್ ಮಿಶ್ರಾರವರು "ಓರ್ವ ಅನೈತಿಕ, ಅಪ್ರಾಮಾಣಿಕ ಹಿಂದೂಗಿಂತಲೂ ಓರ್ವ ಸಭ್ಯ ಮುಸಲ್ಮಾನ ಸಾವಿರಪಟ್ಟು ಉತ್ತಮ" ಎಂದು ಘೋಷಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ ಮೌಲಾನ ಅಬುಲ್ ಕಾಸ್ಮಿ ನೊಮನಿಯವರು "ಓರ್ವ ಅನೈತಿಕ, ಅಪ್ರಾಮಾಣಿಕ ಮುಸಲ್ಮಾನನಿಗಿಂತಲೂ ಓರ್ವ ಸಭ್ಯ ಹಿಂದೂ ಸಾವಿರಪಟ್ಟು ಉತ್ತಮ" ಎಂದು ಘೋಷಿಸಿದರು......

ಇವರಿಬ್ಬರ ಸೌಹಾರ್ದ, ಸಹಬಾಳ್ವೆಯ ಕಾಳಜಿ ಎಲ್ಲರದ್ದಾದರೆ ಎಷ್ಟು ಚೆನ್ನ...

-ಗೌರಿ ಲಂಕೇಶ್

ಅಳಿಯನ ಕಾರುಬಾರು: ಟ್ರಿನಿಟಿ ತರಲೆ



'ಡಾ. ಮಂಜುನಾಥರ 42 ಕೋಟಿ ರೂ. ಹೃದಯ ಸಾಮ್ರಾಜ್ಯ'ವನ್ನು ನಾವು ಕಳೆದ ಸಂಚಿಕೆಯಲ್ಲಿ ತೆರೆದಿಡುತ್ತಿದ್ದಂತೆಯೇ ನಮ್ಮ ಸಂಪಾದಕರ ಕಚೇರಿಯಲ್ಲಿ ಪ್ರತ್ಯಕ್ಷವಾಯ್ತು ಆ ಟ್ರಿನಿಟಿ ಕಂಫರ್ಟ್ ಪ್ರೈ. ಲಿ ಕಂಪನಿಯ ಪಿಆರ್‌ಓ ಎಂಬ ಬೆದರುಗೊಂಬೆ!

"ಮೇಡಂ, ನಮ್ಮ ಕಂಪನಿಗೆ ದೇವೇಗೌಡ್ರ ಅಳಿಯ ಡಾ. ಮಂಜುನಾಥರೇ ಓನರ್ರಾss ಅಂತ ನಿಮ್ಮ ಪೇಪರ್ನಲ್ಲಿ ಓದಿಕೊಂಡೋರೆಲ್ಲಾ ಫೋನ್ ಮಾಡಿ ಕೇಳಿದ್ದೇ ಕೇಳಿದ್ದು... ಎರಡು ದಿನದಿಂದಾ ಇಂತವರಿಗೆಲ್ಲಾ ಉತ್ರಾ ಕೊಟ್ಟೂ ಕೊಟ್ಟೂ ನಮ್ಗೆ ಸಾಕಾಗಿ ಹೋಯ್ತು.... ನೋಡಿ ಮೇಡಂ ನಮ್ಮ ಕಂಪನಿಗೆ ಮುರಲೀಧರ್‌ರವರೇ ಓನರ್ರು... ಚೇರ್ಮನ್ನು... ಮ್ಯಾನೇಜಿಂಗ್ ಡೈರೆಕ್ಟ್ರು ಎಲ್ಲಾ ಅವರೇ... ದಯವಿಟ್ಟು ಅರ್ಥ ಮಾಡಿಕೊಳ್ಳಿ....." ಎಂದು ಒಂದೇ ಸಮನೇ ಗೋಗರೆತ ಶುರುವಿಟ್ಟುಕೊಂಡಿತು ಈ 'ಗೊಂಬೆ'.....

ನಮ್ಮ ಸಂಪಾದಕರು ಇದನ್ನೊಂದು ತಮಾಷೆಯೆಂಬಂತೆಯೇ ಕಿಚಾಯಿಸುತ್ತಾ ಆ 'ಗೊಂಬೆ'ಯನ್ನು ಮರುಪ್ರಶ್ನಿಸಿದರು. "ರೀ... ನಿಮ್ಮ ಮುರಲೀಧರರೇ ಅಂತ ನಾವೂ ಬರೆದಿಲ್ಲವೇನ್ರೀ... ಆದ್ರೆ ನಿಮ್ಮ ಕಂಪನಿಯ ಬೇನಾಮಿ ಓನರು, ಡಾ. ಸಿ.ಎನ್. ಮಂಜುನಾಥರೇ ಅಂತ ಇಡೀ ಪ್ರಪಂಚಾನೇ ಸಾರುತ್ತಲ್ರೀ....?"

"ನೋ ನೋ ಮೇಡಂ ಜನ ಹಾಗಂದುಕೊಂಡ್ರೂ ಅದು ತಪ್ಪು.... ತಾವೂ ಇಂತಹ ಗಾಳಿಮಾತನ್ನೇ ನಂಬಬಿಡೋದಾ?" ಅಂತ ವಾದಕ್ಕಿಳೀತು... 'ಗೊಂಬೆ'!

ಕಡೆಗೆ ಸಂಪಾದಕಿ ಒಂದು ಎಚ್ಚರಿಕೆಯ ಮಾತನ್ನುಸುರಿದರು: "ನೋಡಿ. ನೀವು ಹೀಗೇನೆ ಸುಖಾಸುಮ್ಮನೆ ವಾದಿಸ್ತಾ ಇದ್ರೆ ಡಾ. ಬಿ.ಜಿ. ಮುರಲೀಧರರ ಜಾತಕವನ್ನೇ ಜಾಲಾಡಬೇಕಾಗುತ್ತೆ ಗೊತ್ತಾ? ನಮ್ಮ ಹತ್ರ ಅವರ Native Place ಹಾಸನದಿಂದಾನೇ ಸಾಕಷ್ಟು ಮಾಹಿತಿ ಬಂದಿದೆ.... ಅದನ್ನೂ ನಾವು ಪ್ರಕಟಿಸ್ತೇವೆ...."

ಕೊಂಚ ವಿಚಲಿತಗೊಂಡ 'ಗೊಂಬೆ' ತಾನು ಬಂದ ಅಸಲೀ ಉದ್ದೇಶವನ್ನೇ ನಿಧಾನವಾಗಿ ಬಿಡಿಸಿಟ್ಟಿತು. "ಸಾರಿ, ಸಾರಿ, ಮೇಡಂ, ದಯವಿಟ್ಟು ಮಿಸ್ಟೇಕ್ ಮಾಡ್ಕೋಬೇಡಿ. ತಾವು ಒಪ್ಪಿದರೆ ಡಾ. ಮುರಲೀಧರ್ ಜತೆ ಅಡ್ಜಸ್ಟ್‌ಮೆಂಟ್ ಮಾಡ್ಕೊಬಹುದು ಮೇಡಂ....!!"


ಈ 'ಅಡ್ಜಸ್ಟ್‌ಮೆಂಟ್' ಎಂಬ ಮಾತು ಕೇಳಿಸ್ತಿದ್ದಂತೆಯೇ ನಮ್ಮ ಸಂಪಾದಕಿ ಚಾವಟಿ ಬೀಸಿಯೇಬಿಟ್ಟರು: "ರೀ, ಏನು ಮಾತಾಡ್ತಿದ್ದೀರಾ? ಬುದ್ಧಿಮೇಲೆ ಎಚ್ಚರ ಇದೆಯಾ ನಿಮಗೆ? ಇನ್ನೊಂದ್ಸಾರಿ ಹೀಗೆ ಅಡ್ಜಸ್ಟ್‌ಮೆಂಟು ಅದೂ ಇದೂಂತ ಅಪದ್ಧ ಮಾತಾಡಿದ್ರೆ, ನಿಮ್ಮನ್ನೇ expose ಮಾಡಬೇಕಾಗುತ್ತೆ ಹುಷಾ[illegible]...." ಗಡಗಡ ನಡುಗುತ್ತ ಬೆವರಿದ್ದ ಟ್ರಿನಿಟಿ 'ಗೊಂಬೆ' ಮರುಕ್ಷಣವೇ ಜಾಗ ಖಾಲಿ ಮಾಡಿತು!

-ರೇಶ್ಮೆ

ಟ್ರಿನಿಟಿ ಕಂಪನಿಯ ಕಣ್ಣಾಮುಚ್ಚಾಲೆ

ಜೆಡಿಎಸ್ ಪಿತಾಮಹ ದೇವೇಗೌಡರ ಅಳಿಯ ಹಾಗು ಜಯದೇವ ಸರ್ಕಾರಿ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ. ಮಂಜುನಾಥರ 'ಕನಸಿನ ಕೂಸು' ಟ್ರಿನಿಟಿ ಹೈಟೆಕ್ ಹಾಸ್ಪಿಟಲ್‌ನ ಸಂಸ್ಥಾಪಕ ಕಂಪನಿಯ ಮಾಹಿತಿ ಮಾಯಾಜಾಲ ಎಂತಹದ್ದು ಎಂಬುದಕ್ಕಿಲ್ಲಿ ಪುರಾವೆ ದಕ್ಕಿದೆ, ನೋಡಿ.....

ದಿನಾಂಕ 16.8.2004 ರಂದೇ, ಅಂದರೆ ಈಗ್ಗೆ ಎರಡು ವರ್ಷಗಳ ಹಿಂದೆಯೇ ನೊಂದಣಿ ಮಾಡಿಸಲಾದ ಟ್ರಿನಿಟಿ ಕಂಫರ್ಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಾರ್ಯನಿರ್ವಾಹಕ ಬಾಸ್‌ಗಳು ಕಂಪನಿ ರಿಜಿಸ್ಟ್ರಾರ್‌ರವರ ಕಚೇರಿಗೆ ಸತತವಾಗಿ ಎರಡು ಹಣಕಾಸು ವರ್ಷದಲ್ಲೂ ತಮ್ಮ ಆಸ್ತಿ-ಪಾಸ್ತಿ-ವಹಿವಾಟುಗಳ ವರದಿ ಸಲ್ಲಿಸಿಯೇ ಇಲ್ಲ.....



Gopalakrishnaraj H H

Company Secretary

Search Report on TRINITY COMFORTS PRIVATE LIMITED

CIN: U35101KA2004PTC034506

I have carried out the search of the documents of the above named Company as registered and available for inspection on 06/09/2006 at the office of Registrar of Companies, Karnataka, and Bangalore and hereby report that the following particulars in respect of the above named Company have been so registered.

Date of Incorporation : 16/08/2004

Registered office : NO. 27, Sri Rama Mandir Road, Basavanagudi, Bangalore – 560 004

Authorised capital : Rs. 1,00,00,000/- divided into 10,00,000 equity shares of Rs. 10/- each

Paid up Capital : Rs. 3,00,000/- divided into 30,000 equity shares of Rs. 10/- each

Directors

Sl. No.	Name	Date of appointment	Date of ceasing
1	B G Muralidhar	First Director	-
2	I A Nagaprakash	First Director	-
3	P Prasad	First Director	-

Shareholders

Sl. No.	Name	No. of shares
1	B G Muralidhar	10000
2	I A Nagaprakash	10000
3	P Prasad	10000
	TOTAL	30000

Place: Bangalore

Signature:

ಕೇವಲ ಆರಂಭದ ದಿನದಂದಷ್ಟೇ ಪ್ರಾರಂಭಿಕ ವಿವರಣೆ ಸಲ್ಲಿಸಿದ್ದ ಸದರಿ ಕಂಪನಿಯ ಮಾಲೀಕರು(?) ಅಥವಾ ಪಾಲುದಾರರು ಅದರಲ್ಲಿ ತನ್ನ ಒಟ್ಟು ಉದ್ದೇಶಿತ ಬಂಡವಾಳವನ್ನು(Authorised Capital) 1 ಕೋಟಿ ರೂ.ಗಳೆಂದೂ ಆದರೆ ಪ್ರತ್ಯಕ್ಷವಾಗಿ ತೊಡಗಿಸಲಾದ ಬಂಡವಾಳ (paid up capital) ಕೇವಲ 3 ಲಕ್ಷ ರೂಪಾಯಿಗಳೆಂದೂ ನಮೂದಿಸಿದ್ದರು...

ಅಂದರೆ ಇತ್ತೀಚೆಗೆ (ಆಗಸ್ಟ್ 16, 2006 ರಂದು) ತನ್ನ ವಾರ್ಷಿಕೋತ್ಸವ [illegible] ಅದ್ಧೂರಿಯಾಗಿ [illegible] ಸಪ್ತತಾರಾ ಹೋಟೆಲ್ಲಿನ [illegible] 3 ಕೋಟಿ 80 ಲಕ್ಷ ರೂ.ಗಳಿಗೆ ಖರೀದಿಸಿ ಅಲ್ಲಿ 125-ಬೆಡ್ ವಿನೂತನ ಹಾರ್ಟ್ ಹಾಸ್ಪಿಟಲ್ ಯೋಜನೆ ಹಮ್ಮಿಕೊಂಡಿರುವುದಾಗಿ ಸಾರಿದ ಈ 'ಟ್ರಿನಿಟಿ' ಕಂಪನಿಯ ಅಸಲಿ ಬಂಡವಾಳ ಕೇವಲ 3 ಲಕ್ಷ ರೂಪಾಯಿಗಳೇ?!

ಟ್ರಿನಿಟಿ ಕಂಫರ್ಟ್ ಕಂಪನಿಯ ನಿರ್ದೇಶಕರ ಪಟ್ಟಿಯಲ್ಲೂ ಕೇವಲ ಮೂರೇ ಮೂರು ಹೆಸರುಗಳನ್ನು ಮಾತ್ರವೇ ಕಂಪನಿ ರಿಜಿಸ್ಟ್ರಾರ್‌ರವರಿಗೆ ರವಾನಿಸಲಾಗಿದ್ದು ನೊಂದಣಿ ದಿನಾಂಕವಾದ 16.8.2004 ರ ನಂತರವೂ ಅಲ್ಲಿ ಬರೀ ಕೆಳಗಿನ ಮೂವರಷ್ಟೇ ಡೈರೆಕ್ಟರ್ ಸ್ಥಾನಗಳಲ್ಲಿ ಮುಂದುವರಿದಿದ್ದಾರೆಯೇ?


1. ಬಿ.ಜಿ. ಮುರಲೀಧರ್
2. ಐ.ಎ. ನಾಗಪ್ರಕಾಶ್
3. ಪಿ. ಪ್ರಸಾದ್

ಈ ಮೂವರನ್ನೂ "ಫಸ್ಟ್ ಡೈರೆಕ್ಟರ್" ಎಂದು ಸೂಚಿಸಿರುವ ಕಂಪನಿ ತದನಂತರ ಅದರ ಸೆಕೆಂಡ್, ಥರ್ಡ್, ಫೋರ್ಥ್ ಮುಂತಾಗಿ ಹೆಚ್ಚುವರಿ ಡೈರೆಕ್ಟರ್‌ಗಳನ್ನು ಸೇರಿಸಲಾಯಿತೇ ಇಲ್ಲವೆ ಎಂಬುದನ್ನು ಇದುವರೆಗೂ ಬಹಿರಂಗಪಡಿಸದಿರುವುದೂ ನಿಗೂಢವಾಗಿದೆಯಲ್ಲವೇ?

ಏನಿದರ ಒಳಗುಟ್ಟು? ಏನು ಬಂತು? ದೇವೇಗೌಡರ 'ಟ್ರಿನಿಟಿ'ಯ [illegible] ವಹಿವಾಟುಗಳೆಲ್ಲ ಇದೇ [illegible] ಮುಸುಕಿನ [illegible]??

ಛಾಪಾ ಕಾಗದ ಹಗರಣದ ರೂವಾರಿ ಅಬ್ದುಲ್ ಕರೀಂ ತೆಲಗಿಯ ಕಥೆಯನ್ನು ಇನ್ನೇನು ಜನರು ಮರೆತೇಬಿಟ್ಟು ಜನಾರ್ಧನ ರೆಡ್ಡಿಯ ಗಣಿ ಸೀಡಿಯ ಬಗ್ಗೆ ತಲೆ ಕೆಡಿಸಿಕೊಳ್ಳಲಾರಂಭಿಸಿದ್ದರು. ರೆಡ್ಡಿಯ ಸೀಡಿ ಬಾಂಬೂ ಠುಸ್ಸ್ ಆಗಿ ಜನರೂ ಆ ಬಗ್ಗೆ ಆಸಕ್ತಿ ಕಳೆದುಕೊಂಡಿರುವ ಸಮಯದಲ್ಲಿ ಧುತ್ತೆಂದು ಎರಗಿದೆ ಕರೀಂ ಲಾಲನ ಮಂಪರು ಪರೀಕ್ಷೆಯ (ನಾರ್ಕೊ ಅನಾಲಿಸಿಸ್) ಸೀಡಿ.

ಕಾಂಗ್ರೆಸ್ ಪಕ್ಷದ ಪ್ರಕಾರ, ಸೀಡಿ ಬಹಿರಂಗಗೊಳ್ಳಲು ಕಾರಣವೇ ಕುಮಾರಸ್ವಾಮಿ ಸರ್ಕಾರ. "ಗಣಿ ಬಾಂಬ್"ನಿಂದ ತತ್ತರಿಸಿರುವ ಕೋ-ಜಾ ಸರ್ಕಾರ, ಜನರ ದಾರಿ ತಪ್ಪಿಸುವ ದೃಷ್ಟಿಯಿಂದ ಈ "ತೆಲಗಿ ಸೀಡಿ ಬಾಂಬ್" ಎಸೆದು ಕಾಂಗ್ರೆಸ್ ಮುಖಂಡರನ್ನು ಇಕ್ಕಟ್ಟಿಗೆ ಸಿಲುಕಿಸಿದೆ ಎಂಬುದು. ಹೇಳಿಕೇಳಿ ವಿಧಿ ವಿಜ್ಞಾನ ಪ್ರಯೋಗಾಲಯ ರಾಜ್ಯ



ತೆಲಗಿ ಸೀಡಿ ನುಸುಳಿದ್ದು ಎಲ್ಲಿಂದ?

ಸರ್ಕಾರದ ನಿಯಂತ್ರಣದಲ್ಲಿರುವ ಇಲಾಖೆ. ಇದನ್ನು ಬಳಸಿಕೊಂಡಿರುವ ಕುಮಾರಸ್ವಾಮಿ ಈ ದಾಳ ಎಸೆದಿದ್ದಾರೆಂಬುದು ಕಾಂಗ್ರೆಸ್ಸಿಗರ ವಾದ.


ಆದರೆ ಸೀಡಿ ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಹೊರ ನುಸುಳಿ ಮಾಧ್ಯಮದ ಕೈಗೆ ಸಿಲುಕಿದ ಕಥೆಯ ಹಿಂದೆ ಬೇರೆ ರಹಸ್ಯವೇ ಅಡಗಿದೆ. 2003 ರಲ್ಲಿ ನಡೆದ ಈ ಮಂಪರು ಪರೀಕ್ಷೆಯ ಒಟ್ಟು 14 ಸೀಡಿಗಳನ್ನು ಮಹಾರಾಷ್ಟ್ರ ಪೊಲೀಸರು ಪೂನಾ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಒಂದೂವರೆ ತಿಂಗಳ ಹಿಂದೆ ಆ ಹದಿನಾಲ್ಕು-ಸೀಡಿಗಳಲ್ಲಿ 6 ಸೀಡಿಗಳು ನಾಪತ್ತೆಯಾಗಿರುವುದು ನ್ಯಾಯಾಲಯದ ಗಮನಕ್ಕೆ ಬಂದಿತು. ಈ ಬಗ್ಗೆ ತನಿಖೆ ನಡೆಯಿತೋ, ಬಿಟ್ಟಿತೋ ಗೊತ್ತಿಲ್ಲ. ಒಟ್ಟಲ್ಲಿ ಉಳಿದ ಸೀಡಿಗಳನ್ನು ಪೂನಾ ನ್ಯಾಯಾಧೀಶರು ಮುಂಬೈ ಹೈಕೋರ್ಟಿಗೆ ಸಲ್ಲಿಸಿದರು.

ಆ ನಂತರವೇ ತೆಲಗಿ ಪ್ರಕರಣದಲ್ಲಿ ಮಾಧ್ಯಮದ ಪ್ರವೇಶವಾಗಿದ್ದು. ಕಳೆದ ಆಗಸ್ಟ್ 15,16,17 ಮತ್ತು 18 ರಂದು 'ಉದಯ' ಟ.ವಿ.ಯಲ್ಲಿ ರಾತ್ರಿ 10 ಕ್ಕೆ ಪ್ರಸಾರವಾಗುವ ಪತ್ರಕರ್ತ ಬಾಲಕೃಷ್ಣ ಕಾಕತ್ಕರ್‌ರವರ 'ಕ್ರೈಂ ಸ್ಟೋರಿ' ಧಾರವಾಹಿಯಲ್ಲಿ ತೆಲಗಿಯ ಸಹಚರರಾದ ಇಲಿಯಾಸ್, ಬದ್ರುದ್ದೀನ್ ಮತ್ತು ತಮಿಳು ಶಿವರವರ ನಡುವೆ ನಡೆದ ಟೆಲಿಫೋನ್ ಸಂಭಾಷಣೆ ಪ್ರಸಾರವಾಯಿತು. ಇದು ಎರಡು ವರ್ಷದ ಹಿಂದೆ ತೆಲಗಿ ಜೈಲಿನಿಂದ ತನ್ನ ಸೆಲ್ ಫೋನ್ ಬಳಸಿ ತನ್ನ ಸಹಚರರೊಂದಿಗೆ ಮಾತನಾಡಿದ್ದನ್ನು ಪೊಲೀಸರು ರಹಸ್ಯವಾಗಿ ಟ್ಯಾಪ್ ಮಾಡಿದ (ಕದ್ದಾಲಿಕೆ) ಸಂಭಾಷಣೆ. ಈ ಸಂಭಾಷಣೆಯಲ್ಲಿ "ಮಾಜಿ ಸಚಿವ ರೋಷನ್‌ಬೇಗ್ ತೆಲಗಿಯನ್ನು ರಕ್ಷಿಸುವುದಾಗಿ ಭರವಸೆ ನೀಡಿದ್ದಾರೆ, ಅವರು ಈಗಾಗಲೇ ಈ ಸಂಬಂಧ ಸ್ಟಾಂಪಿಟ್ ಮುಖ್ಯಸ್ಥ ಐಪಿಎಸ್ ಅಧಿಕಾರಿ ಶ್ರೀಕುಮಾರ್ ರವರೊಂದಿಗೆ ಮಾತನಾಡಿದ್ದಾರೆಂದು" ಬದ್ರುದ್ದೀನ್ ತಿಳಿಸುತ್ತಾನೆ. ಆದರೆ ತೆಲಗಿ ಈ ಭರವಸೆಯನ್ನು ತಳ್ಳಿಹಾಕಿ "ಶ್ರೀಕುಮಾರ್, ರೋಷನ್ ಬೇಗ್ ಮಾತಿಗೆ ಬಗ್ಗುವವರಲ್ಲ, ಬೇರೆ ಯಾರನ್ನಾದರೂ ಸಂಪರ್ಕಿಸಿ" ಎಂದು ಹೇಳುತ್ತಾನೆ.

ಈ ಸಂಭಾಷಣೆಯ ಪ್ರಸಾರದ ಅಂತ್ಯದಲ್ಲಿ ಕಾಕತ್ಕರ್ ವೀಕ್ಷಕರಿಗೆ ಹೇಳುತ್ತಾರೆ; "ಇಲ್ಲಿಗೇ ಮುಗಿಯಿತು ತೆಲಗಿ ಕಥೆ ಎಂದು ಭಾವಿಸಬೇಡಿ ಇದಕ್ಕೂ ದೊಡ್ಡ ಬಾಂಬ್ ಸಿಡಿಯಲಿದೆ" ಎಂದು ಮುನ್ಸೂಚನೆ ನೀಡಿ ಅಂದಿನ ಕಾರ್ಯಕ್ರಮ ಮುಕ್ತಾಯಗೊಳಿಸುತ್ತಾರೆ.


ಇದಕ್ಕೂ ದೊಡ್ಡ ಬಾಂಬ್ ಎಂದರೆ ಯಾವುದು? ಅದೇ ತೆಲಗಿಯ ಮಂಪರು ಪರೀಕ್ಷೆಯ ಸೀಡಿ-ಅಂದರೆ ಆಗಸ್ಟ್ ತಿಂಗಳಲ್ಲೇ ಕಾಕತ್ಕರ್ ಕೈಯಲ್ಲಿ ತೆಲಗಿಯ ಸೀಡಿ ಇತ್ತು, ಆದರೂ ಅವರು ಅದನ್ನು ಪ್ರಸಾರ ಮಾಡಲಿಲ್ಲ, ಕಾರಣವೇನು?

ಒಂದು ಮೂಲದ ಪ್ರಕಾರ, ಕಾನೂನು ತಜ್ಞರ ಮತ್ತು ಉದಯ ಟ.ವಿ.ಯ ಆಡಳಿತದೊಂದಿಗೆ ಚರ್ಚಿಸಿದ ಕಾಕತ್ಕರ್, ಈ ಹಂತದಲ್ಲಿ ಛಾಪಾ ಹಗರಣ ತನಿಖೆಯ ಸೀಡಿ ಬಹಿರಂಗಗೊಳಿಸುವುದರಿಂದ ತನಿಖೆ ಮತ್ತು ನ್ಯಾಯಾಂಗ ವಿಚಾರಣೆಗೆ ದಕ್ಕೆಯಾಗಬಹುದೆಂಬ ಕಾರಣಕ್ಕೆ ಪ್ರಸಾರವನ್ನು ಮುಂದೂಡಿದರಂತೆ. ಒಮ್ಮೆ ವಿಚಾರಣೆ ಮುಗಿದು ತೀರ್ಪು ಹೊರಬಿದ್ದು ತನಿಖೆಯಲ್ಲಿ ಅಸಲಿ ಅಪರಾಧಿಗಳನ್ನು ಮುಚ್ಚಿಡುವ ಯತ್ನವನ್ನು ಮಾಡಿದ್ದಲ್ಲಿ ಈ ಸೀಡಿಯನ್ನು ಬಹಿರಂಗ ಪಡಿಸಿ ಜನರಿಗೆ ಸತ್ಯವೇನು ಎಂದು ತೋರಿಸೋಣ ಎಂದು ನಿರ್ಧರಿಸಿದ್ದರಂತೆ. ಅವರ ಈ ವಿಚಾರ ನಿಜವೇ ಆಗಿದ್ದಲ್ಲಿ ಸ್ವಾಗತ.



ಆದರೆ ಕಾಕತ್ಕರ್‌ಗೆ ಈ ಸೀಡಿಯನ್ನು ನೀಡಿದ ಮಾಹಿತಿದಾರನಿಗೆ(?) ಈ ವ್ಯವಧಾನವಿರಬೇಕಲ್ಲ, ಯಾವಾಗ ತೆಲಗಿ ಸೀಡಿ ನಿಗದಿತ ದಿನದಂದು ಉದಯ ಟಿವಿಯಲ್ಲಿ ಪ್ರಸಾರವಾಗಲಿಲ್ಲವೋ ಆತ ಈಟಿವಿಯ ದಿಕ್ಕು ಹಿಡಿದ. ಕಾಕತ್ಕರ್, "ಸೋಮವಾರ ಸಿಡಿಯಲಿದೆ ಇದಕ್ಕಿಂತ ದೊಡ್ಡ ಬಾಂಬ್" ಎಂದು ಸೂಚನೆ ನೀಡಿದ ದಿನದಿಂದ ಅವರ ಹೆಜ್ಜೆ ಗುರುತನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಈಟಿವಿ, ಈ ಅವಕಾಶವನ್ನು ಸರಿಯಾಗಿ ಬಳಸಿಕೊಂಡು ಮಾಹಿತಿದಾರನನ್ನು ಸೆಳೆದುಕೊಂಡಿತು.

ಆದರೆ ಮಾಹಿತಿದಾರ ಈಟಿವಿಯವರಿಗಿಂತಾ ಚಾಣಾಕ್ಷ. ಈತ ಅವರಿಗೆ ಇಡೀ ಸೀಡಿಯನ್ನು ಕೊಟ್ಟಿರಲಿಲ್ಲ. ಮಂಪರು ಪರೀಕ್ಷೆಯ ಕೆಲವು ತುಣುಕುಗಳನ್ನು ಮಾತ್ರವೇ ಮತ್ತೊಂದು ಸೀಡಿಗೆ ಮರುಮುದ್ರಿಸಿ ಕೊಟ್ಟು ಸಾಕಷ್ಟು ಭಕ್ಷೀಸು ಜೇಬಿಗಿಳಿಸಿದ್ದ. ಅದನ್ನೇ ಮಹಾಪ್ರಸಾದವೆಂದು ಪಡೆದ ಈಟಿವಿ "ನಮಗೆ ಮಾತ್ರ ವಿಶೇಷವಾಗಿ ಸಿಕ್ಕಿರುವ ತೆಲಗಿ ಸೀಡಿ" ಎಂದು ಭಾರಿ ಪ್ರಚಾರದೊಂದಿಗೆ ತನ್ನ ವಾರ್ತಾ ಸಮಯದಲ್ಲಿ ಕೇವಲ 5 ನಿಮಿಷ ತೆಲಗಿ ತುಣುಕನ್ನು ಪ್ರಸಾರ ಮಾಡಿತು. ಆಗ ನೋಡಿ ಆರಂಭವಾಯ್ತು ಉದಯ ಟಿವಿಯವರಿಗೆ ನವೆ. "ಅರೆರೆ ಓರಿಜಿನಲ್ ಸೀಡಿ ನಮ್ಮಹತ್ರ ಇದ್ರೂ ಪ್ರಸಾರ ಮಾಡ್ದೆ ಎಂಥಾ ತಪ್ ಮಾಡಿದ್ವಿ" ಅಂತ ಹಣೆಹಣೆ ಚಚ್ಚಿಕೊಳ್ಳಲಾರಂಭಿಸಿದ ಉದಯ ಟಿವಿಯ ಬೆಂಗಳೂರು ಮುಖ್ಯಸ್ಥ ಸೆಲ್ವಂ, ಕ್ರೈಂ ಸ್ಟೋರಿಯ ಕಾಕತ್ಕರ್ ಹಿಂದೆ ಬಿದ್ದರು. ಉದಯ ಟಿವಿಯ ಚೆನ್ನೈ ಹೆಡ್ ಆಫೀಸಿನಿಂದಲೂ ಸೆಲ್ವಂ ಮೇಲೆ ಒತ್ತಡ ಬೀಳಲಾರಂಭಿಸಿತು. ಆಗ ಹೊರಬಂತು ಕಾಕತ್ಕರ್ ಜೋಳಿಗೆಯಲ್ಲಿ ಅಡಗಿದ್ದ ತೆಲಗಿಯ ನಾಲ್ಕು ಕಂತಿನ ಸೀಡಿ.



ಸೀಡಿ ಎಲ್ಲಿಂದ ಹೊರ ನುಸುಳಿತು ಎಂಬುದು ಈಗ ದೊಡ್ಡ ಚರ್ಚೆಗೆ ಕಾರಣವಾಗಿದೆ. ಪಾಯಿಂಟ್‌ಗೆ ಬರೋಣ. ಈ ವಿಷಯಕ್ಕೆ ಬಂದರೆ "ನಮಗೆ ಮಾತ್ರ, ವಿಶೇಷವಾಗಿ ಸಿಕ್ಕ" ಎಂದು ಹೇಳಿಕೊಂಡ ಈಟಿವಿಯಿಂದ ಹಿಡಿದು "ನಮ್ಮ ಪತ್ರಿಕೆಗೆ ಮಾತ್ರ ಸಿಕ್ಕಿದೆ" ಎಂದು ಬರೆದುಕೊಂಡ "ವಿಜಯ ಕರ್ನಾಟಕ" ಪತ್ರಿಕೆಯವರೆಗೆ ಒಂದು ಕಥೆ ಹೇಳುತ್ತಾರೆ. ಅವರ ಪ್ರಕಾರ ಮಂಪರು ಪರೀಕ್ಷೆ ನಡೆಯುವಾಗ ಅಲ್ಲಿದ್ದುದು ಒಟ್ಟು ಮೂರು ಕ್ಯಾಮೆರಾ ಅಂತೆ. ಒಂದು ಸಿಬಿಐದು ಮತ್ತೊಂದು ವಿಧಿ ವಿಜ್ಞಾನ ಪ್ರಯೋಗಾಲಯದ್ದು ಇನ್ನೊಂದು ಯಾರದೂ? ಎಂಬುದು ನಿಗೂಢವಂತೆ. ಅಂದರೆ ಅದು ನಮ್ಮದೇ ರಹಸ್ಯ ಕ್ಯಾಮೆರಾ ಎಂದು ಇವರೆಲ್ಲರೂ ಸೂಚ್ಯವಾಗಿ ಹೇಳುವ ಕಥೆ.

ಆದರೆ ವಿಧಿವಿಜ್ಞಾನ ಪ್ರಯೋಗಾಲಯದ ಕಾರ್ಯ ವೈಖರಿ ಮತ್ತು ಮಂಪರು ಪರೀಕ್ಷೆ, ಪಾಲಿಗ್ರಾಫ್, ಬ್ರೈನ್ ಮ್ಯಾಪಿಂಗ್ ಇಂತಹವುಗಳ ಬಗ್ಗೆ ತಿಳಿದಿರುವ ಯಾವುದೇ ಪತ್ರಕರ್ತನಿಗೆ ತಿಳಿದಿದೆ, ಅಲ್ಲಿದ್ದಿದ್ದು ಒಂದೇ ಕ್ಯಾಮೆರಾ ಎಂದು. ಅದೇ ಕ್ಯಾಮೆರಾದಲ್ಲಿ ಶೂಟ್ ಮಾಡಿದ ಸೀಡಿಯೇ ಈಗ ಬಹಿರಂಗಗೊಂಡಿರುವುದು. ಇದು ಪೂನಾ ನ್ಯಾಯಾಲಯದಿಂದ ಕಳುವಾದ ಆರು ಸೀಡಿಗಳ ಮರು ಮುದ್ರಣವಾಗಿರುವ ಸಂಭವವೇ ಹೆಚ್ಚು. ಒಂದಂತೂ ನಿಜ. ತೆಲಗಿ ಮಂಪರು ಪರೀಕ್ಷೆಯನ್ನು ಯಾ[illegible] ಪತ್ರಕರ್ತರನೂ ರಹಸ್ಯ ಕ್ಯಾಮರ ಮೂಲಕ ಚಿತ್ರೀಕರಿಸಿ[illegible]

'ಕ್ರೈಂ ಸ್ಟೋರಿ'ಯಲ್ಲಿ ತೆಲಗಿಯ ಸಂಭಾಷಣೆ ಪ್ರಸಾರವಾಗುವ ಮುನ್ನವೇ ಸಿ.ಎನ್.ಎನ್. ಐ.ಬಿ.ಎನ್. ಚಾನೆಲ್ ಅನಿಲ್ ಛಾಟೆ ಮತ್ತು ತೆಲಗಿಯ ನಡುವಣ ಟೆಲಿಫೋನ್ ಸಂಭಾಷಣೆಯನ್ನು ಪ್ರಸಾರ ಮಾಡಿತ್ತು, ಆಗ ಧ್ವನಿ ಮುದ್ರಿತ ಸೀಡಿಯನ್ನು ಸಿಎನ್‌ಎನ್ ಒಬ್ಬ ಮಾಹಿತಿದಾರನಿಂದ 2[illegible] ಲಕ್ಷಕ್ಕೆ ಕೊಂಡಿತ್ತೆಂದು ಪತ್ರಕರ್ತರ ವಲಯದಲ್ಲಿ ಸು[illegible] ಹಬ್ಬಿತ್ತು. ಹೀಗೆ ಮಾಹಿತಿ ಮತ್ತು ಸುದ್ದಿ ಕೊಳ್ಳುವುದು ಪತ್ರಿಕೋದ್ಯಮಕ್ಕೆ ಹೊಸದೇನಲ್ಲ (ಬಾಕ್ಸ್ ನೋಡಿ). ಈ[illegible] ಇದೇ ಕಥೆ ತೆಲಗಿ ಸೀಡಿಗೂ ಅನ್ವಯ ವಾಗುತ್ತದೆ.

ಕಡೆಯದಾಗಿ ಒಂದು ಮಾತು. ಸೀಡಿ ನುಸುಳಿ ಬಹಿರಂಗವಾದ ಬಗ್ಗೆ ತನಿಖೆ ನಡೆಸಲು ಹೊರಟಿರುವ ಸಿಬಿಐನವರು ಸೀಡಿಯನ್ನು ಪ್ರಸಾರ ಮಾಡಿದ ಚಾನೆಲ್‌ನವರು, ಪ್ರಕಟಿಸಿದ ಪತ್ರಿಕೆಯವರು ಮ[illegible] ಪತ್ರಕರ್ತರ ಹಿಂದೆ ಬೀಳುವುದು ಬಿಟ್ಟು ಆರು ಸೀಡಿಗಳು ಕಾಣೆಯಾದ ಪೂನಾ ನ್ಯಾಯಾಲಯದಿಂದ ಹುಡುಕಾಟ ಆರಂಭಿಸಿ ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯದ ರಕ್ಷಣಾ ವ್ಯವಸ್ಥೆ ಹೇಗಿದೆ ಎಂಬಲ್ಲಿಗೆ ತಮ್ಮ ತನಿಖೆ ಅಂತ್ಯಗೊಳಿಸಿದರೆ ಸೀಡಿ ನುಸುಳಿದ ಕಿಂಡಿ ಸಿಗುತ್ತದೆ.


ಇದೇನೇ ಇರಲಿ ಕಂಡಕಂಡವರಿಗೆ ಸೀಡಿ ಮಾರಿ ಹಣ ಮಾಡಿದ ಆ ಮಾಹಿತಿದಾರನೇ ನಿಜವಾದ 'ಸ್ಕೂಪ್' ವರದಿಗಾರ!

-ಎಂ.ಎಸ್. ಸತೀಶ್

ಈ ಮಂಪರು ಪರೀಕ್ಷೆಯ ಇತಿ-ಮಿತಿಗಳೇನು?

ಮೂರು ಗ್ರಾಂ ಸೋಡಿಯಂ ಪೆಂಥಾಜೋಲ್ ಪುಡಿಯನ್ನು 3000 ಮಿಲಿಲೀಟರ್ ಶುದ್ಧ ನೀರಿನೊಂದಿಗೆ ಬೆರೆಸಿ ಪೊಟಾಷಿಯಂ ಡೆಕ್ಸ್‌ಟ್ರೋಸ್ ಮಿಶ್ರಣದೊಂದಿಗೆ ನಿಧಾನಗತಿಯಲ್ಲಿ ಚುಚ್ಚುಮದ್ದಿನ ಮೂಲಕ ನೀಡುವುದರೊಂದಿಗೆ ನಾರ್ಕೊ ಅನಾಲಿಸಿಸ್ ಆರಂಭವಾಗುತ್ತದೆ.

ಈ ಚುಚ್ಚುಮದ್ದಿನ ಪ್ರಭಾವದಿಂದ ಅರೆಪ್ರಜ್ಞಾವಸ್ಥೆ ತಲುಪುವ; ತನಿಖೆಗೆ ಒಳಪಡುವ ವ್ಯಕ್ತಿಯು ಆಲೋಚನಾ ಶಕ್ತಿ (ಅಂದರೆ ಕಲ್ಪನೆ ಅಥವಾ ಸುಳ್ಳು ಹೇಳಬೇಕೆಂಬ ಮನಸ್ಥಿತಿ) ಕಳೆದುಕೊಂಡು, ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ನೀಡುತ್ತಾನೆಂಬುದು ತಜ್ಞರ ವಿವರಣೆ. ಅದೇ ಉಸುರಿನಲ್ಲಿ, ಪರೀಕ್ಷೆಗೆ ಒಳಪಡುವ ವ್ಯಕ್ತಿಯ ಇಚ್ಛಾಶಕ್ತಿ (will power) ಪ್ರಬಲವಾಗಿದ್ದು ಆತ ಕಹಿಸತ್ಯವನ್ನು ಹೇಳಲೇಬಾರದೆಂದು ಅಥವಾ ತನಿಖಾಧಿಕಾರಿಗಳ ದಿಕ್ಕು ತಪ್ಪಿಸಬೇಕೆಂದು ನಿರ್ಧರಿಸಿದ್ದರೆ ಏನೂ ಮಾಡುವಂತಿಲ್ಲ ಎಂದು ಮತ್ತೊಂದು ವ್ಯಾಖ್ಯಾನವನ್ನು ನೀಡುತ್ತಾರೆ.



ಹಾಗಾದರೆ ಕರೀಂ ತೆಲಗಿಯ ಪರೀಕ್ಷೆ ಸಂದರ್ಭದಲ್ಲಿ ಹೊರಬಂದ ವಿವರಗಳೆಷ್ಟು ನಿಜ? ಅವನ ಮಾನಸಿಕ ಸ್ಥಿತಿ ಹೇಗಿತ್ತು? ಸೀಡಿಯನ್ನು ನೋಡಿದ ಯಾರೇ ಬೇಕಾದರೂ ಹೇಳಬಹುದು. ತೆಲಗಿ ತನಗೆ ಬೇಕಾದ ರಹಸ್ಯಗಳನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟು, ತನ್ನ ಜೀವಕ್ಕೆ ಬೆದರಿಕೆ ಇದೆ ಎಂದು ಹೇಳುತ್ತಾನೆ. ಆದರೆ ಯಾರಿಂದ ಎಂದು ಹೇಳಲು ನಿರಾಕರಿಸುತ್ತಾ "That is my secret" ಎಂದು ಉಡಾಫೆ ಮಾಡುತ್ತಾನೆ. "I have helped many politicians, inturn they have helped me, why should I name them" ಎಂದು ಅವರನ್ನೆಲ್ಲಾ ಮುಚ್ಚಿಟ್ಟುಕೊಳ್ಳುತ್ತಾನೆ ಎಂದರೆ ಮಂಪರು ಪರೀಕ್ಷೆಯ ಉದ್ದೇಶವಾದರೂ ಎಲ್ಲಿ ಈಡೇರಿತು?




ಇನ್ನು ಜನವರಿ 6, 2004 ರಲ್ಲಿ ತೆಲಗಿಯ ಸಹಚರ ಮೊಹಮದ್ ಆಸಿಫ್ ಎಂಬಾತನ ಪಾಲಿಗ್ರಾಫ್ ಪರೀಕ್ಷೆ ನಡೆಸಿದಾಗ, ಆತ ನೀಡಿದ ಹೇಳಿಕೆಯಲ್ಲಿ "ತೆಲಗಿಯನ್ನು ನೋಡಲು ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮತ್ತು ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಜೈಲಿಗೆ ಬಂದಿದ್ದರು. ಅವರಿಬ್ಬರು ಜೈಲಿನ ಕೊಠಡಿಯಲ್ಲಿ ತೆಲಗಿಯೊಂದಿಗೆ ಬಹಳ ಕಾಲ ಮಾತಾನಾಡಿದರು" ಎಂದು ಹೇಳಿಕೆ ನೀಡುತ್ತಾನೆ. ಒಬ್ಬ ಖೈದಿಯನ್ನು ನೋಡಲು ರಾಜ್ಯದ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಜೈಲಿಗೆ ಬರುವ ಅವಶ್ಯಕತೆ ಇದೆಯೆಂದು ಭಾವಿಸುವುದಾದರೆ, ಅವರಿರುವ ಜಾಗಕ್ಕೇ ತೆಲಗಿಯನ್ನು ಕರೆಸಿಕೊಳ್ಳಲು ಸಾಧ್ಯವಿರಲಿಲ್ಲವೆ?

ಇದೆಲ್ಲಾ ಹೋಗಲಿ ಎಂದರೆ ವಿಧಿ ವಿಜ್ಞಾನ ಪ್ರಯೋಗಾಲಯದ ಸಹಾಯಕ ನಿರ್ದೇಶಕಿ ಡಾ. ಮಾಲಿನಿ ಈ ವರದಿಯ ಕೊನೆಯಲ್ಲಿ ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸುತ್ತಾರೆ. "ಪಾಲಿಗ್ರಾಫ್ ಪರೀಕ್ಷೆಯಲ್ಲಿ ಮೊಹಮದ್ ಆಸಿಫ್ ಸುಳ್ಳು ಹೇಳುತ್ತಿರುವ ಅಂಶಗಳು ಗುರುತಿಸಲ್ಪಟ್ಟವು" ಎಂದು (changes were noticed in the polygraph test indicating the signs of deception). ಈ ಪರೀಕ್ಷೆಗಳೆಲ್ಲಾ ಹೀಗಾದರೆ ಇದನ್ನು ನಂಬುವುದಾದರೂ ಹೇಗೆ?

ಮಾಹಿತಿ ಪಡೆದುಕೊಳ್ಳುವುದು ಹೊಸದೇನಲ್ಲ

ತೆಲಗಿಯ ಮಂಪರು ಪರೀಕ್ಷೆ ಸೀಡಿಯನ್ನು ಅಜ್ಞಾತ ಮಾಹಿತಿದಾರನೊಬ್ಬ ಮಾರಿದ್ದೂ ಹೌದು. ಅದನ್ನು ಮಾಧ್ಯಮದವರು ಕೊಂಡಿದ್ದೂ ಹೌದು. ಆನಂತರ ಅದು ಕಳ್ಳೆಪುರಿಯಂತೆ ಹಾದಿ ಬೀದಿಯಲ್ಲಿ ಮಾರಾಟವಾಗಿ, ಎಲ್ಲರೂ ಅದು ನಮ್ಮದೇ ಕಾಪಿರೈಟ್ ಎಂದು ರೈಲು ಬಿಡಲು ಆರಂಭಿಸಿದ್ದು ಈಗ ಇತಿಹಾಸ.

ಹಾಗಂತ ಈ ಮಾಹಿತಿ ಕೊಡು-ಕೊಳ್ಳು ವ್ಯವಹಾರ ಪತ್ರಿಕೋದ್ಯಮಕ್ಕೇನು ಹೊಸದಲ್ಲ, ಕೆಲವು ಬಾರಿ ಕದಿಯುವುದೂ ಉಂಟು. ನರಹಂತಕ ವೀರಪ್ಪನ್ ಮತ್ತವನ ತಂಡದವರ ಸಮಗ್ರ ಛಾಯ ಚಿತ್ರಗಳನ್ನು ಪ್ರಥಮ ಬಾರಿಗೆ ಸೆರೆಹಿಡಿದವರು ತಮಿಳ್ನಾಡಿನ ಶಿವಸುಬ್ರಮಣ್ಯಂ ಎಂಬ ಅರೆಕಾಲಿಕ ಛಾಯಾಗ್ರಾಹಕ. ಇದನ್ನು ಖರೀದಿಸಿದವರು 'ಇಂಡಿಯಾ ಟುಡೆ' ಮ್ಯಾಗ್‌ಜೀನ್‌ನವರು. ಇವರದು ಹಣದ ಜೊತೆಗೆ ಮತ್ತೊಂದು ಕಂಡೀಷನ್ ಯಾವುದೆಂದರೆ ವರದಿ ಇಂಡಿಯಾ ಟುಡೆಯ ಹಿರಿಯ ವರದಿಗಾರ ರಾಜ್ ಚೆಂಗಪ್ಪ ಮತ್ತು ಛಾಯಾಗ್ರಹಣ ಸ್ಟಾಫ್ ಫೋಟೋಗ್ರಾಫರ್ ಶಿವಸುಬ್ರಮ್ಹ ಎಂದು ಪ್ರಕಟಿಸುವುದು.



ಅದರ ಅರ್ಥ ಇಷ್ಟೇ. ವೀರಪ್ಪನ್ 'ಸೆರೆ' ಹಿಡಿದ ಇಡೀ ಕ್ರೆಡಿಟ್ಟು 'ಇಂಡಿಯಾ ಟುಡೇ' ಗುಂಪಿಗೆ ಸೇರಬೇಕು ಅಷ್ಟೇ. ಸರಿ ಒಪ್ಪಂದವಾಯ್ತು, ವರದಿ ಪ್ರಕಟವೂ ಆಯ್ತು, ಆದರೆ ಪತ್ರಿಕೋದ್ಯಮದ ಅನಾನುಭವಿ ಶಿವಸುಬ್ರಮಣ್ಯ ಒಂದು ಚಿಕ್ಕ ತಪ್ಪು ಮಾಡಿದ. ಇದೇ ಛಾಯಾ ಚಿತ್ರಗಳ ನೆಗೆಟಿವ್‌ಗಳನ್ನು 'ನಕ್ಕೀರನ್' ಗೋಪಾಲನ್‌ಗೆ ಮಾರಿಬಿಟ್ಟಿದ್ದ. ಆದರೆ ಗೋಪಾಲನ್ ಕೊಟ್ಟಿದ್ದ ಪುಡಿಗಾಸು ತೃಪ್ತಿಯಾಗದೆ "ಇಂಡಿಯಾ ಟುಡೇ" ಬಾಗಿಲಿಗೆ ಬಂದಿದ್ದ.

ಇದು ಗೊತ್ತಿಲ್ಲದೆ ಪ್ರಕಟಿಸಿದ 'ಇಂಡಿಯಾ ಟುಡೇ'ಯವರು, ನಂತರ 'ನಕ್ಕೀರನ್' ಗೋಪಾಲ್‌ನಿಂದ ಕಾಪಿರೈಟ್ ಬೆದರಿಕೆ ಎದುರಿಸಿ ಅವನಿಗೆ ಅಷ್ಟೋ ಇಷ್ಟೋ ಕೊಟ್ಟು ಬಚಾವ್ ಆಗಬೇಕಾಯ್ತು.

ರಾಜೀವ್‌ಗಾಂಧಿ ಹತ್ಯೆ ಆರೋಪಿಯಾಗಿದ್ದ ಎಲ್‌ಟಿಟಿಇ ರಂಗನಾಥ್ ಜೈಲಿನಿಂದ ಬಿಡುಗಡೆಯಾಗಿ ಬಂದನಂತರ ಆತನ ಸಂದರ್ಶನಕ್ಕಾಗಿ ವಾರ ಪತ್ರಿಕೆಯೊಂದು ಅವನಿಗೆ 25 ಸಾವಿರ ನೀಡಿತ್ತು, ಇನ್ನು ಪ್ರಸಾರವೇ ಆರಂಭವಾಗದ ಚಾನೆಲ್ ಒಂದು ಈ ಕರೀಂ ತೆಲಗಿಯ ಸಿಡಿಯನ್ನು 40 ಸಾವಿರ ಕೊಂಡಿದೆಯೆಂದು ಊಹಿಸಿ.

ಮಾಹಿತಿಗಾಗಿ 'ಎಲ್ಲ' ಪಾರ್ಟಿಗಳ ಕಾಮನ್ ಕಾಫಿಯಿಂದ ಹಿಡಿದು ಅವರ ಪತ್ರಿಕೆಯ ಪ್ರಸಾರ ಮತ್ತು ಅಂತಸ್ತಿಗನುಗುಣವಾಗಿ ಈ ಕೊಡು-ಕೊಳ್ಳು ಸಂಬಂಧಗಳೇರ್ಪಡುತ್ತದೆ.

ರೆಡ್ಡಿ ಸೀಡಿ V/s ತೆಲಗಿ ಸೀಡಿ

ತೆಲಗಿ ಸೀಡಿಯ ಹಿಂದೆ ಚೆಡ್ಡಿಗಳು

ದೇಶ-ವಿದೇಶಗಳ ಬ್ಯಾಂಕುಗಳ ಮೇಲೆ ನನಗೆ ನಂಬಿಕೆಯಿಲ್ಲ; ಅದಕ್ಕೇ ಪೊಲೀಸರ ಬಳಿ ಎರಡು ಸಾವಿರ ಕೋಟಿ ರೂಪಾಯಿ ಕೊಟ್ಟು ಮಡಗಿದ್ದೇನೆ!

ಇದು ನಕಲಿ ಛಾಪಾ ಖದೀಮ ಕರೀಂ ಲಾಲಾ ತೆಲಗಿ ತನ್ನ ಮಂಪರು ಪರೀಕ್ಷೆಯಲ್ಲಿ ಬಾಯಿಬಿಟ್ಟ ಪರಮ ಸತ್ಯ!

ಅದರ ಸತ್ಯಾಸತ್ಯತೆ ಹೇಗಿದೆಯೆಂದರೆ: ಹಾಗೆ ಪೊಲೀಸರನ್ನು ನಂಬಿ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟು ಮಡಗಿದೆನೆನ್ನುವ ತೆಲಗಿ 'ನಿನಗೆ ಯಾರಿಂದ ಜೀವ ಬೆದರಿಕೆಯಿದೆ?' ಎಂಬ ಮತ್ತೊಂದು ಪ್ರಶ್ನೆಗೆ 'ಪೊಲೀಸರು ಮತ್ತು ರಾಜಕಾರಣಿಗಳು!' ಎನ್ನುತ್ತಾನೆ. ಅವರ್ಯಾರು? ಎಂದು ಕೇಳಿದರೆ 'ಆಲ್ ಮೋಸ್ಟ್ ಆಲ್.....!' ಎಂದುಬಿಡುತ್ತಾನೆ.

ಬ್ಯಾಂಕುಗಳನ್ನು ನಂಬದವನು ಪೊಲೀಸರನ್ನು ನಂಬುತ್ತಾನೆ. ಅವರ ಬಳಿ ಸಾವಿರಾರು ಕೋಟಿ ರೂಪಾಯಿ ಕೊಟ್ಟು ಮಡಗುತ್ತಾನೆ. ಮತ್ತೆ ಈಗ ಅವರಿಂದಲೇ ಪ್ರಾಣ ಬೆದರಿಕೆ ಇದೆ ಎನ್ನುತ್ತಾನೆ. ಯಾವ ರಾಜಕಾರಣಿಗಳಿಂದ ಜೀವ ಬೆದರಿಕೆಯಿದೆ ಎಂದರೆ ಅದಕ್ಕೂ ಆಲ್‌ಮೋಸ್ಟ್ ಆಲ್ ಎಂಬ ಉತ್ತರ ಕೊಡುತ್ತಾನೆ. ಇದೇ ಸೆಪ್ಟೆಂಬರ್ ಐದರಂದು ಸ್ಫೋಟಗೊಂಡ ತೆಲಗಿ ಸೀಡಿಯ ವಿಚಿತ್ರವಿದು.


ಸಂಗ್ರಾಮ್ ಸಿಂಗ್


ಇದನ್ನು ಮೊದಲು ಬಹಿರಂಗ ಪಡಿಸಿದ್ದು ಈಟೀವಿ. ಬೆನ್ನಲ್ಲೇ ವಿಜಯ್ ಟೈಮ್ಸ್ ಪ್ರಕಟಿಸುತ್ತದೆ. ಸೆಪ್ಟೆಂಬರ್ ಏಳರ ಹೊತ್ತಿಗೆ ಕರ್ನಾಟಕದ ಬಹುತೇಕ ಪತ್ರಿಕೆಗಳೂ, ರಾಷ್ಟ್ರಮಟ್ಟದ ಟೀವಿ ಚಾನಲ್ಲುಗಳೂ ಚಿದಂಬರ ರಹಸ್ಯವನ್ನೇ ಭೇದಿಸಿದಂತೆ ಸುದ್ದಿ ಚಚ್ಚುತ್ತವೆ. ಪ್ರಶ್ನೆಯೆಂದರೆ ಇಲ್ಲಿ ತೆಲಗಿಯ ಮಂಪರು ಪರೀಕ್ಷೆಯ ಸೀಡಿ ಮಾಧ್ಯಮಗಳಿಗೆ ಸಿಕ್ಕಿದ್ದು ಬಿಟ್ಟರೆ, ಆತನ ಹೇಳಿಕೆಗಳಲ್ಲಾಗಲಿ, ನಶಾಭರಿತನಾಗಿ ಆತ ಬಾಯಿಬಿಟ್ಟ ವಿವರಗಳಲ್ಲಾಗಲಿ ಯಾರಿಗೂ ಗೊತ್ತಿಲ್ಲದ ಹೊಸದೇನಿತ್ತು?

ಅಷ್ಟಕ್ಕೂ ಆತನ ಮಂಪರು ಪರೀಕ್ಷೆಯ ಸೀಡಿ ಬಯಲಾಗಿದ್ದು ಹೇಗೆ ಮತ್ತು ಇದೇ ಸಂದರ್ಭದಲ್ಲಿ ಏಕೆ ಹೊರಬಿತ್ತು?


ಪ್ರಶ್ನೆ ಹುಟ್ಟಿಕೊಳ್ಳುವುದೇ ಇಲ್ಲಿ. ಅದು ಹೆಚ್ಚೂಕಮ್ಮಿ ಎರಡೂವರೆ ವರ್ಷಗಳಷ್ಟು ಹಳೆಯದಾದ ಸೀಡಿ. ತೆಲಗಿಯ ಮಂಪರು ಪರೀಕ್ಷೆಗೆ ಅನುಮತಿ ಕೋರಿ ಸ್ಟ್ಯಾಂಪಿಟ್ ಎಸಿಪಿ ಗಣಪತಿಯವರು ಬೆಂಗಳೂರಿನ 35 ನೇ ಅಡಿಷನಲ್ ಸೆಷನ್ ಸ್ಪೆಷಲ್ ಕೋರ್ಟಿಗೆ ಮನವಿ ಸಲ್ಲಿಸಿದ್ದು 2004 ರ ಜನವರಿ ಇಪ್ಪತ್ತೇಳರಂದು. ಆಗ ಸ್ಟ್ಯಾಂಪಿಟ್ ಮುಖ್ಯಸ್ಥರಾಗಿದ್ದು ಹಿರಿಯ ಐಪಿಎಸ್ ಅಧಿಕಾರಿ ಶ್ರೀಕುಮಾರ್. ಸದ್ಯ ಬೆಳಗಾವಿಯ ಅಡಿಷನಲ್ ಎಸ್ಪಿಯಾಗಿರುವ ಎಸ್.ಕೆ. ಹೆಗಡೆ, ಆಗ ಎಸಿಪಿಯಾಗಿದ್ದ ಎಂ.ಕೆ. ಗಣಪತಿ ಮತ್ತು ಹಾಲಿ ಬಳ್ಳಾರಿಯಲ್ಲಿ ಇನ್ಸ್‌ಪೆಕ್ಟರ್ ಆಗಿರುವ ಬದ್ರಿನಾಥ್ ಮುಂತಾದ ದಕ್ಷ ಪೊಲೀಸ್ ಅಧಿಕಾರಿಗಳ ಹಿಂಡೇ ಸ್ಟ್ಯಾಂಪಿಟ್ ತನಿಖಾ ತಂಡದಲ್ಲಿತ್ತು. 2004 ರ ಫೆಬ್ರವರಿಯಲ್ಲಿ ಮಡಿವಾಳದ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ತೆಲಗಿಯ ಮಂಪರು ಪರೀಕ್ಷೆ ನಡೆಯಿತು. ಅದು ಎರಡು ಹಂತದ ಪರೀಕ್ಷೆ.


ಪ್ರಾರಂಭದಲ್ಲಿ ಒಂದು ಸುತ್ತಿನ ಡೋಸೇಜ್ ಕೊಟ್ಟು ಪ್ರಶ್ನಾವಳಿ ಮಾಡಲಾಗುತ್ತದೆ. ಅದಾಗಿ ಎರಡು ಗಂಟೆಯ ನಂತರ ಮತ್ತೊಂದು ಸುತ್ತಿನ ವಿಚಾರಣೆ ನಡೆಯುತ್ತದೆ. ಆಗ ಕೊಂಚ ಅಧಿಕ ಪ್ರಮಾಣದ ಔಷಧಿ ಕೊಟ್ಟಿರುತ್ತಾರೆ. ಕುಡುಕನೊಬ್ಬ ಚಿತ್ತಾಗುವಷ್ಟು ಕುಡಿದಾಗ ಎಂಥಾ ಮನಸ್ಥಿತಿ ಮುಟ್ಟುತ್ತಾನೋ ಅಂಥದ್ದೇ ಸ್ಥಿತಿಯದು. ಈಗ ಬಿಡುಗಡೆಯಾಗಿರುವ ಸೀಡಿಯಿದೆಯಲ್ಲ; ಅದು ಆತನ ಮೊದಲ ಹಂತದ ಮತ್ತು ಎರಡನೇ ಹಂತದ ಪರೀಕ್ಷೆಗಳಲ್ಲಿ ಬಾಯಿಬಿಟ್ಟ ವಿವರಗಳ ಆಯ್ದ ಭಾಗಗಳ ಸಂಗ್ರಹ ರೂಪ.

ಇಂಥ ಎರಡೂ ಸೀಡಿಗಳನ್ನು ತನಿಖೆಯ ಉದ್ದೇಶಕ್ಕೆಂದು ಆಗಿನ ಸ್ಟ್ಯಾಂಪಿಟ್ ಮುಖ್ಯಸ್ಥ ಶ್ರೀಕುಮಾರ್ ಮಾಡಿಟ್ಟುಕೊಂಡಿದ್ದರು. ಅದನ್ನು ಆಧರಿಸಿಯೇ ಮಂತ್ರಿ ರೋಷನ್‌ಬೇಗ್ ತಮ್ಮ ರೆಹಾನ್ ಬೇಗ್, ಎಸಿಪಿ ಸಂಗ್ರಾಂಸಿಂಗ್, ಜೈಲು ಸೂಪರಿಂಟೆಂಡೆಂಟ್ ಜಯಸಿಂಹ, ಜೈಲರ್ ನಂಜಪ್ಪ ಮುಂತಾದವರನ್ನು ಬಂಧಿಸಿ ಜೈಲಿಗೆ ಹಾಕಿದ್ದರು. 2004 ರ ಏಪ್ರಿಲ್ ತಿಂಗಳಲ್ಲಿ ಇಡೀ ತೆಲಗಿ ಪ್ರಕರಣವನ್ನು ಸಿಬಿಐಗೆ ವಹಿಸಿಕೊಟ್ಟಾಗ ಆತನ ಪಾಲಿಗ್ರಾಫ್ ಪರೀಕ್ಷಾ ವರದಿ, ಮಂಪರು ಪರೀಕ್ಷೆಯ ಸೀಡಿಗಳು, ಆತನ ಸಹಚರರ ಹೇಳಿಕೆಗಳು, ಕೇಸಿಗೆ ಸಂಬಂಧಪಟ್ಟ ಸಾಕ್ಷ್ಯಾಧಾರಗಳೆಲ್ಲವನ್ನೂ ಸಿಬಿಐ ವಶಕ್ಕೆ ಶ್ರೀಕುಮಾರ್ ವಹಿಸಿಕೊಟ್ಟರು. ಅಲ್ಲಿಗೆ ಎಸ್ಸೆಮ್ ಕೃಷ್ಣರೇ ರಚಿಸಿದ್ದ ಸ್ಟ್ಯಾಂಪಿಟ್ ತನಿಖಾ ತಂಡ ಬರಖಾಸ್ತಾಗಿ ಇಡೀ ಪ್ರಕರಣವನ್ನು ಸಿಬಿಐ ತನಿಖೆಗೆತ್ತಿಕೊಂಡಿತ್ತು. ತೆಲಗಿ ವಿರುದ್ಧ ಕರ್ನಾಟಕ ಪೊಲೀಸರು ಹೂಡಿದ್ದ ಹತ್ತೂ ಕೇಸುಗಳಿಗೆ ಸಿಬಿಐ ತನ್ನದೇ ಆದ ಚಾರ್ಜ್ ಷೀಟನ್ನೂ ಸಲ್ಲಿಸಿತು.


ತೆಲಗಿಯನ್ನು ಮಂಪರು ಪರೀಕ್ಷೆಗೆ ಒಳಪಡಿಸಿರುವ ದೃಶ್ಯ

ಈಗ ತೆಲಗಿ ವಿರುದ್ಧದ ಬಹುತೇಕ ಕೇಸುಗಳೆಲ್ಲ ಕೋರ್ಟಿನಲ್ಲಿವೆ. ಕೆಲ ಪ್ರಕರಣಗಳಂತೂ ಮುಕ್ತಾಯ ಹಂತದಲ್ಲಿವೆ. ಸಿಬಿಐ-ಪೊಲೀಸ್ ಇತ್ಯಾದಿ ತನಿಖೆಗಳೆಲ್ಲ ಮುಗಿದು ಯಾವುದೇ ಕಾಲವಾಗಿದೆ. ಇಂಥಾ ಸ್ಥಿತಿಯಲ್ಲಿ ಕೋರ್ಟಿನ ಕಣ್ಣನ್ನೂ ತಪ್ಪಿಸಿ ಸಿಬಿಐ ವಶದಲ್ಲಿದ್ದ ಸೀಡಿ ಹೇಗೆ ಬೆಂಗಳೂರಿನ ಪತ್ರಕರ್ತರ ಕೈ ಸೇರಿತು? ಮತ್ತು ಈಗಲೇ ಏಕೆ ಹೊರಬಿತ್ತು?


ಎಸಿಪಿ ಬಾವಾ


ರೋಹಿನ್ ಬೇಗ್

ಇದು ಚಿದಂಬರ ರಹಸ್ಯವೇನಲ್ಲ. ಯಾವತ್ತು ಜನಾರ್ಧನ ರೆಡ್ಡಿಯ 'ಗಣಿ ಲಂಚದ ಸೀಡಿ' ದೇಶಾದ್ಯಂತ ಗುಲ್ಲಾಯಿತೋ ಅದರ ವಿರುದ್ಧ ಕಾಂಗ್ರೆಸ್ ಬೀದಿಗಿಳಿಯಿತು. ರೆಡ್ಡಿ ಸೀಡಿಯ ಹಿಂದೆ ಕಾಂಗ್ರೆಸ್ ಕೈವಾಡವಿದ್ದದ್ದು ಮೇಲುನೋಟಕ್ಕೆ ಕಾಣಿಸುತ್ತಿದ್ದರೂ ಅದರ ಆಳದಲ್ಲಿದ್ದದ್ದು ಕೇಸರಿ ಹಿತಾಸಕ್ತಿಯೇ. ಯಾರ ಮಾತಿಗೆ ಬೆಲೆ ಕೊಡದೇ ಹೋದರೂ ಜನಾರ್ಧನ ರೆಡ್ಡಿ 'ಅಮ್ಮ' ಸುಷ್ಮಾ ಸ್ವರಾಜ್ ಹಾಕಿದ ಗೆರೆ ದಾಟುವಾರ ದಿತ್ತು, ನಾಟಕ ಹೇಗಿತ್ತೆಂದರೆ ವರಮಹಾಲಕ್ಷ್ಮಿ ಪೂಜೆಗೆಂದು ಬಳ್ಳಾರಿಗೆ ಬಂದ ಸುಷ್ಮಾ ಸ್ವರಾಜ್ ತಿಪ್ಪೆ ಸಾರಿಸಿದಂತೆ ಎಲ್ಲಾ ಪ್ಯಾಚ್ ಅಪ್ ಮಾಡಿದ್ದೇನೆ ಎಂಬರ್ಥದ ಹೇಳಿಕೆ ಕೊಟ್ಟರೆ ಮರುಗಳಿಗೆಯಲ್ಲೇ ರೆಡ್ಡಿ ಇಲ್ಲ ನಾನು ಬಿಡೋದೇ ಇಲ್ಲ ಎಂದು ಹೇಳಿಕೆ ಕೊಟ್ಟರು.

ಹಾಗೆನ್ನುತ್ತಲೇ ಜನಾರ್ಧನ ರೆಡ್ಡಿ ಅರವಿಂದ ಲಿಂಬಾವಳಿ ಮತ್ತು ಅನಂತ್‌ಕುಮಾರ್ ಜೊತೆ ಚಕ್ಕಂದಕ್ಕಿಳಿದರು. ಮೇಲುನೋಟಕ್ಕೆ ಕಾಂಗ್ರೆಸ್ ನಾಯಕ ಕೆ.ಸಿ. ಕೊಂಡಯ್ಯ, ಮೈನ್ಸ್ ದೈತ್ಯ ರಾಹುಲ್ ಬಲ್ಡೋಟ ಮತ್ತು ಆಂಧ್ರ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಗೆ ಜನಾರ್ಧನ ರೆಡ್ಡಿ ಹತ್ತಿರವಾಗಿ ಕಂಡರೂ ಆಳದಲ್ಲಿ ಅಣ್ಣ ಕರುಣಾಕರ ರೆಡ್ಡಿ, ಪ್ರವಾಸೋದ್ಯಮ ಮಂತ್ರಿ ಶ್ರೀರಾಮುಲು ಜೊತೆ ಬಿಜೆಪಿಯ 'ಅನಂತ್' ಪಾಳಯದಲ್ಲೇ ಆಪ್ತನಾಗಿದ್ದರು. ಇದು ಕಾಂಗ್ರೆಸ್ ಕೈವಾಡ ಎನ್ನುವುದಕ್ಕಿಂತಲೂ ಲಿಂಬಾವಳಿ ಮೂಲಕ ಅನಂತ್ ಆಡಿಸುತ್ತಿರುವ ಆಟವೆಂದು ಬಿಜೆಪಿಯ ಯಡ್ಡಿ ಬಣಕ್ಕೆ ಚೆನ್ನಾಗಿ ಅರ್ಥವಾಗಿತ್ತು.

ಬಹುಶಃ ಅದು ಗೊತ್ತಾಗಿಯೇ ಬಿಜೆಪಿ ಅಧ್ಯಕ್ಷ ಸದಾನಂದ ಗೌಡರು ಲಿಂಬಾವಳಿ ವಿರುದ್ಧ ಕಿಡಿಕಾರಿದ್ದು. ಅಲ್ಲಿಗೆ ಜೊತೆಗಿದ್ದೇ ಜೆಡಿಎಸ್ ಅನ್ನು ಕುಲಗೆಡಿಸುವ ಚೆಡ್ಡಿ ತಂತ್ರಕ್ಕೆ ಯಶಸ್ಸು ಸಿಕ್ಕಂತಾಗಿತ್ತು. ಉಳಿದದ್ದು ಕಾಂಗ್ರೆಸ್ಸು. ಬರುವ ಚುನಾವಣೆಯ ಹೊತ್ತಿಗೆ ದೇವೇಗೌಡರಿಗಾಗಲಿ, ಕಾಂಗ್ರೆಸ್ಸಿಗಾಗಲಿ ಮುಖವೇ ಇರಕೂಡದು. ಇದ್ದುದರಲ್ಲಿ ಬಿಜೆಪಿಯೇ ಲಾಯಕ್ಕು ಎಂದು ಜನಕ್ಕನ್ನಿಸಬೇಕು. ಜೊತೆಗೆ ಕಾಂಗ್ರೆಸ್ಸಿಗೆ ಪ್ರಾಪ್ತಿಯಾದ ಸಿದ್ಧರಾಮಯ್ಯನವರ ವರ್ಚಸ್ಸು, ಕುರುಬರ ಬೆಂಬಲ ಮತ್ತು ಅಹಿಂದ ಪ್ರಭಾವಗಳನ್ನೆಲ್ಲ ಒಂದೇ ಏಟಿಗೆ ಅಳಿಸುವಂಥ 'ಬಾಂಬ್' ಒಂದನ್ನು ಸಿಡಿಸಬೇಕು.

ಇದು ಚೆಡ್ಡಿ ತಂತ್ರ. ಅದಕ್ಕೆ ಬಳಕೆಯಾಗಿದ್ದೇ ತೆಲಗಿ ಸೀಡಿ. ಹಾಗಂಥ ಅದನ್ನು ಏಕಾಏಕಿ ಬಿಡಲಿಲ್ಲ. ಮೊದಲು ಬಾಂಬ್ ಮಟ್ಟಣ್ಣನವರ್‌ನನ್ನು ಛೂ ಬಿಟ್ಟು ತಾನು ಜೈಲಲ್ಲಿ ತೆಲಗಿ ಜೊತೆ ಖರ್ಗೆಯನ್ನು ನೋಡಿದ್ದೇನೆ ಎಂಬಂಥ ಪತ್ರಿಕಾಗೋಷ್ಠಿಯೊಂದಕ್ಕೆ 'ಕೇಸರಿ ವೀರರು' ಏರ್ಪಾಡು ಮಾಡಿದರು. ಅದೇ ಹೊತ್ತಿಗೆ ವಿನಿವಿಂಕ್ ಶಾಸ್ತ್ರಿಯಿಂದ ದೇವೇಗೌಡರು ದುಡ್ಡು ಪಡೆದದ್ದನ್ನೂ ಬಹಿರಂಗಪಡಿಸಲಾಯಿತು. ಇದರರ್ಥ ದೇವೇಗೌಡರನ್ನೂ ಕಾಂಗ್ರೆಸ್ಸನ್ನೂ ಒಟ್ಟೊಟ್ಟಿಗೇ ಗುಡಿಸಿ ಹಾಕುವುದು ಚೆಡ್ಡಿ

(14 ನೇ ಪುಟಕ್ಕೆ)

ಲಾಭ ಬಿಜೆಪಿಗೇ!

ಸ್ಟ್ಯಾಂಪಿಟ್ ಮುಖ್ಯಸ್ಥ ಶ್ರೀಕುಮಾರ್ ಆವತ್ತು ಸಿಬಿಐಗೆ ಇಡೀ ಪ್ರಕರಣವನ್ನು ವಹಿಸುವ ಮುನ್ನ ತೆಲಗಿ ಸೀಡಿಯ ಒಂದು ಪ್ರತಿಯನ್ನು ರಾಜ್ಯ ಗುಪ್ತ ವಾರ್ತೆ ಐಜಿ ಜಯಪ್ರಕಾಶ್‌ರಿಗೆ ಕೊಟ್ಟಿದ್ದರಂತೆ. ಮತ್ತೊಂದು ಸೀಡಿಯನ್ನು ಪೊಲೀಸ್ ಮಹಾ ನಿರ್ದೇಶಕರಿಗೂ ಕೊಟ್ಟಿದ್ದರಂತೆ. ಈಗ ಪೊಲೀಸ್ ಮಹಾನಿರ್ದೇಶಕರಾಗಿರುವುದು ಸಿಯಾಲ್. ಹಾಗೇ ಇಂಟಲಿಜೆನ್ಸ್ ಐಜಿ ಕಿಶೋರ್ ಚಂದ್ರ ದೇವೇಗೌಡರ ಪರಮ ನಿಷ್ಠ. ತನ್ಮೂಲಕವೇ ತೆಲಗಿ ಸೀಡಿ ಹೊರ ಬಿದ್ದಿದೆಯೇ? ರೆಡ್ಡಿ ಸೀಡಿಯಿಂದ ಆದ ಅನಾಹುತದಿಂದ ಬಚಾವಾಗುವುದು, ಕಾಟ ಕೊಡುತ್ತಿರುವ ಕಾಂಗ್ರೆಸ್ಸನ್ನು ತೆಲಗಿ ಸೀಡಿಯಿಂದ ಕಟ್ಟಿ ಹಾಕುವುದು ದೇವೇಗೌಡರ ಉದ್ದೇಶವೇ?

ಈ ಸಾಧ್ಯತೆಗಳೂ ಇಲ್ಲದಿಲ್ಲ. ಆದಾಗ್ಯೂ ಲಾಭ ಮಾತ್ರ ಬಿಜೆಪಿಗೇ. ಏಕೆಂದರೆ ತೆಲಗಿ ಓರ್ವ ಮುಸ್ಲಿಂ. ರೋಷನ್‌ಬೇಗ್, ಬಾವಾ, ಸೌದಾಗರ್, ವಾಲಿಭಾಷಾ, ಐಪಿಎಸ್ ಅಧಿಕಾರಿ ನಿಸಾರ್ ಅಹ್ಮದ್ ಎಲ್ಲರೂ ಮುಸ್ಲಿಮರೆ. ಬಹುಪಾಲು ರಾಜಕಾರಣಿಗಳೆಲ್ಲ ಕಾಂಗ್ರೆಸ್ಸಿಗರೇ.

ಮಂಪರು ಪರೀಕ್ಷೆಯ ವಿರೋಧಾಭಾಸ

ತೆಲಗಿ ಮಂಪರು ಪರೀಕ್ಷೆಯ ವಿರೋಧಾಭಾಸವನ್ನೇ ನೋಡಿ. ಒಮ್ಮೆ ಉನ್ನತ ಪೊಲೀಸ್ ಅಧಿಕಾರಿಗಳಿಗೆ ಸಂಗ್ರಾಮ್‌ಸಿಂಗ್ ಮೂಲಕ ಹಣ ಕೊಡುತ್ತಿದ್ದೆ ಎನ್ನುತ್ತಾನೆ. ಮತ್ತೊಮ್ಮೆ ಜೈಲರ್ ನಂಜಪ್ಪ ಹಾಗೂ ಜೈಲ್ ಸೂಪರಿಂಟೆಂಡೆಂಟ್ ಸ್ಮಿತ್ ಮೂಲಕವೂ ದುಡ್ಡು ಕಳಿಸುತ್ತಿದ್ದೆ ಎನ್ನುತ್ತಾನೆ. ಹಾಗೇ ಮುಂದುವರೆದು ಜೆ.ಎ. ಬಾವಾ ಮತ್ತು ವಾಲಿಭಾಷಾ ಮೂಲಕ ತಲುಪಿಸುತ್ತಿದ್ದೆ ಎಂದಿದ್ದಾನೆ. ಇದರಲ್ಲಿ ಯಾವುದು ಸತ್ಯ?


ರಾಜಕಾರಣಿಗಳು ಮತ್ತು ಪೊಲೀಸರಿಂದ ನನಗೆ ಜೀವ ಬೆದರಿಕೆಯಿದೆ ಎಂದು ಹೇಳುವುದು ಗೊತ್ತು, ಅಂಥವರ ಹೆಸರನ್ನು ಹೇಳದೇ ಮುಚ್ಚಿಡುವುದೂ ಗೊತ್ತು!

ಮತ್ತೊಮ್ಮೆ ಯಾವ ರಾಜಕಾರಣಿ ಜೊತೆ ನಂಟಿದೆ ಎಂದಾಗ ರೋಷನ್‌ಬೇಗ್ ಅನ್ನುತ್ತಾನೆ. ಮಗದೊಮ್ಮೆ ಲಾಲಾ ಅನ್ನುತ್ತಾನೆ. ಯಾವ ಲಾಲಾ ಎಂದು ಕೇಳಿದರೆ 'ಬಾವಾ' ಎನ್ನುತ್ತಾನೆ. ಇನ್ನೊಮ್ಮೆ ರಾಜಕಾರಣಿಗಳ ಹೆಸರು ಹೇಳು ಅಂದರೆ 'ಇದು ನನ್ನ ವೈಯುಕ್ತಿಕ ಪ್ರಶ್ನೆ' ಎನ್ನುತ್ತಾನೆ. ಇನ್ನೂ ಒತ್ತಾಯ ಮಾಡಿದಾಗ 'ಶ್ರೀಕೃಷ್ಣ' ಎಂದು ಅಸ್ಪಷ್ಟವಾಗಿ ಹೇಳುತ್ತಾನೆ. ವಿಪರ್ಯಾಸವೆಂದರೆ ಮಂಪರು ಪರೀಕ್ಷೆಯನ್ನು ನೂರಕ್ಕೆ ನೂರು ಸತ್ಯ ಎಂದು ಪಾಶ್ಚಿಮಾತ್ಯ ದೇಶಗಳೇ ನಂಬುವುದಿಲ್ಲ. ಅದನ್ನು ಕೋರ್ಟುಗಳೂ ಒಪ್ಪುವುದಿಲ್ಲ. ಅದೇನಿದ್ದರೂ ತನಿಖೆಗೆ ಸಹಾಯವಷ್ಟೇ.

ಮಂಪರು ಪರೀಕ್ಷೆಯಲ್ಲಿ ಹೇಳಿದ್ದನ್ನು ಆನಂತರ ತನಿಖಾಧಿಕಾರಿಯಾದವನು ಪರಿಶೀಲಿಸುತ್ತಾನೆ. ಅದರ ಸತ್ಯಾಸತ್ಯತೆಯನ್ನು ಓರೆಗೆ ಹಚ್ಚುತ್ತಾನೆ. ಹಾಗೆ ನೋಡಿದರೆ ತೆಲಗಿಯನ್ನು ಬಂಧಿಸಿದ್ದೇ ಜೆ.ಎ. ಬಾವಾ. ಆತ ಜೈಲಿಂದ ತನ್ನ ಮೊಬೈಲಿನಲ್ಲಿ ಮಾತಾಡುವಾಗ 'ಬಾವಾ ಒಬ್ಬ ಮುಸ್ಲಿಮನಾ? ಆತ ಅಜ್ಮೀರ್ ದರ್ಗಾದಿಂದಲೇ ನನ್ನ ಹಿಡಿದು ತಂದನಲ್ಲ, ಅಲ್ಲಾ ಆತನಿಗೆ ಒಳ್ಳೆದು ಮಾಡ್ತಾನಾ' ಅನ್ನುತ್ತಾನೆ. ಅದರರ್ಥ ಆತನಿಗೆ ಬಾವಾ ಮೇಲೆ ಸಿಟ್ಟಿದೆ. ಆದರೆ ಮಂಪರು ಪರೀಕ್ಷೆಯಲ್ಲಿ ಪದೇಪದೇ ಬಾವಾ ಹೆಸರನ್ನು ತನಿಖಾಧಿಕಾರಿ ಕೇಳಿದಾಗ ಒಮ್ಮೆ ಲಾಲಾ ಅನ್ನುತ್ತಾನೆ. ಮತ್ತೊಮ್ಮೆ ಮೇಲಿನ ಅಧಿಕಾರಿಗಳಿಗೆ ದುಡ್ಡು ತಲುಪಿಸುತ್ತಿದ್ದ ಅನ್ನುತ್ತಾನೆ. ಸಾಲದ್ದಕ್ಕೆ ಬಿಜೆಪಿ ನಾಯಕ ಯಶವಂತ ಸಿನ್ಹಾ ಮತ್ತು ಅನಂತ್‌ಕುಮಾರ್ ಹೆಸರನ್ನೂ ಹೇಳುತ್ತಾನೆ. ಶರದ್‌ಪವಾರ್, ಛಗನ್ ಬುಜಬಲ್, ಕೃಷ್ಣ ಬೇಗ್, ಇವರಲ್ಲಿ ಯಾವುದು ಸತ್ಯ? ಎಷ್ಟು ಸತ್ಯ?

ಮನಿಗೋಗಿ ಮನಿಗಕ್ಕೆ ಇವನೇನು ಐಯ್ಯಂಗಾರನೋ, ನಂಬೂದ್ರಿಯೋ?

ಅಟ್ಟ ಬಾಗಿಲಿಗೆ ನೀರು ತಕ್ಕಳಿನಿದಂತೆ ಎರಚಿ ಹೋದ ಮಳೆಯನ್ನೇ ಬೈದುಕೊಂಡು ಕಾಳಮಾವ ಕುಳಿತಿರಬೇಕಾದರೆ, ಸೀರ ಕುಟೋದ್ಧದ ಸಂಗತಿ ಹೇಳುವ ದನಿಯಲ್ಲಿ,



"ಮಾರಾಷ್ಟ್ರದಲ್ಲೀ ಸಾಬರು ಸಾಬರ ಮ್ಯಾಲೆ ಬಾಂಬಾಕಿದ್ದರಂತೆ. ನೋಡಿದ್ಯಂಗವೆ?" ಎಂದ.

"ಅಗೊಳೊ. ಅವುಕೇನಾಯ್ತೂ? ಅದ್ಯಾಕ್ಲ ಬಾಂಬಾಕಿದ್ರು?"

"ಯಾಕಾಕಿದ್ರೊ ಏನಪ್ಪ ಅಂತೂ ಬಾಳ ಜನ ಸತ್ತವುರಂತೆ."

"ಇದೇನು ಸಾಬ್ರು ಯಾರ್‍ನೂ ಬುಡತಾಯಿಲವಲ್ಲಾ, ಏನಾಗ್ಯದೆ ಅವುಕೆ?" ಎಂದಳು ಜುಮ್ಮಿ.

"ಸಾಯುಸದೋಗ್ಲಿ ಕಣೇ, ನೋಟು ಮಾಡೋ ಮಿಷಿನ್ ಮಡಿಕಂಡು ಹಗಲೂ ರಾತ್ರಿ ಪ್ರಿಂಟ್ ಮಾಡಿ ಚಲಾವಣೆಗೆ ಬುಟ್ಟವುನಲ್ಲಾ, ಅವುನಿನ್ನಾಂತ ಸಾಬ ಇರಬೇಕು ಲ್ಯಕ್ಕ ಹಾಕು."

"ಅವುನ್ನೇನೊ ತಗಂಬಂದು ನಿದ್ದೆಲಿ ಮಾತಾಡ್ಸಿ ನಿಜ ಹೇಳುಸ್ತಾಯಿದ್ದರಂತೆ."

"ಊ ಕಣೆ, ಮಂಪು ಪರೀಕ್ಷೆ ಅಂತರದಕೆ. ಮಂಪರು ಬರಿಸಿ ಬಾಯಿ ಬುಡುಸ್ತರೆ. ಆಗ ನಿಜ ಹೇಳಿಬುಡತರೆ, ಈ ತೆಲಗಿನೂ ತಗಂಡುಬಂದು ಅಂಗೆ ಮಾಡ್ಯವುರೆ. ಅವುನು ಯಲ್ಲಾನು ಬಾಯಿಬುಟ್ಟವುನೆ."

"ಏನೇನು ಬಾಯಿಬುಟ್ಟವುನ್ಲ?"

"ಅದೆ ಪೊಲೀಸ್‌ನೋರಿಗೆ ಕೊಟ್ಟರೊ ದುಡ್ನು, ರಾಜಕಾರಣಿಗಳಿಗೆ ಕೊಟ್ಟರೊ ದುಡ್ಡಿನ ಲ್ಯಕ್ಕನ್ಯಲ್ಲ ಹೇಳಿದ್ದನಂತೆ. ಅದ್ಕೆ ಕುಮಾರಸ್ವಾಮಿ ಸಿಬಿಐಗೆ ವಯುಸಿ ಬುಟ್ಟು ಇನ್ನು ತನಿಕೆ ಮಾಡಬೇಕು ಅಂದವುನಂತೆ."

"ನೋಡು ಇದೆಂಗದೆ, ನೀತಿಯೇಳಕೆ ಆತನ ಕರೆಸಿದ್ರೆ? ಆತ ಹೆಂಡತಿಬುಟ್ಟು ಅರ್ರಿಂಗ್ಯಾಯ್ತು ಅಂತವ ಇವ್ನ ಬಂದ ಆರ್ರಿಂಗ್ಗಿಗೇ ನೂರೈವತ್ತು ಕೋಟಿ ಈಸ್ಕಂಡವ್ನೆ ಅಂತಾ ದೂರ್ತ ಕುಂತವ್ನೆ. ಅಂತದ್ರಲ್ಲಿ ತೆಲಗಿ ಕಾಸು ತಿಂದೋರ ತನಿಕೆ ಮಾಡುಸ್ತಾನಂತೆ, ತನಿಕೆಯ" ಎಂದಳು ಜುಮ್ಮಿ.

"ಅಯ್ಯೋ, ಇನ್ನೊಂದು ಕತೆ ಕೇಳಿಲ್ವೆ ನೀನು?"

"ಮಾವ ಕತೆನ್ಲಾ?"

ಕುಮಾರಸ್ವಾಮಿ 150 ಕೋಟಿ ಲಂಚ ತಗಂಡಾ ಅಂತ ರೆಡ್ಡಿ ದೂರಿದ್ನಲ್ಲೆ," ಆದೂರಿಂದ ಹೋಗಿರೊ ಮಾನ ಮುಚಗಳಕೆ ತೆಲಗಿ ಹಿಡಕಂಡು ಬಂದು ಮಂಪು ಬರಿಸಿ, ಕಾಂಗ್ರೆಸ್‌ನೋರ ಮ್ಯಾಲೆ ಹೇಳುಸ್ತಾಯಿದ್ದನಂತೆ. ನೋಡಿದ್ಯಂಗದೆ?"

"ನಿಜವೇನ್ಲ?"

"ನಿಜವೋ ಸುಳ್ಳೋ. ಈಗ ತೆಲಗಿ ತಂದು ಮನಿಗಿಸಿ ಮಾತಾಡುಸ್ತಾಯಿರದ ನೋಡಿ ಕಾಂಗ್ರೆಸ್ಸಿನೋರು ಅಂಗಂತಾ ಕುಂತವುರೆ."

"ಇರಬವುದು ಬುಡ್ಡ. ದ್ಯಾವೇಗೌಡ ಇಂತವುನ್ಯಲ್ಲ ಮಾಡುಸ್ತನೆ" ಎಂದ ಸೀರ.

"ದ್ಯಾವೇಗೌಡೇನು ಮಾಡ್ತನ್ಲ? ಪಾಪ ಅವುನಷ್ಟಕ ವುನು ಪಾರ್ಟಿ ಕಟ್ಟತಯಿದ್ದನಂತೆ."

"ಅವುನಿಗೆ ಪಾರ್ಟಿ ಏನು ಮಾಡಕ್ಕೆ ಮಾವ? ಈಗ ಅವುನು ರಾಜಕಾರಣದಲ್ಲಿ ಮಾಡಬೇಕು ಅಂದ ಕ್ಯಲಸನ್ಯಲ್ಲ ಮಾಡ್ಯಾಯ್ತು. ಇನ್ನ್ಯಾಕಂತವುನಿಗೆ ಪಾರ್ಟಿ ಕ್ಯಲಸ" ಎಂದ ಉಗ್ರಿ.

"ಓಹೊ ಅದೊಂದು ನಾಟಗ ಅದಲವೆ, ನಡೀಲಿ ಬುಡು. ಅದನ್ನೂ ನೋಡಿ ಬಿಡೋಣ."

"ಆ ತೆಲಗಿ ಇನ್ನೇನು ಬಾಯಿಬುಟ್ಟದ್ದನ್ಲ?"

"ಜೀವ ಭಯ ಅದೆ ಅಂತ ಮರೆಮಾಚಿದ್ದನಂತೆ."

"ಇದೇನ್ಲ ಹಿಂಗಂತಿ? ಮಂಪು ಬರಿಸಿದ್ರೆ ಯಲ್ಲಾನು ಹೇಳ್ತರೆ ಅಂತಿ, ತೆಲಗಿ ಮುಚ್ಚಿಡತಾ ಅವುನೆ ಅಂತಿ" ಎಂದ ಸೀರ.

"ಅದ್ಕೆ ಕಣವಮಾವ ದಾಗುಟ್ರು, ಮಂಪು ಪರೀಕ್ಷೆಲೇಳದ ತೊಂಬತ್ತೇಳು ಪರಸೆಂಟ್ ನಿಜ ಅಂದಿರದು."

"ಇನ್ನು ಮೂರು ಪರಸೆಂಟ್ ಇವುರು ಸೇರಿಸಿಗ ಬೇಕು ಅನ್ನು?"

"ಸೇರಸದೆಯಿದ್ರು ನ್ಯಡಿತದೆ. ಮಂಪರಲ್ಲಿ ಯಾರೂ ಸುಳ್ಳ ಹೇಳದಿಲ್ಲವಂತೆ" ಎಂದು ಉಗ್ರಿ ಹೇಳುತ್ತಿರುವಾಗ ಇದಕ್ಕೆ ಪೂರಕವಾಗಿ ಕಾಳಮಾವ ಏನೋ ಹೇಳಲು ರೆಡಿಯಾಗಿ ಕ್ಯಾಕರಿಸಿ,

"ಮಂಪು ಬಂದಾಗ ಮನ್ಸ ನಿಜ ಬಾಯಿಬುಡತನೆ ಕಂಡ್ರ. ನಾನೆ ನೋಡಿದ್ದೀನಿ" ಎಂದ. ಅಚ್ಚರಿಗೊಂಡ ಜುಮ್ಮಿ,

"ನೀನ್ಯಾವಾಸುಪತ್ರಿಗೋಗಿದ್ದೊ ಮಾವ ನೋಡಕ್ಕೆ?" ಎಂದಳು.

"ಆಸುಪತ್ರಿಗಲ್ಲ ಕಂಡ್ರ. ಆ ಚಿಕ್ಕನ ಮದುವೆಲಿ ಬೀರನಕ್ಯರಿಗೋಗಿದ್ದೋ. ಇಲ್ಲೆ ಗಂಡಿನ ಮನೆ ಮುಂದೆ ದಾರೆ ನಡಿತೂ. ಇವತ್ತಿಲ್ಲೆ ಇದ್ದು ವತ್ತರಿಕೆದ್ದು ಹೋಯ್ತಿವಿ ಅಂದ್ರು ಹೆಣ್ಣಿನ ಕಡಿಯೋರು. ಈ ಚಿಕ್ಕಾರವ್ವ ಮದ್ದೆ ಗಯ್ಯಾಳಿ ಹೆಂಗಸಲವೇ, 'ಕೂಡದು ಧಾರೆದಿನ ಯಾವ ಕಾರಣಕೂ ನಾವಿಲ್ಲಿರಬಾರದು, ನಡಿರಿ' ಅಂದುಬುಟ್ಟು!"

"ತಂಗಳನ್ನ ಸಾರು ತಿಂದು ಬದಕಳವವ, ಅವುಳ ಗಂಟೇನೋಯ್ತಿತ್ತೂ?"

"ಅದ್ಯಾಕಂಗಾಡಿದ್ಲವ್ವ? ಒತ್ತು ಮುಳಗೊವತ್ತಿಗೆ ಯಲ್ಲ ವಂಟ್ರು. ಬರದಿಲ್ಲ ಅಂದ್ರೂ ನನ್ನನ್ನು ಯಳಕಂಡು ವಂಟ್ರು, ಬಸ್ಸುಯಿಲ್ಲ ಲಾರಿನೂಯಿಲ್ಲ, ಬ್ಯಳಗಾನ ನ್ಯಡದು ಬೀರನಕ್ಯರೆ ಸೇರಿದೊ ಕಂಡ್ರೆ. ಹಿಡಮಾಡಿದಂಗಾಗಿತ್ತು ತಲುಪವತ್ತಿಗೆ."

"ಅಯ್ಯೋ, ಅಯ್ಯೋ ವಸಿದೂರ ನ್ಯಡದಿದ್ದಿರಾ?"

"ಇರು ಹೇಳ್ತಿನಿ. ಆ ಬೀರನಕ್ಯರಿಗೋದೇಟಿಗೆ ಬರಬಾರದ ನಿದ್ದೆ ಬತ್ತು, ಯಲ್ಲ ಮನಿಕಂಡೊ. ಆಗ ಆ ಹೆಣ್ಣಿನಪ್ಪ ಭೈರಪ್ಪನಿಗೆ ಅಂಗೇ ಜೊಂಪು ಬತ್ತು ಕಣವ್ವ ಮಾತಾಡಕ್ಕೆ ಸುರು ಮಾಡಿದ."

"ನಿದ್ದೆಲೆ ಮಾತ ಸುರುಮಾಡಿದ್ನೆ?"

"ಊ ಕಂಡ್ರೆ. ಅದು ಏನು ಮಾತಾಡಿದ ಅಂತೀ?



ಆ ಬಡ್ಡಿಯ ಏನು ಅನ್ನ ಕೇಳಕ್ಯೊಯ್ತಿದ್ನೆ, ಅಥವಾ ಹಿಡಕಳಕ್ಯೋಯ್ತಿದ್ರೆ ಯಾರಾರವ. ಮನಗಿದ್ದು ವತ್ತರಿಕೆದ್ದು ಬತ್ತಿದ್ವೊ, ಅದ್ಕೂ ಅವುಕಾಸ ಕೊಡ್ಲಿವಲ್ಲಾ ಇನ್ಯಂಥಾ ಲಂಕಣಿ ಅವುಳು ಅಂದ ಕಂಡ್ರೆ."

"ಸರಿಯಾಗೇ ಅಂದವುನೆ ಬುಡು."

"ಅವುನೇನೊ ನಿದ್ದಿಗಣ್ಣಲಿ ಅಂದಕಣವ್ವ, ಅದ ಗಂಡಿನಕಡಿಯೋರು ಕೇಳಿಸಿಗಂಡ್ರು. ಆ ಕೂಡ್ಲೆ ಎದ್ದು ವಂಟಬುಟ್ರವ್ವ ಯಲ್ಲವ. ಈ ಗಂಡಿಡಿಯಕ್ಕೆ ನಾಕು ಜನ ಬೇಕಾಯ್ತು. ನಮ್ಮವ್ವನ್ನ ಲಂಕಿಣಿ ಅಂದವುನೆ, ಲಂಕಣಿ ಮಗನಿಗೆ ಯಂಗೆಣ್ಣು ಕೊಟ್ಲೆ, ನನಿಗೆ ಹೆಣ್ಣು ಬ್ಯಾಡ ಅಂತ ಹಾರ್‍ಯಾಡನು."

"ಮದ್ಲೆ ಪೈಲು ಪೈಲು ಮುಂಚೆದಲವೆ ಅದ... ಮಾವಂದ ಮಾತು ಕೋತಿಗೆ ಯಂಡ ಕುಡಿಸಿದಂಗ... ಗ್ಯದೆ."

"ಅಯ್ಯೋ ಮ್ಯಾಕ್ಯಾರಿ ಕ್ಯಳಿಕೆ ಬೀಳನು: ನಾ... ನೋಡಗುಂಟ ನೋಡಿ ಹೋಗಿ ಮಕದ ಮ್ಯಾಲೆ ಯರುದ... ಬುಟ್ಕೆ, ಅಲ್ಲ ಕಣೊ ಬದ್ಲೆತ್ತದೆ, ಅಲ್ಲೆ ಹುನುಮಂತರಾಯ... ಗುಡಿಲಿ ಮನಿಗಿದ್ದು ಮಬ್ಬಿಗಲೇ ಎದ್ದು ಬತ್ತಿದ್ವೊ ಕಂಡ... ಕಾಡದಾರಿಲಿ ಬ್ಯಳಗಾನ ಬಂದವಲ್ಲಾ, ಕಳ್ರು ಕಾಕ... ಬಂದು ಹೆಣ್ಣುಮುಕ್ಕಳ ವಡವೆಕಿತಗಂಡು ಹೆಣ್ಣುಮುಕ್... ಮೈಕೆಡಿಸಿ ಹೋಗಿದ್ರೆ ಯಾರೋ ಆಯ್ತಿದ್ದೋರು... ಇದನ್ಯಲ್ಲ ನಿಮ್ಮವ್ವ ಯೋಚನೆ ಮಾಡಬಾರದೇನೊ ಅಂದ... ಆಗ ತಿಗ ಅದಿಮಿಕಂಡು ಸುಮ್ಮನಾದ. ಅಗೋ ಅಂಗ... ಈ ಬೀರನೆಕ್ಯರೆ ಭೈರಪ್ಪ ನಿದ್ದೆಲಿ ಮಾತಾಡಿ ಎಲ್ಲ ಬ... ಬೀಳ ಊರಿಗೆ ಬರಂಗಾಗಿತ್ತು" ಎಂದ ಕಾಳಮಾ... ತೆಲಗಿ ಮಂಪರು ಪರೀಕ್ಷೆಯ ವಿಷಯವನ್ನು ಭೈರಪ್ಪ... ಕನವರಿಕೆಗೆ ಜಮಾ ಮಾಡಿ, ಮಂಪರು ಸುದ್ದಿ ಹೊ... ಸುದ್ದಿಯೇನಲ್ಲ ಎಂಬಂತೆ ಕುಳಿತ. ಆಗ ಕಾ... ಕೊಂಡ ವಾಟಿಸ್ಸೆ,

"ದ್ವಡಪ್ಪ, ದ್ವಡಪ್ಪ"

"ಏನ್ಲಾ?"

"ಈ ಕುಮಾರಸ್ವಾಮಿಗೆ ನೀನೊಸಿ ಬು... ಹೇಳಬೇಕಲ್ಲಾ?"

"ನಾನ್ಯಾಕೇಳ್ಳಿ, ಅವರಪ್ಪ ಹೇಳ್ತನೆ ತಗೊ..."

"ಅವುರಪ್ಪನಿಗೆ ಅದ್ಯಲ್ಲ ಗೊತ್ತಾಗದಿ... ದ್ವಡಪ್ಪ, ನಮ್ಮ ಕಾಲ ತುಂಬ ಬದ್ಲಾಗ್ಯ... ಪ್ರಪಂಚನೆ ಒಂದಳ್ಳಿ ತರ ಆಗ್ಯದೆ. ಬೇರೆ ಬೇ... ದೇಸದೋರ್‍ಯಲ್ಲ ಚಂದ್ರಲೋಕ ನೋಡಿ ಬತ್ತಾಯಿ... ರುವಾಗ ಇವುನೀಗ ಇವುರಪ್ಪನ ಕಾಲದ ಕಾಯ... ಕ್ರಮ ಹಾಯ್ಕಂಡವುನಲ್ಲಾ, ಇವುನಿಗೇನೇಳನ..."

"ಏನು ಕಾರ್ಯಕ್ರಮ ಹಾಯ್ಕಂಡಿದ್ದನ್ಲ..."

"ಹರಿಜನರ ಮನಿಗೋಗಿ ಮನಗಿದ್ದು ಬ... ಅವುನೆ."

"ವಳ್ಳೆದೆ ಅಲವೆ?"

"ಅಂಗಲ್ಲ ದೊಡಪ್ಪ, ಹರಿಜನರ ಮ... ಗೋಗಿ ಮನಿಗಿದ್ದು ಬರಕ್ಕೆ ಇವುನೇ... ಬ್ರಾಂಬ್ರೊನೊ, ಐಯ್ಯಂಗಾರಿನೊ ಅಥ... ನಂಬೂದ್ರಿನೊ ಹೇಳು?"

" "

"ಇವುನ ಮುಂದಿರೊ ಕೆಲಸ ಏನು ಗೊ... ದೊಡಪ್ಪ? ನೂರಾರು ತಾಲ್ಲೂಕಿಗೆ ಮಳಿ... ಗಿಲ್ಲ, ದನಕರಿಗೆ ಹುಲ್ಲಿಲ್ಲ......"

"ಅಯ್ಯೋ ಹುಲ್ಲಿನ ಕತೆ ಬ್ಯಾಡಕಂಡ್ರ. ನಾ... ಆ ಜವುರಪ್ಪನ ಸ್ವಸೆ ತಂಗ್ಯಮ್ಮ... ಸಾವುರುಪಾಯಿಕೊಟ್ಟು ಹುಲ್ಲ ತಗಂಡಿದ... ಅದ್ರಲ್ಲೆ ಆಗ್ಲೆ ನಾಕ್ವರೆ ಹೊತಗಂಡೋಗ್ಯವುರೆ" ಎಂದ... ಜುಮ್ಮಿ.

"ನೋಡು ಮತ್ತೆ, ಪರಿಸ್ಥಿತಿ ಅಷ್ಟೊಂದು ಬಿಗ... ಯಿಸ್ತಯಿರುವಾಗ ಈ ಕುಮಾರಸ್ವಾಮಿ ಕರಿಬ್ರಾಮ... ನಂಗಾಡ್ತ ಅವುನಲ್ಲಾ ಇವುನಿಗೆ ಹೇಳೊರು, ಕೇಳೊ... ಯಾರು ಇಲವೆ ದ್ವಡಪ್ಪ? ಇಟೀಸ್ ಸೇಮ್ ಅವರ್ ಥಿಂಕ್ಸ್ ಅಲ್ಲ ಥಾಟ್ಸ್"

"?!"

–ಬಿ. ಚಂದ್ರೇಗೌ...

Zero Hour

1. 'ದತ್ತಮಾಲೆ ಅಭಿಯಾನ' ಎಂದರೇನು? ಎಂಬ ಪ್ರಶ್ನೆಗೆ ಎಚ್.ಡಿ. ರೇವಣ್ಣನ ಉತ್ತರ ಏನು?

a) ವೈ.ಎಸ್.ವಿ. ದತ್ತ ಅವರು ಮಾಲಾ ಎನ್ನುವವಳ ಜೊತೆ ಅಭಿನಯಿಸಿದರು.

b) ವೈ.ಎಸ್.ವಿ. ದತ್ತರವರು ಅಯ್ಯಪ್ಪನ ಮಾಲೆ ಧರಿಸಿ ಶಬರಿಮಲೈಗೆ ಹೊರಟರು.

c) ರೆಡ್ಡಿಯ ಸೀಡಿ ಬಾಂಬ್‌ನ್ನು ಠುಸ್ ಎನಿಸಿದ ವೈ.ಎಸ್.ವಿ. ದತ್ತರಿಗೆ ದೇವೇಗೌಡರು ಮಾಲೆ ತೊಡಿಸಿದರು.

d) ಈ ಪ್ರಶ್ನೆಗೆ ಉತ್ತರ ಪಡೆಯಲು ಕೆ.ಸಿ. ರೆಡ್ಡಿ ಬಳಿ ಹೋದರಂತೆ ರೇವಣ್ಣ!



ಮುನ್ನಿ

2. ಕಾಶೀನಾಥನ 'ಗಟ್ಟಿತಾಳಿ ಬಿಟ್ಟಿವೋಳ' ಪೋಸ್ಟರ್, ಸ್ಟಿಲ್ಸ್ ನೋಡಿದರೆ ಏನನಿಸುತ್ತೆ?

a) ಥೂ, ವಾಯ್ಕ್ ಅನಿಸುತ್ತೆ

b) ಬಸ್‌ಸ್ಟ್ಯಾಂಡಿನ ಸಾರ್ವಜನಿಕ ಮೂತ್ರಾಲಯ ನೋಡಿದಂತೆ ಆಗುತ್ತದೆ.



c) ಅರೆ ಮುನ್ನಿ ಪುಟ್ಟಿ, ಆ ಕಾಶೀನಾಥ್ ಇನ್ನೂ ಬದುಕಿದೆಯಾ?

d) ಆ ಕೋಡಂಗಿಗೆ ಕಾಶಿಯಾತ್ರೆ ಮಾಡಲು ಹೇಳು....

3. *"Sleeping with the enemy"* ಎಂದರೇನು?

a) ಏಯ್, ಯುಸ್‌ಲೆಸ್ ಮುನ್ನಿ, ಅದೊಂದು ಸಾಧಾರಣ ಸಿನಿಮಾ ಅಷ್ಟೇ.

b) ಪರಸ್ಪರ ಟೀಕೆ ಮಾಡುತ್ತಿದ್ದ ಬಿಜೆಪಿ, ಜೆಡಿಎಸ್ ಕೂಡಿ ಸರ್ಕಾರ ನಡೆಸುತ್ತಿವೆಯಲ್ಲ...

c) ಮೇಧಾ ಪಾಟ್ಕರ್ ಬಂದು ಪ್ರತಾಪ್‌ಸಿಂಹನ ಸಲಹೆ ಕೇಳಿದಂತೆ

d) ಇದೆಲ್ಲ ಬಿಡು ಮುನ್ನಿ, ನಮಗಂತೂ ಮೇಧಾ ಪಾಟ್ಕರ್ ಜೊತೆಗಿರಬೇಕು ಅಷ್ಟೇ....

3. ಈ ಚಿತ್ರ ನೋಡಿ ಅಭಿಪ್ರಾಯ ಹೇಳಿ.



a) ಕೂಪಮಂಡೂಕಗಳ ಸಾಗರೋಲ್ಲಂಘನ!

b) ಕಿಡಿಗೇಡಿಗಳ Tie-up!

c) 'AKKA'ನ ಮನೆ ಹೊಕ್ಕು ಮುಕ್ಕಲು ರೆಡಿ ಆದವರು...

d) ಮೇಲಿನೆಲ್ಲವೂ ಸರಿ....

p –
p –
p'q –
p –

ಕಂಡದ್ದು ಕಂಡ ಹಾಗೆ

ಓದಿಡು ಲೇಖನ ಓದಿದೆ. ಅದು ಕಾ.ನಾ. ಸುಬ್ರಮಣ್ಯಂ ಎಂಬ ತಮಿಳು ಬುದ್ಧಿಜೀವಿ ಬರೆದದ್ದು. ಪ್ರಚಂಡ ವಿದ್ವಾಂಸ, ಹರಿತ ಬುದ್ಧಿಯ ಮನುಷ್ಯ ಸುಬ್ರಮಣ್ಯಂ. ಈತ ಒಂದು ಬಗೆಯಲ್ಲಿ ನೀರದ್ ಚೌಧುರಿಯ ತರಹ ಅಂದರೆ ನಿಮಗೆ ಈತನ ಒಂದು ಚಿತ್ರ ಹೊಳೆದೀತು. ಇಂಗ್ಲೀಷ್ ದಿನಪತ್ರಿಕೆಯೊಂದರಲ್ಲಿ ತಮ್ಮ ರಾಜ್ಯವಾದ ತಮಿಳುನಾಡಿನ ರಾಜಕೀಯ ಕುರಿತು ಈಚೆಗೆ ಬರೆದ ಲೇಖನ ತಮಿಳುನಾಡಿನ ಸುವರ್ಣಯುಗ ಕುರಿತದ್ದು. ತಮಿಳರು ತಮ್ಮ ಸುವರ್ಣಯುಗ ಪಾಂಡ್ಯನ್ ಕಾಲದ್ದು ಎನ್ನುತ್ತಾರೆ; ಹಾಗೆಯೇ ಮೈಮರೆತು ಎಂಜಿಆರ್ ಕಾಲವನ್ನೇ ಸುವರ್ಣಯುಗ ಅನ್ನುತ್ತಾರೆ. ಆದರೆ ಈಚೆಗೆ ಎಂಜಿಆರ್ ಸಖ್ಯದಲ್ಲೇ ಇದ್ದ ಮೂಪನಾರ್ ಕಾಂಗ್ರೆಸ್ ಮತ್ತು ಕಾಮರಾಜ್ ನಾಡಾರ್ ಅವರ ಕಾಲವನ್ನು ಸುವರ್ಣಯುಗ ಎಂದು ವರ್ಣಿಸುತ್ತಿದ್ದಾರೆ. ಕಾಂಗ್ರೆಸ್ ಗೆದ್ದರೆ ಕಾಮರಾಜ್ ಯುಗ ಮತ್ತೆ ಬರುತ್ತೆ ಎಂದು ಆಸೆ ಹುಟ್ಟಿಸುತ್ತಿದ್ದಾರೆ. ಅಂದರೆ ಎಂಜಿಆರ್ ಅವರದು ಸುವರ್ಣ ಕಾಲವಲ್ಲ ಎಂದು ಒಪ್ಪಿಕೊಂಡಂತಾಯಿತು.




ಅದಿರಲಿ. ಎಲ್ಲ ಭಾರತೀಯರಂತೆಯೇ ತಮಿಳಿಗರು ಆತ್ಮವಂಚನೆಯಲ್ಲಿ, ಹಗಲು ಗನಸಿನಲ್ಲಿ ನಿಷ್ಣಾತರು. ಕರುಣಾನಿಧಿ ತಾವು ತಿಳಿದಷ್ಟು ಶುದ್ಧನಲ್ಲ ಎಂದು ಬಲ್ಲರು; ಆದರೆ ಆತನಿಗಾಗಿ ಪ್ರಾಣ ಕೊಡಲೂ ಅವರು ಸಿದ್ಧ. ಜಯಲಲಿತ ಹೇಳುತ್ತಿರುವುದು ಸುಳ್ಳೆಂದು ಬಲ್ಲರು; ಆದರೆ ಅದನ್ನೇ ನಂಬಲು ಅವರಿಗೆ ಇಷ್ಟ. ಎಂಜಿಆರ್ ಆಡಳಿತ ಶೈಲಿಯಿಂದ ತಮಿಳುನಾಡು ದಿವಾಳಿ ಏಳುತ್ತಿರುವುದು ಎಲ್ಲರಿಗೂ ಕಾಣಿಸುತ್ತಿತ್ತು; ಆದರೆ ಆತನ ಎಂಜಲು ತಿನ್ನಲೂ ಸಿದ್ಧವಿದ್ದರು.

ಭಾರತೀಯನ ಮೂಲಭೂತ ಗುಣದ ಬಗ್ಗೆ ಸುಬ್ರಮಣ್ಯಂ ಈ ರಾಷ್ಟ್ರಕ್ಕೆ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್‌ನಿಂದ ಕೆಲವು ಮಾತು ಕಾಣಿಸುತ್ತಾರೆ. ಚರಿತ್ರೆ ಪುಸ್ತಕದಲ್ಲಿ ನೀವು ಕರ್ಜನ್ ಬಗ್ಗೆ ಓದಿದ್ದು ನೆನೆದುಕೊಳ್ಳಿ. ಈತ 1899 ರಲ್ಲಿ ಬಂದು ಆರು ವರ್ಷ ಈ ದೇಶದ ವೈಸರಾಯ್ ಆಗಿದ್ದ. ಇಲ್ಲಿಯ ಆಡಳಿತ ಉತ್ತಮಗೊಳಿಸಿದ; ಇಲ್ಲಿಯ ಸಾಹಿತ್ಯ ಕಲೆಯನ್ನು ಪ್ರೀತಿಸಿದ. ಮಾಸಿ ಕುರೂಪಗೊಳ್ಳುತ್ತಿದ್ದ ತಾಜ್‌ಮಹಲನ್ನು ತಿಕ್ಕಿ ತೊಳೆಸಿ ಬೆಳಗಿಸಿ ಚೆಂದಗೊಳಿಸಿದ. ಇಲ್ಲಿಯ ಜನಕ್ಕೆ ನೆಮ್ಮದಿ ತರಲು ಪ್ರಯತ್ನಿಸಿ ನಿರಾಶೆಯಿಂದ ಕುಗ್ಗಿ ಹೋದ. ಈತ ಬರೆಯುತ್ತಾನೆ- "ಭಾರತೀಯರು ಭಾರತೀಯರನ್ನೇ ನಂಬಲಾರದ ಜನ. ಸಾರ್ವಜನಿಕ ಜೀವನದಲ್ಲಿ ಪರಸ್ಪರ ಸಹಕರಿಸುವುದೇ ಇಲ್ಲ. ಅವರಲ್ಲಿ ಏನಾದರೂ ಜಾಣತನವಿದ್ದರೆ ಅದನ್ನು ಇತರರಿಗೆ ಮೋಸ ಮಾಡಲು ಮಾತ್ರ ಬಳಸುತ್ತಾರೆ. ಸಾರ್ವಜನಿಕ ನೈತಿಕತೆಯ ಕಲ್ಪನೆಯೇ ಇಲ್ಲದ ಈ ಜನಕ್ಕೆ ಸತ್ಯ ಅಥವಾ ಪ್ರಾಮಾಣಿಕತೆ ಅಂದರೆ ಏನೆಂಬುದೇ ಗೊತ್ತಿಲ್ಲ."

ನಮ್ಮನ್ನು ನಾವು ಸದಾ ಹೊಗಳಿಕೊಳ್ಳುವುದನ್ನು ಕ್ಷಣವಾದರೂ ನಿಲ್ಲಿಸಿ ಕರ್ಜನ್‌ನ ಮಾತಿನ ಬಗ್ಗೆ ಚಿಂತಿಸಬೇಕು. ಇಲ್ಲಿ ಭ್ರಷ್ಟತೆ, ಸ್ವಾರ್ಥ, ಜಾತೀಯತೆ ತುಂಬ ಹೋಗಿರುವುದಕ್ಕೆ ಈ ಚಿಂತೆಯಿಂದ ಕಾರಣ ದೊರೆಯಬಹುದು. ಇಲ್ಲಿಯ ರಾಜಕೀಯ ಕೂಡ ಅರ್ಥವಾಗಬಹುದು.

ಮರದಿಂದ ಮರಕ್ಕಾಗಿ



ಜೂನ್ 26, 1988

ಒಂದೆರಡು ಚಿಕ್ಕ ಟಿಪ್ಪಣಿ ಮಾಡುವುದಿದೆ. ಅವುಗಳಲ್ಲಿ ಒಂದು, ಮಾವಿನಮರದ ಬಗ್ಗೆ. ಹೂ, ಕಾಯಿಗಳ ಫೋಟೋ ಕೊಟ್ಟು ವರ್ಣಿಸಿದ ಮೇಲೆ ಆಮೇಲೇನಾಯಿತು ಎಂದು ಹೇಳಬೇಕು. ಮೊದಲ ವರ್ಷ ನಮ್ಮ ಆರೈಕೆ ಶುರುವಾಗಿರಲಿಲ್ಲವಾದ್ದರಿಂದ ಕೆಲವು ಮರಗಳು ಚಿಗುರಿ ಕಾಯಿ ಬಿಟ್ಟಿರಲಿಲ್ಲ; ಈ ವರ್ಷ ಎಲ್ಲವೂ ಬಿಟ್ಟದ್ದವು. ನಮ್ಮ ನಲವತ್ತೈದು ಹಳೇ ಮರಗಳಲ್ಲಿ ಮೂರು ಉಪ್ಪಿನಕಾಯಿಗೆ ಮಾತ್ರ ಉಪಯುಕ್ತವಾದ ಕಾಯಿಬಿಡುವ ನಾಟಿ ಮರಗಳು; ಇನ್ನೆರಡು ಅರೆನಾಟಿ. ಅವನ್ನು ಬೈಗಂಪಲ್ಲಿ ಎಂದು, ಕೆಲವರೂ ಬಂಗನಪಲ್ಲಿ ಎಂದು ಕೆಲವರೂ ಹೇಳಿದರು. ಹಣ್ಣು ಚೆನ್ನಾಗಿದ್ದವು-ಆದರೆ ಅವು ಮಲಗೋವ, ರಸಪೂರಿ, ಬಾದಾಮಿ ತರಹ ಇಲ್ಲದೆ ಇದ್ದುದರಿಂದ ನಮ್ಮ ಸೊಸೈಟಿಯಲ್ಲಿ ಅವನ್ನು ಕೆಜಿಗೆ ಕೇವಲ ಎರಡು ರೂ. ನಂತೆ ಕೊಂಡರು. ಅದಿರಲಿ, ಮಿಕ್ಕ ನಲವತ್ತು ಮರಗಳಲ್ಲಿ ಐದು ಕೊಂಬೆಗಳನ್ನು ಕಳೆದುಕೊಂಡು ಉಡುಗಿದ್ದು ಚೇತರಿಸಿಕೊಳ್ಳುತ್ತಿರುವ ಮರಗಳು. ಇವುಗಳಲ್ಲಿ ತೀರಾ ಸಣ್ಣ ಮರ ಕೂಡ ನಾನೂರು ಕಾಯಿ ಕೊಟ್ಟಿತು. ಒಟ್ಟು ಬಂದ ಕಾಯಿ ನಲವತ್ತು ಸಾವಿರ; ಹಣ ಮೂವತ್ತೊಂದು ಸಾವಿರ. ಅಂದರೆ ಮರಕ್ಕೆ ಸರಾಸರಿ ರೂ. 775 ಬಂದಂತಾಯಿತು. ನಮಗೆ ವರ್ಷವೆಲ್ಲ ಖರ್ಚಾದದ್ದು ತೀರಾ ಕಮ್ಮಿ, ಕೂಲಿಯನ್ನೂ ಸೇರಿ ಮರಕ್ಕೆ ರೂ. 35 ಮಾತ್ರ.

ಎರಡನೆಯ ಟಿಪ್ಪಣಿ ಒಂದು ಒಗಟನದು. ಈ ಚಿತ್ರದುರ್ಗ ಜಿಲ್ಲೆಯ ದಲಿತ ಸಂಘರ್ಷ ಸಮಿತಿಯ (ದಾವಣಗೆರೆಯಲ್ಲಿ ವಾಸವಾಗಿರುವ) ಹನುಮಂತಪ್ಪನ ಬಗ್ಗೆ ಮೊನ್ನೆ ತಾನೆ ಬರೆದಿದ್ದೇನೆ. ಅಪ್ಪಟ ಹಳ್ಳಿಯ ಹುಡುಗನಂತಿರುವ ಈತನಲ್ಲಿ ಹಳ್ಳಿಯ ಕತೆಗಳು ಮನಾಮನಿ ಇವೆ. ನಮಗೆಲ್ಲ ಆದ ಅನುಭವವೇ ಈತನದೂ. ಈತನ ಅಜ್ಜ ಇವನನ್ನು ಕೆಣಕಿ ರೇಗಿಸಿ ಈತನ ಮುಖಭಂಗ ಮಾಡಲು ಒಂದು ಒಗಟು ಹೇಳಿದನಂತೆ. ಅದರ ಅರ್ಥ ಹೇಳಲೇಬೇಕೆಂದು ಸವಾಲು ಎಸೆದನಂತೆ. ಈ ಒಗಟಿನ ಬಗ್ಗೆ ಅನೇಕ ತಿಂಗಳು ಯೋಚಿಸಿದ ಹನುಮಂತಪ್ಪನಿಗೆ ಉತ್ತರ ಹೊಳೆಯಲಿಲ್ಲ. ಇದನ್ನು ಒಪ್ಪಿಕೊಳ್ಳಲು ಅಜ್ಜನನ್ನು ನೋಡಲು ಬರುವಷ್ಟರಲ್ಲಿ ಆತ ತೀರಿಕೊಂಡಿದ್ದ.

ಒಗಟು ಹೀಗಿದೆ:

ಹಳ್ಳಿಯಲ್ಲಿ ಒಬ್ಬ ಹುಡುಗ, ಒಬ್ಬಳು ಹುಡುಗಿ. ದಿನಾಲೂ ದನ ಕಾಯಲು ಹೋಗುತ್ತಿದ್ದರು. ಒಟ್ಟಿಗೇ ದನ ಕಾಯುತ್ತಿದ್ದರೂ ಒಂದು ದಿನವೂ ಒಬ್ಬರೊಂದಿಗೆ ಒಬ್ಬರು ಮಾತಾಡಿರಲಿಲ್ಲ. ಹೀಗೇ ಬೆಳೆದರು. ಇಬ್ಬರೂ ಯೌವನಿಗರಾದರು. ಒಂದು ವಸಂತದಲ್ಲಿ ಇಬ್ಬರೂ ಪರಸ್ಪರ ಪ್ರೀತಿಯಿಂದ ತುಂಬಿದ್ದರು. ಪ್ರಕೃತಿ ಮೋಹಕವಾಗಿತ್ತು. ಹುಡುಗಿ ತನ್ನ ಸಂತಸ ಹತ್ತಿಕ್ಕಲಾರದೆ ಮಾತಾಡಿದಳು. "ನೋಡು, ನನಗಾಗಿ ಆ ಮಾವಿನ ಕಾಯಿಯನ್ನು ಕಲ್ಲು ಹೊಡೆದು ಉದುರಿಸುವೆಯಾ?"

ಆಗಲಿ ಎಂದು ಆತ ಕಲ್ಲು ಎಸೆದ. ಕಾಯಿ ಬೀಳಲಿಲ್ಲ, ಬದಲಾಗಿ ಕಲ್ಲು ಕೊಂಬೆಗಳಲ್ಲಿ ಸಿಕ್ಕಿಹಾಕಿಕೊಂಡಿತು.

"ಹೋಗಲಿ, ಈ ಬುಟ್ಟಿಯಿಂದ ಹೊಡೆ" ಅಂದಳು.

ಬುಟ್ಟಿ ಕೂಡ ಕೊಂಬೆಯಲ್ಲಿ ಸಿಕ್ಕಿಹಾಕಿಕೊಂಡಿತು.

"ಏನು ಮಾಡಲಿ?" ಅಂದ.

"ನನ್ನನ್ನೇ ಎಸೆದು ಮಾವಿನಕಾಯಿ ಉದುರಿಸು" ಅಂದಳು.

ಆಗ ಆಕೆಯನ್ನೇ ಎಸೆದ. ಅವಳು ಕೂಡ ಕಲ್ಲು ಮತ್ತು ಬುಟ್ಟಿಯಂತೆಯೇ ಕೊಂಬೆಯಲ್ಲಿ ಸಿಕ್ಕಿಹಾಕಿಕೊಂಡಳು.

"ಈಗ ಏನು ಮಾಡಲಿ?" ಅಂದ.

"ಕೆಳಗಿನಿಂದ ಬೆಂಕಿ ಹಾಕಿ ಸುಟ್ಟು ಬಿಡು" ಅಂದಳು.



ಆತ ಏನು ಮಾಡುವುದೆಂದು ತಿಳಿಯದೆ ನಿಂತ.

......ಇದು ಒಗಟು. ಇದಕ್ಕೆ ಉತ್ತರ ಹೊಳೆದರೆ ಬರೆಯಿರಿ. ■

ಗಂಡಸಿನ ತಲೆ ಕೆಟ್ಟರೆ ಕುಡೀತಾನೆ, ಹೆಂಗಸಿನ ತಲೆ ಕೆಟ್ಟರೆ?

ಕೆ.ಶ್ರೀನಿವಾಸ್. ಮಂಡ್ಯ
ರಾಜಕಾರಣಿಗಳ ಸಮಾವೇಶಕ್ಕೂ ಹಿಜಡಾಗಳ ಸಮಾವೇಶಕ್ಕೂ ವ್ಯತ್ಯಾಸವೇನು?
* ಅಲ್ಲಿ ಸುಳ್ಳರ ಸಮಾಗಮ, ಇಲ್ಲಿ ಸ್ನೇಹಿತರ ಸಂಗಮ.


ಹನುಮಾನಾಯ್ಕ. ಶಿವಮೊಗ್ಗ
ಮೈಸೂರು ಸ್ಯಾಂಡಲ್ ಮೈಯೆಲ್ಲಾ ಘಮಘಮ, ತನನಂ ಸಿನಿಮಾ ನೋಡಿದ್ರ?
* ಮನಸ್ಸೆಲ್ಲಾ ಪುಳಕ.

ಅನಾರ್ಕಲಿಸಲೀಂ ಚಿಣ್ಯ. ಶ್ರೀರಂಗಪಟ್ಟಣ
ದಿನೇ ದಿನೇ ಬಟ್ಟೆ ಬಿಚ್ಚುವ ನಟಿಯರ ಸಂಖ್ಯೆ ಹೆಚ್ಚುತ್ತಿದೆಯಲ್ಲ?
* ಯಾರದ್ದೂ ನಿಂದೋ? ಅವರದ್ದೋ?

ಬಸವರಾಜ್ ಬೆಸ್ತರ್. ಹರಪನಹಳ್ಳಿ
ಡಾ. ರಮೇಶ್ ಮುನ್ನಾಭಾಯಿ ಆದರೆ ಅವರಪ್ಪ?
* ಆಲಿಬಾಬಾ.

ಪೂರ್ಣಿಮಾ. ಹಗರಿಬೊಮ್ಮನಹಳ್ಳಿ
ಗೌಡರ ವೈರಿಗಳ ನಾಶಕ್ಕೆ ಸುದರ್ಶನಯಾಗವಂತೆ; ಗೌಡರ ನಾಶಕ್ಕೆ?
* ಮಕ್ಕಳ ವೈಭೋಗ.

ವಿ.ಎಸ್. ಇಮ್ಮಾನುವೇಲ. ಮುಸರಕಲ
ಆಕಾಶದ ಮಳೆ ನೀರ ಹನಿಗೂ, ಹೆಣ್ಣಿನ ಕಣ್ಣೀರ ಹನಿಗೂ ಇರುವ ವ್ಯತ್ಯಾಸವೇನು?
* ಗೌರಿ ಕಣ್ಣೀರು ಇಂದಿರಮ್ಮನ ನೆಲಮಂಗಲದ ತೋಟದ ಬಾಳೆಗೆ ಸಾಕಾಗುತ್ತಿಲ್ಲ.



ಆಶಾ ಚಂದ್ರಶೇಖರ್. ಬೆಂಗಳೂರು
ಪಕ್ಕದಲ್ಲೇ ನಾರಾಯಣ ನೇತ್ರಾಲಯವಿದ್ದರೂ ಬೆಂಗಳೂರಿನ ಇಸ್ಕಾನ್ ಭಕ್ತಾದಿಗಳು ಇನ್ನು ಸರಿಯಾಗಿ ಕಣ್ಣು ಬಿಟ್ಟಿಲ್ಲವಲ್ಲಾ?
* ಅವರದ್ದು ಹುಟ್ಟು ಕುರುಡು ಗೊತ್ತಾ.

ದಿ.ಎಲ್.ಮಂಜು. ಬೆಂಗಳೂರು
ಜಮೀರ್ ಅಹಮ್ಮದ್ ಕುಮಾರಸ್ವಾಮಿಯಂತ ಮನುಷ್ಯ ಪ್ರಪಂಚದಲ್ಲೇ ಇಲ್ಲ ಎಂದಿದ್ದಾರೆ?
* 'ನ್ಯಾಷನಲ್' ಇನ್ನೂ 'World' ಕಂಡಿಲ್ಲ ಅನ್ನೋದಿಕ್ಕೆ ಇದೇ ಸಾಕ್ಷಿ.

ಎನ್.ವಿ.ಹಾಲಪ್ಪ. ಶಿವಮೊಗ್ಗ
ಕಾಂಗ್ರೆಸ್ ಎಂಬ ಕೊಚ್ಚೆಯಲ್ಲಿ 'ಲಂಕೇಶ್' ಅರಳಿಸುತ್ತಿರುವ ಕಮಲ ಯಾವುದು?
* ಅದು ಕಮಲ ಅಲ್ಲ, ಅಹಿಂದ!

ಸುಫಿಯಾ ಬೇಗಂ. ದೇವದುರ್ಗ
ಖರ್ಗೆ ನಕ್ಕ ದಿನ ಕೋ-ಜಾ ಸರ್ಕಾರ ಬೀಳುತ್ತಂತೆ!
* ಈ ಸರಕಾರ ಬೀಳೋದಿರಲಿ, ಸೋನಿಯಾ ಮೇಡಂ 'ನೀವೇ ಮುಖ್ಯಮಂತ್ರಿ' ಅಂದಾಗಲೂ ಖರ್ಗೆ ನಗುವುದಿಲ್ಲ ಅಂದಿದ್ದಾರೆ ಮಿಸೆಸ್. ಖರ್ಗೆ ಗೊತ್ತಾ.

ಕಣ್ಣಾಮುಚ್ಚಾಲೆ

ಶಿವಕುಮಾರ. ಸುರಪೂರ
ಕೆಲವರು ಮಿಥುನ ರಾಶಿಯೆಂದು ಹೇಳಿಕೊಳ್ಳಲು ನಾಚುವುದೇಕೆ?
* ಕಲ್ಪನಾ ವಿಲಾಸ.

ಆ.ರಾ.ಮಂಜುನಾಥ್. ಗೆದರೆ
ಸಿನಿಮಾಗಳಲ್ಲಿ ನಾಯಕಿಯರು ಬಿಚ್ಚಿದಷ್ಟು ಸಲೀಸಾಗಿ ನಾಯಕರೇಕೆ ಬಿಚ್ಚೋದಿಲ್ಲ?
* ಅಂಬಿ, ವಿಷ್ಣು ಬಿಚ್ಚಿದರೆ ಜನ ಥಿಯೇಟರ್‌ನಲ್ಲಿ ಇರ್ತಾರೇನ್ರೀ?

ಬಿ.ಚಂದ್ರೇಗೌಡ. ಬೆಂಗಳೂರು
ಮದುವೆಯಾದವಳಿಗೆ ತಾಳಿ, ಮದುವೆಯಾದವನಿಗೆ?
* ದವುರಿ.

ಮಂಚಾಲಿ ಗುರುರಾಜಚಾರು. ಬಳ್ಳಾರಿ
ನಕಲಿ CD, ನಕಲಿ ನೋಟು, ನಕಲಿ ಛಾಪಾ ಕಾಗದ ಹಾಗೆ ನಕಲಿ CM ಬಂದರೆ ಹೇಗೆ?
* ಈಗಿರೋನು ಅಸಲಿ ಎಂದುಕೊಂಡಿದ್ದೀರೇನು.

ಓದು ಸಿದ್ದೇಗೌಡ. ಕಬ್ಬೇಹಳ್ಳಿ
ಪಾಸ್ ತೋರ್‍ಸಿ ಆಂಟಿ ಅಂದ್ರ 'ಏನೇನೋ' ತೋರಿಸ್ತಾಳೆ?
* ನಿನಗೆ ಪಾಸ್‌ವರ್ಡ್ ಗೊತ್ತಿಲ್ಲ ಅಂತ ಆಕೆಗೆ ಗೊತ್ತಾ.

ಜಿ.ದಿ.ಎಲ್. ಕುಮಾರಿ. ಗದ್ದಂಬಚ್ಚಹಳ್ಳಿ
ಗಂಡಸಿನ ತಲೆ ಕೆಟ್ಟರೆ ಕುಡೀತಾನೆ, ಹೆಂಗಸಿನ ತಲೆ ಕೆಟ್ಟರೆ?
* ಕಡೀತಾಳೆ... ಗಂಡನ ತಲೆಯನ್ನು.

ಬಹುಮಾನಿತ ಪ್ರಶ್ನೆ

ಛೀ ತುಂಟಿ!

ಗಂಡ ಪದೇ ಪದೇ ರಾತ್ರಿ ಹೊತ್ತು ಹಂದಿ ಬೇಟೆಗೆಂದು ಮನೆಯಿಂದ ಹೊರಹೋಗುವುದು ಅವಳಲ್ಲಿ ಅನುಮಾನ ಮೂಡಿಸಿತ್ತು. ಇಷ್ಟು ಸಾರಿ ಬೇಟೆಗೆ ಹೋಗಿ ಬಂದವನು ಒಂದು ಹಂದಿಯನ್ನು ಹೊತ್ತು ತಂದಿರಲಿಲ್ಲ. ಕೇಳಿದರೆ "ಅಯ್ಯೋ, ಅದು ತಪ್ಪಿಸಿಕೊಂಡುಬಿಡ್ತು ಕಣೆ" ಎಂದು ಹೇಳುತ್ತಿದ್ದ.

ಎಂದಿನಂತೆ ಅಂದು ರಾತ್ರಿಯೂ ಶಿಕಾರಿಗೆ ಹೋಗಿ ಬೆಳಿಗ್ಗೆ ಹೊತ್ತಾದ ಮೇಲೆ ಬರಿಗೈಯಲ್ಲಿ ಬಂದ.



"ಏನ್ರಿ ಹಂದಿ ತಪ್ಪಿಸಿಕೊಂಡು ಬಿಡ್ತಾ?"

"ಊ ಕಣೆ, ಓಡಿಹೋಯ್ತು."

"ಓಡಿ ಹೋಗೋ ಮುನ್ನ ನಿಮ್ಮನ್ನು ತಬ್ಬಿಕೊಂಡು ಮುಖದ ತುಂಬಾ ಮುತ್ತು ಕೊಡ್ತಾ" ಗಂಡನ ಕೆನ್ನೆ ಮೇಲಿದ್ದ ಲಿಪ್‌ಸ್ಟಿಕ್ ಗುರುತುಗಳನ್ನು ಸವರುತ್ತಾ ಕೇಳಿದಳು.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಎಚ್.ಡಿ.ಕುಮಾರಸ್ವಾಮಿಯವರು ನನ್ನದು ಮಾನವ ಜಾತಿ, ನನಗೆ ಯಾವ ಜಾತಿಯೂ ಇಲ್ಲವೆಂದಿದ್ದಾರಲ್ಲ....?

ಸೆಪ್ಟೆಂಬರ್ 6ರ ಸಂಚಿಕೆಯ ನಮ್ಮ ಪ್ರಶ್ನೆ: ರೆಡ್ಡಿಯ ಗನ್ ಬಾಂಬ್ ಸ್ಫೋಟಗೊಳ್ಳಲಿಲ್ಲವೆಂದು ಸದಾನಂದಗೌಡ ಖುಷಿಯಾಗಿರುವುದು ಯಾಕೆ?

ನಿಮ್ಮ ಉತ್ತರ: ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವ ಬಿಜೆಪಿಯ ಭಂಡ ನಗೆ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ಹಸೀನಾ, ಉಜಿರೆ


ಪರ್ವತವನ್ನು ಉತ್ತರಿಸಿ ಆಚೆ ಹೋಗುವ ತನಕ ದಾರಿ ಸಿಕ್ಕುವುದಿಲ್ಲ

ಬೆಂಗಳೂರಲ್ಲಿ ಲಷ್ಕರ್ ಉಗ್ರರ ಕಚೇರಿ!

ನಿಷೇಧಿತ ಉಗ್ರಗಾಮಿ ಸಂಘಟನೆ ಲಷ್ಕರ್ ಎ ತೋಯಿಬ (ಎಲ್.ಇ.ಟಿ) ಬೆಂಗಳೂರಿನಲ್ಲಿ ತನ್ನ ನೆಲೆ ಊರುವ ಯತ್ನ ನಡೆಸಿದೆಯೇ? ಈಗ ದೊರೆಯುತ್ತಿರುವ ಸೂಚನೆ ಮತ್ತು ಸುಳಿವುಗಳನ್ನು ನೋಡಿದರೆ ಎಲ್.ಇ.ಟಿ. ಸಂಘಟನೆ ಬೆಂಗಳೂರಿನಲ್ಲಿ ನೆಲೆ ಊರುವುದರೊಂದಿಗೆ, ಸಂಘಟನೆಗೆ ಸ್ವಯಂಸೇವಕರ ನೇಮಕ, ಅದಗುದಾಣ ಮತ್ತು ಭಯೋತ್ಪಾದಕ ಕೃತ್ಯಗಳನ್ನು ನಡೆಸುವುದಕ್ಕೆ ಸಹ ಬೆಂಗಳೂರನ್ನೇ ಗುರಿಯಾಗಿಸಿಕೊಂಡಿರುವುದು ಸ್ಪಷ್ಟವಾಗಿದೆ. ಈ ಕಾರ್ಯಾಚರಣೆಗಾಗಿ ಎಲ್.ಇ.ಟಿ. ಸಂಘಟನೆ ಬೆಂಗಳೂರಿನಲ್ಲಿ ಒಂದು ಕಚೇರಿಯನ್ನು ಸಹ ತೆರೆದಿದ್ದ ವಿಚಾರ ತಡವಾಗಿ ಬೆಳಕಿಗೆ ಬಂದಿದೆ.

ಕಳೆದ ಡಿಸೆಂಬರ್ 31 ರಂದು ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮೇಲೆ ಉಗ್ರರು ದಾಳಿ ನಡೆಸಿ ಒಬ್ಬ ವಿಜ್ಞಾನಿಯನ್ನು ಹತ್ಯೆಗೈದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು, ಮೂಲತಃ ಕೋಲಾರ ಜಿಲ್ಲೆಯ ಚಿಂತಾಮಣಿಯವನಾದ ಅಫ್ಸರ್‌ಪಾಷ ಎಂಬಾತನನ್ನು ಹೈದರಾಬಾದಿನಲ್ಲಿ ಬಂಧಿಸಿದ್ದರು. ಆರಂಭದಲ್ಲಿ ಅಫ್ಸರ್‌ಪಾಷಾ ಬಾಂಗ್ಲಾದೇಶದ 'ಹರ್ಕತ್ ಉಲ್ ಜೆಹಾದ್' ಸಂಘಟನೆಗೆ ಸೇರಿದವನೆಂದು ಶಂಕಿಸಲಾಗಿತ್ತು. ಆನಂತರ 2006 ಮೇ ತಿಂಗಳ 15 ರಂದು ಅವನನ್ನು ಮಂಪರು ಪರೀಕ್ಷೆಗೆ ಒಳಪಡಿಸಿದಾಗ ಆತ ಎಲ್.ಇ.ಟಿ.ಗೆ ಸೇರಿದವನೆಂದು ಬಹಿರಂಗವಾಗಿ, ಅವನು ನೀಡಿದ ಹೇಳಿಕೆಯ ಮೂಲಕ ಎಲ್.ಇ.ಟಿ. ಸಂಘಟನೆಯು ನಗರದಲ್ಲಿ ನಡೆಸಲು ಉದ್ದೇಶಿಸಿದ್ದ ಭಯೋತ್ಪಾದಕ ಸಂಚುಗಳು ಹೊರಬಂದವು.

ಅಫ್ಸರ್‌ಪಾಷಾನ ಪ್ರಕಾರ ವೃತ್ತಿಯಲ್ಲಿ ಮೆಕಾನಿಕ್ ಆದ ಆತ, ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುತ್ತಿದ್ದಾಗ ವೆಲ್ಲೂರ್ ರೆಹಮಾನ್ ಮತ್ತು ಅಬುಹಂಜಾ ಎಂಬುವರು ಅವನಿಗೆ ಜೆಹಾದಿ ಬಗ್ಗೆ ಬೋಧಿಸುತ್ತಾರೆ. ನಂತರ ಅವನನ್ನು ಬಾಂಗ್ಲಾದೇಶಕ್ಕೆ ಶಸ್ತ್ರಾಸ್ತ್ರ ತರಬೇತಿಗಾಗಿ ಕಳುಹಿಸುತ್ತಾರೆ. ಬೆಂಗಳೂರಿನಲ್ಲಿ ಅವನೊಂದು 'ಮಹತ್ತರವಾದ' ಕಾರ್ಯಾಚರಣೆ ನಡೆಸಿದ ನಂತರ ಅವನನ್ನು ಎಲ್.ಇ.ಟಿ. ಸಂಘಟನೆಯ ದಕ್ಷಿಣ ಭಾರತದ ಕಮಾಂಡರ್ ಮಾಡುವುದಾಗಿ ಮತ್ತೊಬ್ಬ ಎಲ್.ಇ.ಟಿ. ನಾಯಕ ಅಬ್ದುಲ್ ರೇಜರ್ ರೆಹಮಾನ್ ಅಫ್ಸರ್‌ಪಾಷಗೆ ಆಶ್ವಾಸನೆ ನೀಡುತ್ತಾನೆ... ಹೀಗೆ ಸಾಗುವ ಅಫ್ಸರ್‌ಪಾಷ ಹೇಳಿಕೆಯ ಪ್ರಕಾರ, ಎಲ್.ಇ.ಟಿ.ಯ ಮುಖ್ಯಸ್ಥರು ಬೆಂಗಳೂರಿನ ಲಾಲ್‌ಬಾಗ್ ರಸ್ತೆಯ ಮಸೀದಿ ಪಕ್ಕದ




ಗಲ್ಲಿಯಲ್ಲಿರುವ ಕಟ್ಟಡದ ಎರಡನೇ ಮಹಡಿಯಲ್ಲಿರುವ 'ಗುರ್ಬ ಇಲಾಹಿ ಹಜೀಜ್' ಎಂಬ ಮತ್ತೊಂದು ಸಂಘಟನೆಯ ಹೆಸರಿನಲ್ಲಿ ತಮ್ಮ ಚಟುವಟಿಕೆಯನ್ನು ನಡೆಸುತ್ತಿರುತ್ತಾರೆ. ಇದಲ್ಲದೆ ಶಿವಾಜಿನಗರದಲ್ಲಿರು 'ತಮಿಳುಸಂಗಂ' ಕೂಡ ಎಲ್.ಇ.ಟಿ.ಯ ಇತ ಸದಸ್ಯರಿಗೆ ಸಂಪರ್ಕ ಕೇಂದ್ರವಾಗಿರುತ್ತೆ. ಅಫ್ಸರ್‌ಪಾ ಉಳಿದುಕೊಳ್ಳಲು ವಿಲ್ಸನ್ ಗಾರ್ಡನ್ನಿನ ಲಕ್ಕಸಂದ್ರ ಒಂದು ಮನೆಯನ್ನು ಎಲ್.ಇ.ಟಿ.ಯ ಉ ನಾಯಕರು ಅವನಿಗೆ ಕೊಡಿಸುತ್ತಾರೆ.

ತರಬೇತಿ ಮುಗಿಸಿ ಬೆಂಗಳೂರಿಗೆ ಬಂ ನೆಲೆಯಾಗುವ ಅಫ್ಸರ್‌ಪಾಷ, ಗಂಗಾನಗ ನೂರುಲ್ಲಾ, ಮೊಹಮದ್ ಇಬ್ರಾಹಿಂ ಮು ಪರ್ವಿಜ್ ಎಂಬುವರನ್ನು ಎಲ್.ಇ.ಟಿ ನೇಮಿಸಿಕೊಂಡು ಅವರನ್ನು ತರಬೇತಿಗಾಗಿ ಬಾ ದೇಶಕ್ಕೆ ತಾನೇ ಕಳುಹಿಸಿವುದಾಗಿ ಮಾ ನೀಡುತ್ತಾನೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆ ಸೈನ್ಸ್ ಮೇಲಿನ ದಾಳಿಗೆ ಮುನ್ನ, ದಾಳಿ ತಂಡದಲ್ಲಿದ್ದ ಶಮೀಮ್, ಶಬ್ಬೀರ್, ಸಾಜ್ಜಿದ್, ಶರೀ ಭಾಯಿ ಮತ್ತು ತಾನು 'ತಮಿಳು ಸಂಗಂ'ನ ಭೇಟಿಯಾಗಿ ದಾಳಿಯ ಬಗ್ಗೆ ಚರ್ಚಿಸಿದ ಎಂಬುದನ್ನು ಅಫ್ಸರ್ ಬಹಿರಂಗ ಪಡಿಸಿದ್ದಾನೆ. ದಾಳಿಕೋರರೆಲ್ಲರೂ ನಗರದ ಆಡುಗೋಡಿ ಬಡಾ ಯವರು.

ಭೂಗತರ ಬೆಂಬಲವೂ ಉಂಟು

ಕೆಳೆದ ವರ್ಷ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮೇಲೆ ದಾಳಿ ನಡೆದಾಗಲೇ ನಗರದ ಸಿಸಿಬಿ ಪೊಲೀಸರು ಈ ಉಗ್ರರಿಗೆ ಸ್ಥಳೀಯ ಭೂಗತರ ಸಂಪರ್ಕವಿರಬಹುದೆಂದು ಶಂಕಿಸಿದ್ದರು. ಆಗ ಸಿಸಿಬಿಯಲ್ಲಿದ್ದ ಇನ್ಸ್‌ಪೆಕ್ಟರ್ ರತ್ನಾಕರ್ ಶೆಟ್ಟಿ ಅಂತಹ ಸಂಪರ್ಕವಿದ್ದ ಸಮಾಜ ವಿರೋಧಿ ಶಕ್ತಿಗಳನ್ನು ಎಳೆ ತಂದು ರುಬ್ಬಿದ್ದರು. ಇವತ್ತಿಗೂ ನಗರದ ಎಂ.ಎಸ್. ರಾಮಯ್ಯ, ರಾಮನಗರ, ಚನ್ನಪಟ್ಟಣ ಇಂಜನಿಯರಿಂಗ್ ಕಾಲೇಜುಗಳಲ್ಲಿ ಓದುತ್ತಿರುವ ಉತ್ತರ ಭಾರತದ ಕೆಲವು ವಿದ್ಯಾರ್ಥಿಗಳ ಬಳಿ ಪಿಸ್ತೂಲುಗಳಿರುವುದು ಮತ್ತು ಅವರಿಗೆ ಉಗ್ರರ ಸಂಬಂಧಗಳಿರುವುದು ಗುಪ್ತಚಾರ ಇಲಾಖೆಗೆ ತಿಳಿದಿದೆ.



ಇತ್ತೀಚೆಗೆ ಇಂತಹ ಒಂದು ಲೋಕಲ್ ನೆಟ್ ವರ್ಕ್‌ನ್ನೇ ಉಗ್ರಗಾಮಿ ಸಂಘಟನೆಗಳು ಹೆಣೆಯುತ್ತಿವೆ ಎಂದು ಕೇಂದ್ರ ಬೇಹುಗಾರಿಕೆ ದಳದ ಮಾಹಿತಿಯ ಮೇರೆಗೆ ಮುಂಬೈ, ದೆಹಲಿ, ಉತ್ತರ ಪ್ರದೇಶ ಮತ್ತು ಬೆಂಗಳೂರು ಪೊಲೀಸರು ಸಮನ್ವಯದಲ್ಲಿ ಕಾರ್ಯಚರಣೆ ನಡೆಸುತ್ತಿದ್ದಾರೆ. ಜೆಹಾದಿಗಳಾಗಲಿ, ಉಗ್ರಗಾಮಿ ಗಳಾಗಲಿ ಭೂಗತ ಜಗತ್ತನ್ನು ನಂಬುವುದಿಲ್ಲ ಮತ್ತು ತಮ್ಮ ಕಾರ್ಯಚರಣೆಗಳಲ್ಲಿ ಅವರನ್ನು ಬಳಸಿಕೊಳ್ಳುವುದೂ ಇಲ್ಲ. ಅದೇ ರೀತಿ ಭೂಗತ ಜಗತ್ತಿನವರೂ 'ಜೆಹಾದಿ'ಗಳಾಗುವುದಕ್ಕೆ ಸಿದ್ಧರಿಲ್ಲ. ಆದರೆ ಅಡಗುದಾಣ, ಶಸ್ತ್ರಾಸ್ತ್ರ ಸಾಗಣೆ, ಮಾಹಿತಿ ಇಂತಹ ಸಣ್ಣಪುಟ್ಟ ಕೆಲಸಗಳಿಗೆ ಎಲ್ಲೋ ಪಾಕಿಸ್ತಾನದಿಂದ ಅಥವಾ ಬಾಂಗ್ಲಾದೇಶದಿಂದ ಬರುವ ಉಗ್ರಗಾಮಿಗೆ ಸ್ಥಳೀಯರು ಬೇಕೇಬೇಕು.


ಉಗ್ರರಿಗೆ ಇಂಥಾ ಒಂದು ನೆಟ್‌ವರ್ಕನ್ನು ಸ್ಥಳೀಯವಾಗಿ ಬೆಳೆಸಲು ಸಹಾಯವಾದವನು ಶಿವಾಜಿನಗರದ ಮುಕ್ತಿಯಾರ್ ಎಂಬ ಬಲವಾದ ಶಂಕೆ ಪೊಲೀಸರಿಗೆ. ಈತ ಸಣ್ಣಮಟ್ಟದ ಸ್ಮಗ್ಲರ್. ಇವನಿಗೆ ಕಾಶ್ಮೀರ ಮತ್ತು ಮುಂಬೈನ ಕೆಲವು ಉಗ್ರಗಾಮಿ ಸಂಘಟನೆಗಳ ಸಂಪರ್ಕವಿದೆ. ಅದೇ ರೀತಿ ಬೆಂಗಳೂರಿನ ಪಾತಕ ಪ್ರಪಂಚದ ಲಿಂಕೂ ಇದೆ. ಇಪ್ಪತ್ತು ದಿನದ ಹಿಂದೆ ಮುಂಬೈನ ಆ್ಯಂಟಿ ರೌಡಿ ಸ್ಕ್ವಾಡ್‌ನ ಇನ್ಸ್‌ಪೆಕ್ಟರ್ ಕಾಂಬ್ಳೆ ನೇತೃತ್ವದ ಪೋಲೀಸರ ತಂಡವು ಇದೇ ಕೆಲಸಕ್ಕಾಗಿ ಬೆಂಗಳೂರಿಗೆ ಬಂದಿತ್ತು. ಜಯನಗರದ ಸೌಥ್ ಎಂಡ್‌ನ ಸ್ವಾಗತ್‌ಲಾಡ್ಜ್‌ನಲ್ಲಿನ ಈ ಪೊಲೀಸರ ತಂಡ ಸಿಸಿಬಿ ಎಸಿಪಿ ಜಿತೇಂದ್ರನಾಥ್ ಮತ್ತು ಇನ್ಸ್‌ಪೆಕ್ಟರ್ ಗಚ್ಚಿನಗಟ್ಟಿಯವರೊಂದಿಗೆ ಈ ಬಗ್ಗೆ ಚರ್ಚಿಸಿದೆ.

ಒಂದು ಮೂಲದ ಪ್ರಕಾರ ನಗರದ ಟ್ಯಾನರಿ ರಸ್ತೆ, ಗೋರಿಪಾ ತಿಲಕ್‌ನಗರ, ಹಂತರಪಾಳ್ಯ ಮುಂತಾದ ಬಡಾವಣೆಗಳಲ್ಲಿ ಪಾಕಿಸ್ ಮತ್ತು ಬಾಂಗ್ಲಾದೇಶಿ ಮೂಲದ ಯುವಕರು ಕಂಡುಬರುತ್ತಿದ್ದಾರ ಈ ಜನರು ಭಾರತೀಯರೊಂದಿಗೆ ಸುಲಭವಾಗಿ ಬೆರೆತು ಹೋಗುತ್ತಾ ಪ್ರತ್ಯೇಕವಾಗಿ ಗುರುತಿಸುವುದು ಸುಲಭಸಾಧ್ಯದ ಕೆಲಸವಲ್ಲ. ಆದರ ಈಗ ಪೊಲೀಸರು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಹುಡುಕುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಹೆಚ್ಚಿನ ಜವಾಬ್ದಾರಿ ಪೊಲೀಸ್ ಇಲಾಖೆ ಗುಪ್ತಚಾರ ವಿಭಾಗದ ಮೇಲಿದೆ. ನಿವೃತ್ತಿಯ ಅಂಚಿನಲ್ಲಿರುವವರನ್ ನಿಷ್ಪ್ರಯೋಜಕರನ್ನೂ ಗುಪ್ತಚಾರ ದಳಕ್ಕೆ ವರ್ಗಾಯಿಸಬೇಕೆಂದು ಅಲಿಖಿ ನಿಯಮ ರಚಿಸಿರುವ ಪೊಲೀಸ್ ವರಿಷ್ಠರು, ಇನ್ನಾದರೂ ತಮ್ಮ ನಿಯ ಬದಲಿಸಲಿ.

ಮಸಾಜ್ ಪಾರ್ಲರ್‌ಗಳಲ್ಲಿ ವೇಶ್ಯಾವಾಟಿಕೆ

ಕಾರ್ಪೊರೇಟರ್ ಪತಿಯೇ ಪೋಷಕ



ಮಸಾಜ್ ಪಾರ್ಲರ್‌ಗಳ ಹೆಸರಿನಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದ್ದ ವೇಶ್ಯವಾಟಿಕೆ ಜಾಲವನ್ನು ಕಡೆಗೂ ಬೆಂಗಳೂರು ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೋಲೀಸರು ಭೇದಿಸಿದ್ದಾರೆ. ಸೆಪ್ಟೆಂಬರ್ 9 ರಂದು ಏಕಕಾಲದಲ್ಲಿ ನಗರದ ವಿವಿಧ ಭಾಗದ ಮಸಾಜ್ ಪಾರ್ಲರ್‌ಗಳ ಮೇಲೆ ನಡೆದ ದಾಳಿಯಲ್ಲಿ 51 ಯುವತಿಯರು, 7 ಲಕ್ಷ ರೂಪಾಯಿ ಹಣ, 35 ಮೊಬೈಲ್ ವಶಪಡಿಸಿ ಕೊಳ್ಳಲಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಧಂದೆಯ ಕಿಂಗ್‌ಪಿನ್ ಸಮಾಜ ಸೇವಕನ ಸೋಗಿನಲ್ಲಿರುವ ಮುಜೀಬ್ ಬಂಧಿತನಾಗಿದ್ದಾನೆ.




ಕಾರ್ಪೊರೇಟರ್ ನಾಜರೀನಾ

ಮುಜೀಬ್ ಬೇರ್‍ಯಾರೂ ಅಲ್ಲ, ವಿವೇಕನಗರ ವಾರ್ಡ್ ನಂ. 80; ಈಜಿಪುರದಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಆಯ್ಕೆಯಾಗಿರುವ ನಾಜರೀನಾ ಎಂಬಾಕೆಯ ಪತಿರಾಯ. ಮುಜೀಬ್ ಕೂಡ ಮಾಜಿ ಕಾರ್ಪೋರೇಟರ್. ಕಳೆದ ಪಾಲಿಕೆ ಚುನಾವಣೆಯಲ್ಲಿ ವಾರ್ಡ್ 80 ಮಹಿಳಾ ಮೀಸಲೆಂದು ಘೋಷಿಸಲ್ಪಟ್ಟಾಗ ತನ್ನ ಪತ್ನಿಯನ್ನು ಕಣಕ್ಕಿಳಿಸಿ ಸ್ವತಂತ್ರ ಅಭ್ಯರ್ಥಿಯಾಗಿ ಗೆಲ್ಲಿಸಿದ್ದ. ಇಂತಹ ಸಮಾಜ ಸುಧಾರಕನ ಪೋಷಣೆಯಲ್ಲಿ ಮಸಾಜ್ ಪಾರ್ಲರ್‌ಗಳು ನಡೆಯುತ್ತಿದ್ದವು.

ಹಾಗಂತ ಮಸಾಜ್ ಪಾರ್ಲರುಗಳ ಚಟುವಟಿಕೆ ಇಂದು ನೆನ್ನಿನದೇನಲ್ಲ, ಕಳೆದ ಐದಾರು ವರ್ಷಗಳಿಂದ ಇವು ನಿರಾತಂಕವಾಗಿ ನಡೆಯುತ್ತಿವೆ. ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ತಿಂಗಳ ಪ್ರಸಾದ ತಲುಪುತ್ತಿದ್ದುದರಿಂದ ಅಲ್ಲಿನ ಅಧಿಕಾರಿಗಳು ಈವರೆಗೆ ತೆಪ್ಪಗಿದ್ದರಷ್ಟೇ. ಆಯುರ್ವೇದಿಕ್ ಮಸಾಜ್, ಹರ್ಬಲ್ ಮಸಾಜ್ ಎಂದು ಇಂಗ್ಲಿಷ್ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಸಂಪರ್ಕಿಸಿ ಎಂದು ಮೊಬೈಲ್ ಫೋನ್ ನಂಬರ್ ನೀಡುತ್ತಿದ್ದ ಈ ಪಾರ್ಲರ್‌ಗಳು, "ಡೋರ್ ಸರ್ವೀಸ್" ಅಂದರೆ, ನಿಮ್ಮ ಮನೆಗೆ ಬಂದು ನಿಮ್ಮ 'ಅವಶ್ಯಕತೆ'ಯನ್ನು ಪೂರೈಸುವ ವಿಶೇಷ ಸೇವೆಯನ್ನು ಸಹ ನೀಡುತ್ತಿದ್ದವು. (ಬಾಕ್ಸ್ ನೋಡಿ)


ಬೆಂಗಳೂರಿನಲ್ಲಿ ಯಾವಾಗ ಲೈವ್‌ಬ್ಯಾಂಡ್‌ಗಳು, ಬಂದ್ ಆದವೋ, ಅದನ್ನೇ ನಂಬಿ ಬದುಕುತ್ತಿದ್ದ ಬಹುತೇಕ ಹುಡುಗಿಯರು ದಿಕ್ಕಾಪಾಲಾದರು. ಕೆಲವರು ಬಾಂಬೆ, ಕೊಲ್ಕತ್ತಾ ಸೇರಿದರೆ ಮತ್ತೆ ಇಲ್ಲೇ ಕೆಲವರು ನಗರದ ಹೊರ ವಲಯಗಳ ರಿಸಾರ್ಟ್‌ಗಳಲ್ಲಿ ನಡೆಯುತ್ತಿದ್ದ ಲೈವ್‌ಬ್ಯಾಂಡ್‌ಗಳಿಗೆ ಶಿಫ್ಟ್ ಆದರು. ಆದರೆ ಅಲ್ಲೂ ಪೊಲೀಸರ ಕಾಟ ಆರಂಭವಾದಾಗ ಹುಡುಗಿಯರು ಬೇರೆ ದಾರಿ ಹುಡುಕತೊಡಗಿದರು. ಹೀಗೆ ದಾರಿ ಕಾಣದೆ ತೊಳಲಾಡುತ್ತಿದ್ದವರಿಗೆ ಆಶ್ರಯ ನೀಡಿ ಅವರನ್ನು ಮಸಾಜ್ ಪಾರ್ಲರಿನಲ್ಲಿ ತಂದು ಮಲಗಿಸಿದವರೇ



ನಾಜರಿನಾ- ಮುಜೀಬ್ ಪುರಪಿತೃ ದಂಪತಿಗಳು. ಸೆಪ್ಟೆಂಬರ್ 9 ರಂದು ಬಂಧಿತರಾದ ಹುಡುಗಿಯರೆಲ್ಲರೂ ಮಣಿಪುರ್, ಅಸ್ಸಾಂ, ರಾಜಸ್ಥಾನ, ನಾಗಾಲ್ಯಾಂಡ್, ಕೊಲ್ಕತ್ತಾ ಮತ್ತು ಮುಂಬೈನಿಂದ ಬಂದು ಮೊದಲು ಲೈವ್‌ಬ್ಯಾಂಡ್‌ನಲ್ಲಿ ಹಾಡುತ್ತಿದವರು. ನಂತರ ಮುಜೀಬ್ ಅಡ್ಡೆಯನ್ನು ಸೇರಿದ್ದಾರೆ.

ಇಂತಹ ಹುಡುಗಿಯರು ಗಿರಾಕಿಗಳನ್ನು ಕುದುರಿಸ ವಿಧಾನವೇ ಬೇರೆ. ಗಿರಾಕಿ ಹೊಸಬ ಎಂದು ಗೊತ್ತಾ ಇವರು ನೇರವಾಗಿ ವ್ಯವಹಾರಕ್ಕೆ ಇಳಿಯುವುದಿ ಆಯಿಲ್ ಮಸಾಜ್‌ಗೆ 500 ರೂಪಾಯಿ, ಪೌ ಮಸಾಜ್‌ಗೆ 350 ಎಂದು 'ಮೆನು' ಕಾ ಮಡಗುತ್ತಾರೆ. ಅದರ ಮೇಲೆ ನೂರೋ-ಇನ್ನೂರ ಟಿಪ್ಸ್ ಇದ್ದೇ ಇರುತ್ತೆ. ಗಿರಾಕಿ ಪಳಗಿದವನಾದರೆ ಅಡ್ವಾನ್ಸ್ ಆಗುತ್ತಾನೆ. ಅಥವಾ ಹುಡುಗಿಯರೇ ಏನ "ಎಕ್ಸಾಟ್ರಾ ಟ್ರೀಟ್‌ಮೆಂಟ್ ಬೇಕಾ" ಎಂದು ಕೇಳುತ ಆ "ಏಕ್ಸ್‌ಟ್ರಾ ಟ್ರೀಟ್‌ಮೆಂಟ್" ಔಟ್ ಡೋರ್ ಅ ಇನ್ ಡೋರ್ ಎಲ್ಲೇ ಆಗಬಹುದು. ಒಂದೊ ಒಂದೊಂದು ರೇಟು. ಆದರೆ ಇದರ ಮೇಜರ್ ಶೇ ಸೇರುವುದು ಮುಜೀಬ್‌ಗೆ.

ಕೋರಮಂಗಲ, ಇಂದಿರಾನಗರ ಮತ್ತು ಸದಾಶಿವನಗರದಂತಹ ಪ್ರತಿಷ್ಠಿತ ಬಡಾವಣೆಗಳಲ ಇಂತಹ ಮಸಾಜ್ ಪಾರ್ಲರ್‌ಗಳು ಲಾಗಾಯ್ತಿನಿಂದ ನಡೆಯು ಮಣೆಕ್‌ಸೋನಿ, ಮಮತ ತೊಕ್ಕಳ್ ಮತ್ತು ಜಾಜಿ ಎಂಬ ವೆಲ್‌ಕನೆಕ್ಟೆಡ್ ಕುಖ್ಯಾತರು ಇಂತಹ ಕೊ ಧಂದೆಗೆ ಪ್ರತಿಷ್ಠೆಯ ಸೆರಗ ಹೊದಿಸಿ ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆ. ಕೇಂದ್ರ ಅಪರಾಧ ವಿಭಾಗದ ಡಿಸಿಪಿ ರವಿಕಾಂತೇಗ ಎಸಿಪಿಗಳಾದ ಬಿ.ಕೆ. ಶಿವರಾಂ ಮತ್ತು ಜಿತೇಂದ್ರನ ರವರು ಇಂತಹ ಪ್ರತಿಷ್ಠಿತ ಹೈಟೆಕ್ ವ್ಯಭಿಚಾರಿಗಳ ಸ್ವಲ್ಪ ಬಿಸಿ ಮುಟ್ಟಿಸಿದರೆ ಬೆಂಗಳೂರಿನ ಮಯಾ ರಿಗೂ ಒಂದು ನೆಮ್ಮದಿ.


GOVERNMENT OF KARNATAKA
FORENSIC SCIENCE LABORATORY
Madiwala, Bangalore

[illegible] 15th May 2006

To,
The Asst. Commissioner of Police
[illegible] Sub Dn
Bangalore

NARCO ANALYSIS EXAMINATION REPORT [illegible]

[illegible]

Regarding the Bangalore [illegible]

"Regarding the evening on 15th at Tamil Sangam he told that he had met [illegible] and Sharif and along with them Myuns, Noorulla, Mohammed Ilias were also there with him and they had decided about the plan of attack at Bangalore. Their first task was to attack a mosque on 31st December and to raise the communal violence and their next task was to attack the private multinational buildings like HP and then attack Vidhan Soudha."

ಫೋರೆನ್ಸಿಕ್ ಲ್ಯಾಬ್‌ನ ನಾರ್ಕೋ ಅನಾಲಿಸಿಸ್ ರಿಪೋರ್ಟ್


ಮಂಪರು ಪರೀಕ್ಷೆಯ ಸಮಯದಲ್ಲಿ ಅಫ್ಸರ್‌ಪಾಷ ಬಹಿರಂಗಪಡಿಸಿರುವ ಮತ್ತೊಂದು ಸ್ಫೋಟಕ ವಿಷಯವೆಂದರೆ, ವಿಧಾನಸೌಧ, ಮಸೀದಿ ಹಾಗೂ ಬಹುರಾಷ್ಟ್ರೀಯ ಕಂಪನಿಯೊಂದನ್ನು ಸ್ಫೋಟಿಸುವ ಉದ್ದೇಶಿತ ಸಂಚು. ಅಫ್ಸರ್‌ಪಾಷ ಪ್ರಕಾರ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮೇಲಿನ ದಾಳಿಗೆ ಮುನ್ನ ಮಸೀದಿಯೊಂದನ್ನು ಸ್ಫೋಟಿಸುವ ಸಂಚನ್ನು ರೂಪಿಸಲಾಗಿತ್ತಂತೆ. ಈ ಕೃತ್ಯದ ಮೂಲಕ ಕೋಮುಗಲಭೆ ಉಂಟು ಮಾಡಿ ಶಾಂತಿ ಕದಡುವುದು ಎಲ್.ಇ.ಟಿ. ಉದ್ದೇಶವಾಗಿತ್ತು. ಈ ಸಂಚು ಕಾರ್ಯರೂಪಕ್ಕೆ ಬಂದಿದ್ದರೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ದಾಳಿಗೆ ಮುನ್ನ ಅಂದರೆ **2005** ಡಿಸೆಂಬರ್ **31** ರಂದು ಮಸೀದಿ ಸ್ಫೋಟಗೊಳ್ಳಬೇಕಿತ್ತು. ಆದರೆ ಈ ಸಂಚನ್ನು ಏಕೆ ಕೈಬಿಡಲಾಯಿತೆಂಬ ವಿವರವನ್ನು ಅಫ್ಸರ್ ನೀಡುವುದಿಲ್ಲ.

ಇದರ ನಂತರದ ಸರದಿ ವಿಧಾನಸೌಧ. ಸಾಮಾನ್ಯವಾಗಿ ಮಧ್ಯಾಹ್ನ **3.30** ರಿಂದ ವಿಧಾನಸೌಧದ ಒಳಗೆ ಸಾರ್ವಜನಿಕರು ಪ್ರವೇಶಿಸಲು ಅವಕಾಶವಿದೆ. ಈ ಸಮಯದಲ್ಲಿ ಕೆಲವು ಕಾರ್ಯಕ್ರಮಗಳು ಸಹ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಏರ್ಪಡುತ್ತವೆ. ಇಂತಹ ಸಂದರ್ಭದಲ್ಲಿ ವಿಧಾನಸೌಧದ ಒಳ ಪ್ರವೇಶಿಸುವುದು, ಸ್ಫೋಟಕಗಳನ್ನು ಹುದುಗಿಸುವುದೂ ಸುಲಭ. ಈ ಸಮಯದಲ್ಲಿ ಸ್ಫೋಟವಾದರೆ ಸಾವಿನ ಸಂಖ್ಯೆಯೂ ಅಧಿಕ. ಹಾಗಾಗಿ ವಿಧಾನಸೌಧ ಸ್ಫೋಟಕ್ಕೆ ಮಧ್ಯಾಹ್ನ **3.30** ರಿಂದ **4.30** ಆಯ್ಕೆ ಮಾಡಲಾಗಿತ್ತಂತೆ. ಈ ಕೃತ್ಯ ಎಸಗಲು ಅಫ್ಸರ್ ಹಲವಾರು ಬಾರಿ ತಾಲೀಮು **(dry run)** ಸಹ ನಡೆಸಿ ಬಾಂಬ್ ಹುದುಗಿಸಿ ಇಡಬಹುದಾದ ಸ್ಥಳವನ್ನು ಗುರುತಿಸಿ ಇಟ್ಟಿದ್ದನಂತೆ.

ವಿಧಾನಸೌಧ ಸ್ಫೋಟಿಸಿದ ನಂತರ, ಬಹುರಾಷ್ಟ್ರೀಯ ಕಂಪನಿಯಾದ ಹ್ಯಾವ್ಲೆಟ್ ಅಂಡ್ ಪ್ಯಾಕಾರ್ಡ್ (ಎಚ್.ಪಿ.) ಇಂತಹ ಒಂದು ಕಂಪೆನಿ ಸ್ಫೋಟಿಸಿದರೆ ಸಾಕು, ಬಹುರಾಷ್ಟ್ರೀಯ ಕಂಪನಿಗಳು ಹೇಳದೇ ಕೇಳದೇ ಈ ರಾಜ್ಯ ಬಿಟ್ಟು ಓಡುತ್ತವೆ. ಆ ಮೂಲಕ ರಾಜ್ಯದ ಆದಾಯಕ್ಕೆ ನಷ್ಟವಾಗುತ್ತೆ ಎಂಬುದು ಉಗ್ರರ ಲಾಜಿಕ್ಕು. ಆದರೆ ಭಾರತ ವಿಜ್ಞಾನ ಸಂಸ್ಥೆಯ ಮೇಲಿನ ದಾಳಿಯ ನಂತರ ಅಫ್ಸರ್‌ಪಾಷ ಸೇರಿದಂತೆ ಆತನ ಇನ್ನಿತರ ಅನುಚರರು ಸಿಕ್ಕಿಬಿದ್ದು ಸದ್ಯಕ್ಕೆ ಈ ಕುಕೃತ್ಯಕ್ಕೆ ತೆರೆಬಿದ್ದಿದೆ. ಆದರೆ ಭಯೋತ್ಪಾದನೆ ಮತ್ತು ಉಗ್ರಗಾಮಿಗಳು ರಕ್ತಬೀಜಾಸುರನ ವಂಶವಿದ್ದಂತೆ. ಒಬ್ಬ ಸತ್ತರೆ ಇಬ್ಬರು ಹುಟ್ಟುತ್ತಾರೆ. ಇದು ಅಂತ್ಯ ಎಂದು ತಿಳಿದರೆ ಅದೇ ತಾನೇ ಆರಂಭವಾಗಿರು ತ್ತದೆ.

-ಎಂ.ಎಸ್.ಎಸ್

ಅಂದು ಕೊತ್ವಾಲನ ಸಾಮ್ರಾಜ್ಯ



ಮಸಾಜ್ ಪಾರ್ಲರ್, 1980 ರಲ್ಲಿ ಅತ್ಯಂತ ಕುಖ್ಯಾತಿ ಮತ್ತು ಪಾತಕಲೋಕಕ್ಕೆ ಅತಿಹೆಚ್ಚಿನ ಆಮದನಿ ಒದಗಿಸುತ್ತಿದ್ದ ವ್ಯವಹಾರ. ಭೂಗತ ಜಗತ್ತಿನ ಏಕೈಕ ಡಾನ್ ಆಗಿ ಮೆರೆಯುತ್ತಿದ್ದ ಕೊತ್ವಾಲ್ ರಾಮಚಂದ್ರ, ಅಂದು ಬೆಂಗಳೂರಿನಲ್ಲಿದ್ದ ಅಂದಾಜು 200 ಕ್ಕೂ ಹೆಚ್ಚು ಮಸಾಜ್ ಪಾರ್ಲರ್‌ಗಳ ಮೇಲೆ ನಿಯಂತ್ರಣ ಹೊಂದಿದ್ದ. ರಾಜಾಜಿನಗರ ಮತ್ತು ಬಸವೇಶ್ವರ ನಗರ ಎರಡರಲ್ಲೇ 12 ಕ್ಕೂ ಹೆಚ್ಚು ಮಸಾಜ್ ಪಾರ್ಲರ್‌ಗಳಿದ್ದವೆಂದರೆ ನೀವೇ ಯೋಚಿಸಿ.


ಮಸಾಜ್ ಪಾರ್ಲರ್‌ಗಳ ವಸೂಲಾತಿಗೆಂದೇ ಕೊತ್ವಾಲ್ ರಾಮಚಂದ್ರ ಒಂದು ರೌಡಿಗಳ ಪಡೆ ಇಟ್ಟಿದ್ದ. ಇತ್ತೀಚೆಗೆ ಕೊಲೆಯಾದ ಶ್ರೀರಾಂಪುರದ ಕಿಟ್ಟಿ ಈ ಪಡೆಯ ನಾಯಕ. ಇವನೊಂದಿಗೆ ಆರ್‌ಬೆರಳು ಬಾಬು, ಕಿಲಾರಿ ರೋಡ್ ನಂಜುಂಡ, 18 ನೇ ಕ್ರಾಸ್ ಕೆಂಪ ಮುಂತಾದ ಪರಿರುತ್ತಿದ್ದರು. ಸಂಜೆ ಈ ಪಡೆ ತಮ್ಮ ಯಜ್ಡಿ ಬೈಕ್‌ಗಳಲ್ಲಿ ವಸೂಲಾತಿಗೆ ಪಾರ್ಲರ್‌ಗಳ ಮುಂದೆ ಬಂದಿಳಿದರೆಂದರೆ, ಹಫ್ತಾ ವಸೂಲಿಯೊಂದಿಗೆ ತಮ್ಮ ತೀಟೆಯನ್ನು ತೀರಿಸಿಕೊಂಡೇ ಅವರು ಅಲ್ಲಿಂದ ತೊಲಗುತ್ತಿದ್ದುದು.

ಇದೇ ಮಸಾಜ್ ಪಾರ್ಲರ್ ಹಫ್ತಾ ವಿಚಾರದಲ್ಲಿ ಶ್ರೀರಾಂಪುರ ಕಿಟ್ಟಿ ಮತ್ತು ಮತ್ತೊಬ್ಬ ಕುಖ್ಯಾತ ರೌಡಿ ಸೀಮೆಎಣ್ಣೆ ಸಿದ್ದನಿಗೆ ಜಿದ್ದು ಹುಟ್ಟಿ, ಕೊನೆಗೆ ಬಸವೇಶ್ವನಗರದ ಯಾಶಿಕಾ ಮಸಾಜ್ ಪಾರ್ಲರ್‌ನಲ್ಲಿ ಕಿಟ್ಟಿಯ ಹುಡುಗರು ಸೀಮೆಎಣ್ಣೆ ಸಿದ್ದನನ್ನು ಭೀಕರವಾಗಿ ಕತ್ತರಿಸಿ ಕೊಂದು ಬಿಟ್ಟರು. ಮಸಾಜ್ ಪಾರ್ಲರ್ ಮಾಲೀಕರು ರೌಡಿಗಳನ್ನು ಕಂಡರೆ ಹೇಗೆ ಹೆದರುತ್ತಿದ್ದರೆಂದರೆ, ರೆಸಿಡೆನ್ಸಿ ರಸ್ತೆಯಲ್ಲಿ ಮಸಾಜ್ ಪಾರ್ಲರ್ ನಡೆಸುತ್ತಿದ್ದ ಜಾಜಿ ಎಂಬುವಳು, ಜೇಡರಹಳ್ಳಿ ಕೃಷ್ಣಪ್ಪ ಪಾರ್ಲರ್‌ಗೆ ಬಂದಿದ್ದಾನೆ ಎಂಬ ವಿಚಾರ ಕೇಳಿ ಹೆದರಿ ಎರಡನೇ ಮಹಡಿಯಿಂದ ಧುಮುಕಿ ಎರಡೂ ಕಾಲು ಮುರಿದುಕೊಂಡಿದ್ದಳು.

ಈಗ ಮತ್ತೆ ಮಸಾಜ್ ಪಾರ್ಲರ್‌ಗಳು ಆರಂಭವಾಗಿ ಎರಡನೇ ಇನ್ನಿಂಗ್ಸ್ ಆರಂಭವಾಗುತ್ತಿರುವುದನ್ನು ಸಿಸಿಬಿ ಪೊಲೀಸರು ಆರಂಭದಲ್ಲೇ ಚಿವುಟಹಾಕಿದ್ದಾರೆ. ಯಥಾಸ್ಥಿತಿ ಮುಂದುವರಿಯಲಿ.

ಅಂಗೆ, ಮಾದಿಗರ ಮನೆಲೂ ಮನಗಿ ಸಾರ್!

ನಮ್ಮ ದೇವೇಗೌಡರು ಏಕಾಂಗಿಯಾಗಿ ಪಾರ್ಟಿ ಕಟ್ಟುವ ನೆಪದಲ್ಲಿ ದಂಡಯಾತ್ರೆಯಂತೆ ಒಂದೇ ಕಡೆಗೆ ಹಲವು ಭಾರಿ ಹೋಗಿ ಬರುತ್ತಿರುವುದರ ಗುಟ್ಟೇನು ಎಂಬ ನಿಗೂಢ ಸಂಗತಿ ಇದೀಗ ಬಯಲಾಗಿದೆಯಂತಲ್ಲಾ. ನಮಗೆ ಬಂದಿರುವ ನಂಬಲು ಯೋಗ್ಯವಲ್ಲದ ಮಾಹಿತಿಯ ಪ್ರಕಾರ, ದೇವೇಗೌಡರ ಯಾತ್ರೆಯ ಉದ್ದೇಶವೇನೆಂದರೆ, ತಮ್ಮ ಕುಟುಂಬದ ಪಾರ್ಟಿಯಲ್ಲಿ ಯಾರಾದರೂ ಸಿದ್ಧರಾಮಯ್ಯನ ಸುದ್ದಿ ಮಾತನಾಡುತ್ತಿದ್ದರೆ, ಅದನ್ನು ಪತ್ತೆಹಚ್ಚಿ ಕ್ರಮೇಣ ಅವರೇ ಹೊರಹೋಗುವಂತೆ ಮಾಡುವುದು. ಆಮೇಲೆ ಯಾರಾದರೂ ತನ್ನ ಮತ್ತು ತನ್ನ ಕುಟುಂಬವನ್ನು ಆಡಿಕೊಂಡು ನಗುತ್ತಿದ್ದರೆ, ಅವರಿಗೂ ಅದೇ ಶಾಸ್ತಿ ಮಾಡುವುದು. ಎಲ್ಲಕ್ಕಿಂತ ಮುಖ್ಯವಾಗಿ ಯಾರಾದರೂ ಕಾಂಗ್ರೆಸ್‌ನಲ್ಲಿದ್ದೂ ಅತೃಪ್ತ ಮನಸ್ಸಿನಿಂದ ಕುದಿಯುತ್ತಿದ್ದರೆ ಅವರನ್ನು ಹತ್ತಿರ ಕರೆದು, ಭುಜ ಹಿರುಕಿ, ತೊಡೆ ಸವರಿ "ಮುಂದೆ ನಮ್ಮ ಪಾರ್ಟಿ ಟಿಕೆಟ್ ನಿನಗೆ ಗ್ಯಾರಂಟಿ. ಇಲ್ಲವಾದರೆ ಆ ಬಂಗಾರಪ್ಪನ ಸಮಾಜವಾದಿ ಪಾರ್ಟಿಯಿಂದಲಾದರೂ ಕೊಡಿಸುತ್ತೇನೆ" ಎಂದು ಹೇಳುತ್ತ ಹೋಗುವುದಂತಲ್ಲ, ಥೂತ್ತೇರಿ!



* * * * * *

ಜೆಡಿಎಸ್ ಅಧ್ಯಕ್ಷನಾಗಿ ಸಮಾಜವಾದಿ ಪಾರ್ಟಿ ಟಿಕೆಟ್ ಕೊಡಿಸುವ ಈ ತಿಕ್ಕಲು ದೇವೇಗೌಡರ ಹುನ್ನಾರವೇನಿರಬಹುದೆಂದು ಇಡೀ ದಿನ ಯೋಚಿಸಿದ ಹೊಸ ಪಕ್ಷಾಂತರಿಗಳಿಗೆ, ಹೊಸದಾಗಿ ಜ್ಞಾನೋದಯವಾದುದ್ದೇನೆಂದರೆ, ಸಮಾಜವಾದಿ ಪಾರ್ಟಿ ಟಿಕೆಟ್‌ನಿಂದ ಸ್ಪರ್ಧಿಸಿ ಸೋತರೂ, ವ್ಯಥೆಪಡುವಂತಿಲ್ಲ. ಏಕೆಂದರೆ ಒಂದೋ ಕಾಂಗ್ರೆಸ್ ಸೋತಿರುತ್ತದೆ, ಇಲ್ಲ ಬಿಜೆಪಿ ಗೆದ್ದಿರುತ್ತದೆ. ಅಂತೂ ನಮಗೆಷ್ಟೇ ಲಾಸಾದರೂ ಈ ಕಾಂಗ್ರೆಯಕ್ಕುಟ್ಟಿ ಹೋದರೆ ಸಾಕೆಂದು ಯೋಚಿಸಿ ಶುದ್ಧ ಪುಡಾರಿ ರಾಜಕಾರಣವನ್ನಾರಂಭಿಸಿರುವ ದೇವೇಗೌಡ, ಈಗಾಗಲೇ ಬಂಗಾರಪ್ಪನನ್ನು ಪ್ರಚೋದಿಸಿ, "ನೀವೂ ಒಂದು ಸಭೆ ಮಾಡಿ. ನಾನೂ ಒಂದು ಸಭೆ ಮಾಡುತ್ತೇನೆ. ಮುಂದಿನ ಕರ್ನಾಟಕದ ಭೋಜನವೇನಿದ್ದರೂ ನಮ್ಮಿಬ್ಬರಲ್ಲೇ ಹಂಚಿಕೆಯಾಗಬೇಕು" ಎಂದು ಹೇಳಿದ್ದೇ ತಡ 'ಬಂ' ಮಗನ ದ್ವೇಷವನ್ನು ಬದಿಗಿಟ್ಟು, ಜೆಡಿಎಸ್ ಚೋಣಚಿ ಹೊಕ್ಕವನಂತೆ ಓಡಾಡುತ್ತಿದ್ದಾನಂತಲ್ಲಾ, ಥೂತ್ತೇರಿ!!



* * * * * *

ಜೆಡಿಎಸ್‌ನ ಅತೃಪ್ತ ಶಾಸಕರೂ ಕೊಂಡಾಡುವಂತಹ ಕ್ರಾಂತಿ ಮಾಡಿರುವ ಕುಮಾರಣ್ಣನ ಸಾಧನೆ ಮೆಚ್ಚಿ, ಒಂದು ಅಭಿನಂದನೆ ಹೇಳಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

"ಹಲೋ ಸಾರ್, ನನ್ನ ಹೃತ್ಪೂರ್ವಕ ಅಭಿನಂದನೆ ಸಾರ್!"

"ಈಗ್ಲೆ ಹೇಳಿದ್ರೆ ಹ್ಯಂಗೆ? ಇನ್ನು ಮಂತ್ರಿ ಮಂಡಲ ವಿಸ್ತರಣೆ ಆಗಬೇಕು. ನಾನು ಮಂತ್ರಿ ಆಗಬೇಕು. ಆಗಲಾದ್ರು ಅಭಿನಂದನೆ ಅಂದ್ರೆ ಅದಕೊಂದರ್ತ ಇರತದೆ ಕಂಡ್ರೀ."

"ತಾವು ಕುಮಾರಣ್ಣ ಅಲ್ಲವ ಸಾರ್?"

"ನಾನು ಜಿ.ಟಿ. ದೇವೇಗೌಡ ಕಂಡ್ರಿ. ಯಾರ್ರಿ ನೀವು?"

"ನಾನು ಪತ್ರಿಕೆಯವನು ಸಾರ್, ಕುಮಾರಣ್ಣರಿಲ್ಲವ ಅಲ್ಲಿ?"

"ಅವ್ರುರೆ ಕಂಡ್ರಿ. ಪಾಪ ಹರಿಜನರ ಜೊತೆ ಮಾತಾಡ್ತ ಅವ್ರುರೆ."

"ಮಾತಾಡ್ಲಿ ಬುಡಿ ಸಾರ್, ಅಂತೂ ನಾವು ಇಂತದೊಂದು ಕ್ರಾಂತಿ ನೋಡಕ್ಕೆ ಇಷ್ಟು ವರ್ಷ ಕಾಯಬೇಕಾಯ್ತು."

"ನಾನೂ ಅಷ್ಟೇ ಕಂಡ್ರಿ. ನನಿಗಂತೂ ಯಂಗಾಗ್ಯದೆ ಅಂದ್ರೆ ಇಂತೋನೊಬ್ಬ ಕ್ರಾಂತಿ ಪುರುಸನ ಜೊತೆ ಇದ್ದಿನಲ್ಲಾ, ನನ್ನ ಜಲ್ಮ ಸಾರ್ಥಕಾಯ್ತು ಅನ್ನುಸ್ತಾ ಅದೆ. ನಿಜವಾಗ್ಲು, ನಮ್ಮ ತಾಯಾಣೆ ಸುಳ್ಳೇಳ್ತಯಿಲ್ಲ ನಾನು."

"ನೀವು ಈವರಿಗೂ ಹರಿಜನ್ರ ಮನಿಗೆ ಹೋಗಿಲ್ಲವ ಗೌಡ್ರೆ?"

"ಇಲ್ಲ ಕಂಡ್ರಿ, ಇನ್ನು ಮೇಲೆ ಹೋಗಬೇಕು."

"ಕುಮಾರಣ್ಣನಿಗೆ ಫೋನ್ ಕೊಡಿ."

"ಆಯ್ತು ಕೊಟ್ಟೆ ಮಾತಾಡಿ. ಅಂಗೆ ನನ್ನ ವಿಷಯನು ಸ್ವಲ್ಪ ಹೇಳಿ."

"ಹೇಳಿ ಬ್ರದರ್."

"ಸಾರ್ ನೀವು ಹರಿಜನರ ಮನೆಗೋದದ್ದು ಈ ಶತಮಾನದ ಕ್ರಾಂತಿ ಸಾರ್."

"ನೀವು ಹಾಗಂತೀರಿ, ಆ ಸಿದ್ದರಾಮಯ್ಯನ ಕಡಿಯೋರು ಡ್ರಾಮ ಅಂತಾಯದಾರೆ."

"ಅನ್ನಕಳಿ ಬಿಡಿ ಸಾರ್. ನೀವು ಮಾತ್ರ ಹರಿಜನರ ಮನಿಗೋಗಿ ಮನಗದನ್ನ ಬಿಡಬೇಡಿ ಸಾರ್."

"ಬಿಡಬಾರ್ದು ಅಂತ ಇದ್ದಿನಿ. ಈ ಸಿದ್ದರಾಮಯ್ಯನ ಕ್ಷೇತ್ರದ ಯಾವ ಹಳ್ಳಿನೂ ಬಿಡಲ್ಲ."

"ಅಂಗೆ ಮಾದಿಗರ ಮನೆಗೂ ಹೋಗಿ ಮನಗಿ ಸಾರ್."

"ಅವುರೆಲ್ಲಿರತರೆ?"

"ಅಲ್ಲೆ ಹರಿಜನರ ಕೇರಿ ಪಕ್ಕ ಎಡಭಾಗಕ್ಕಿರತರೆ."

"ಅವರನ್ನೇಗೆ ಗುರುತಿಡಿಯದು?"

"ಗಂಡಸರೆಲ್ಲ ಆಕಾರದಲ್ಲಿ ನಿಮ್ಮತರನೇ ಇರತರೆ. ಹೆಂಗಸರು ನಿಮ್ಮ ತಂಗಿ ತರ ಇರತರೆ. ಹರಿಜನರ ಕೇಳಿ ಅವುರೆ ಹೇಳ್ತರೆ."

"ಅವುರಿಗೆ, ಇವುರಿಗೆ ಏನು ವ್ಯತ್ಯಾಸ ಬ್ರದರ್?"

"ವ್ಯತ್ಯಾಸ ಸ್ವಲ್ಪ ಇದೆ. ಈ ಹಾಸನದ ಜಿಲ್ಲೆಲಿ ಗಂಗಡಿಕಾರ್ ಗೌಡ್ರು, ದಾಸ್‌ಗೌಡ್ರು ಅಂತ ಅವ್ರುರೆ...."

"ಹೌದು ಕಂಡ್ರಿ. ದಾಸ ಗೌಡ್ರ ಕಂಡ್ರಾಗಲ್ಲ ನಮಿಗೆ. ನಮ್ಮ ತಂದೆಗಂತು ಅವುರು ಮುಖ ನೋಡಿದ್ರಾಗಲ್ಲ."

"ನೋಡಿ ಅಷ್ಟೇ ವ್ಯತ್ಯಾಸ ಹರಿಜನ್ರಿಗೂ ಮಾದಿಗರಿಗೂ. ಮಾದಿಗರಿಗಿಂತ ಆಚೆಲೊಂದು ಜಾತಿ ಅದೆ."

"ಅದ್ಯಾವ ಜಾತಿ?"

"ದಕ್ಕಲರು ಅಂತ. ಮಾದಿಗರ ಕೇರಿ ಹತ್ರಕೆ ಬಂದು ಏನಾರ ಕೊಡಿ ಅಂತ ಕೂಗ್ತಾರೆ. ಇವುರು ಕೊಡ್ತರೆ. ಅದರಲ್ಲೇ ಅವರ ಜೀವನ."

"ಹಾಗಿದ್ರೆ ಅವರ ಮನೆಲಿ ಮಲಗಬೇಕಲ್ಲ ಬ್ರದರ್?"

"ಅವುರಿಗೆ ಮನಿಯೇ ಯಿಲ್ಲ ಸಾರ್. ನೀವು ಉಳಕಂಡ ಮಾದಿಗರ ಮನೆಗೆ ಕರಿಸಿ ಮಾತಾಡ್ಸಿ ಏನ್ನಾರ ಕೊಟ್ಟು ಕಳುಸಬವುದು."

"ಏನು ಕೊಡಬಹುದು?"

"ಅವುರೇನು ಕೇಳಲ್ಲ, ಕೈತುಂಬ ಕೆಲಸ, ಮೈ ತುಂಬ ಬಟ್ಟೆ, ಮನಗಕೊಂದು ಆಶ್ರಯ ಮನೆ ಕೇಳ್ತರೆ, ಅಷ್ಟೆ."

"ಕೊಡಣ ಬಿಡಿ, ಸ್ಪಾಟಲ್ಲೇ ಶಾಂಕ್ಷನ್ ಮಾಡ್ತಿನಿ."

"ಅವುಕ್ಕೆಲ್ಲಾ ಪೈನಾನ್ಸ್ ಡಿಪಾರ್ಟ್‌ಮೆಂಟ್ ಒಪೀನಿಯನ್ ಬೇಕಲ್ಲಾ ಸಾರ್?"

"ಪೈನಾನ್ಸ್ ಡಿಪಾರ್ಟ್‌ಮೆಂಟ್ ಯಾಕ್ರಿ ಕೇಳಬೇಕು? ಒಂದಿಪ್ಪತ್ತೈದು ಸಾವುರುಪಾಯಿಗೆ ಒಂದಾಶ್ರಯದ ಮನೆ ರೆಡಿಯಾಯ್ತದೆ. ಈಗ ಬೆಂಗಳೂರು ಪುಟ್‌ಪಾತಲ್ಲಿ ಇಪ್ಪತ್ತು ರೂಪಾಯಿಗೆ ರೆಡಿಮೇಡ್ ಅಂಗಿ ಚೆಡ್ಡಿ ಸಿಗತವೆ, ಅಂಗೆ ನಮ್ಮ ತುಂಡುಗುತ್ತಿಗೆ ಕಂಟ್ರಾಕ್ಟರ್‌ಗೇಳಿ ಒಂದು ಕೆಲಸ ಕೊಡಿ ಅಂತಿನಿ, ಮುಗಿತಲ್ಲ."

"ನಾನೇಳಿದ್ದು ಇಡೀ ಕರ್ನಾಟಕದ ಮಾದಿಗ ಜನಾಂಗದ ಕಾರ್ಯಕ್ರಮಗಳ ವಿಷಯ ಸಾರ್. ನಿಮ್ಮನ್ನು ಬೇಟಿಯಾದ ಒಬ್ಬನ ವಿಷಯ ಅಲ್ಲ ನಾನೇಳ್ತಯಿರದು."

"ರೀ, ಇಡೀ ಕರ್ನಾಟಕದ ಮಾದಿಗರ ವಿಷಯ ತಗೊಂಡು ನಾನೇನು ಮಾಡಕ್ಕಾಗುತ್ತೆರೀ? ನಾನೇಳ್ತಯಿರದು ಸಿದ್ಧರಾಮಯ್ಯನ ಕ್ಷೇತ್ರದ ವಿಷಯ. ಮುಂದೆ ಉಪಚುನಾವಣೆ ಬರ್ತಾಯಿದೆ. ನಮಗೆ ಸರಿಯಾದ ಕ್ಯಾಂಡಿಡೇಟ್ ಸಿಗತಾಯಿಲ್ಲ, ಅದ್ಕೆ ಏನು ಮಾಡದು ಅಂತ ತಂದೆಯವರನ್ನು ಕೇಳಿದಾಗ, ಅವರು ಈ ಪ್ಲಾನೇಳಿ ಕೊಟ್ರು. ಅದರಂತೆ ಹೋಗಿ ಹರಿಜನರ ಮನೆಲಿ ಮಲಗ್ತಾಯಿದ್ದಿನಿ..

"ಸರಿ ಸಾರ್. ನಿಮ್ಮ ಮೇಲೆ ಯಾರೂ ಕೇಸಾಕಿಲ್ಲವಾ ಸಾರ್?"

"ಯಾಕ್ರಿ ಕೇಸಾಕ್ತರೆ?"

"ನೀವು ಇದುವರಿಗೂ ಹರಿಜನರ ಮನಿಗೋಗಿಲ್ಲ, ಮಾತಾಡಿಸಿಲ್ಲ, ಮುಟ್ಟಿಸಿಗಂಡಿಲ್ಲ ಅನ್ನದು ಸಾಬೀತಾಗಿರೋದ್ರಿಂದ."

"ಏನ್ರಿ ಹೇಳ್ತಯಿರದು ನೀವು?"

"ಹೌದು ಸಾರ್. ನೀವು ಅಸ್ಪೃಶ್ಯತೆ ಆಚರಿಸಿದ್ದೀರಿ. ಈಗ ಸುಧಾರಣೆಗೆ ಹೋಗಿದ್ದೀರಿ. ಈಗಲೂ ನಿಮ್ಮ ಮನಸ್ಸಿನಲ್ಲಿ ಹರಿಜನರು ಕೀಳು ಅನ್ನೋ ಭಾವನೆ ಇರದರಿಂದ್ಲೆ ಹಿಂಗೆ ಮಾಡ್ತಿರಿ. ಅದ್ಕೆ ಯಾರಾದ್ರೂ ಕೇಸಾಕ್ಬರು ಹುಷಾರು."

"ಥೂತ್ತೇರಿ!!!"

-ಯಾತೂ

'ಜೋಕು'ಮಾರ ಸ್ವಾಮಿ

ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಚೀಪ್ ಗಿಮಿಕ್‌ಗಳ ಪಿತ್ತ ನೆತ್ತಿಗೇರಿಸಿಕೊಂಡು ಬುದ್ಧಿ ವಿವೇಕಗಳನ್ನೆಲ್ಲಾ ಕಳೆದುಕೊಂಡಂತೆ ಆಡುತ್ತಿದ್ದಾರೆ.

ಸರ್ಕಾರದ ಮುಖ್ಯಸ್ಥನಾಗಿರುವ ಮುಖ್ಯಮಂತ್ರಿಯೊಬ್ಬನ ಕೆಲಸ ಜವಾಬ್ದಾರಿಗಳೇನೆಂಬುದೇ ಇವರಿಗೆ ತಿಳಿದಿರುವಂತಿಲ್ಲ. ಊರೂರು ಅಲೆಯುತ್ತಾ ಕಂಡಕಂಡವರ ಮನೆ ಹೊಕ್ಕು ನಿದ್ದೆ ಮಾಡಿ ಎದ್ದು ಬರುವುದೇ ದೊಡ್ಡ ಸಾಧನೆಯೆಂಬಂತೆ ಬೀಗುತ್ತಿದ್ದಾರೆ.

ಬಳ್ಳಾರಿ ಗಣಿ ಲಂಚ, ಕುಟುಂಬದವರ ಅಕ್ರಮ ಆಸ್ತಿ ಖರೀದಿ ಪ್ರಕರಣಗಳ ಗುಟ್ಟು ಬಯಲಾದ ಮೇಲೆ ಕುಮಾರಸ್ವಾಮಿಗೆ ಹೊಳೆದಿರುವ ಉಪಾಯವೇ ಈ ಹಳ್ಳಿ ವಾಸ್ತವ್ಯದ ಕಾಮಿಡಿ ಸೀನ್‌ಗಳು. ಇದಕ್ಕೂ ಮೊದಲು ಮುಖ್ಯಮಂತ್ರಿಗಳು ಶುರುಮಾಡಿದ್ದ 'ಜನತಾ ದರ್ಶನ'ದ ಬಗ್ಗೆ ಪತ್ರಿಕೆಗಳು ಎಷ್ಟೇ ಪ್ರಚಾರ ಕೊಟ್ಟರೂ, ಕುಮಾರಸ್ವಾಮಿಯನ್ನು ಹೊಗಳಿದರೂ ಜನರಿಗೆ ಆಗಿರುವ ಪ್ರಯೋಜನ ಅಷ್ಟಕಷ್ಟೆ.

ಉದಾಹರಣೆಗೆ ಕಳೆದ ಮೇ ತಿಂಗಳ ಮೊದಲ ವಾರದಲ್ಲಿ "ಜನತಾ ದರ್ಶನದಲ್ಲಿ ಅಂಧ ಮಹಿಳೆಯ ಸ್ಥಿತಿ ನೋಡಿ ಮನಕರಗಿ ಸ್ಥಳದಲ್ಲೇ ಉದ್ಯೋಗ ನೀಡಿದ ಮುಖ್ಯಮಂತ್ರಿ" ಎಂಬ ದೊಡ್ಡ ಶೀರ್ಷಿಕೆಯ ನ್ಯೂಸ್ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಗಿತ್ತು. ಜನ ಸಹ 'ಕುಮಾರಸ್ವಾಮಿ ಮಾನವೀಯತೆ ಇರುವ ಮನುಷ್ಯ' ಎಂದುಕೊಂಡರು.

ಆದರೆ ವಾಸ್ತವ ಪರಿಸ್ಥಿತಿ ಹಾಗಿಲ್ಲ.

ಈ ಅಂಧೆಯ ಹೆಸರು ಮಮತ. ಬಿ.ಎಡ್, ಎಂ.ಎ. ಓದಿರುವಾಕೆ. ಅವತ್ತು ಕುಮಾರಸ್ವಾಮಿಯೇನೋ 'ಈಕೆಗೆ ನನ್ನ ಆಫೀಸಲ್ಲೇ ಕೆಲಸ ಕೊಡಿ' ಎಂದಿದ್ದರು. ಅದರಂತೆ ಕೃಷ್ಣಾದಲ್ಲಿ ಮಮತಾ ಟೆಲಿಫೋನ್ ಆಪರೇಟರ್

ಬೆಳೆದಾಳೆ ಈಶ

ಎನಿಸಿಕೊಂಡರು. ಆದರೆ ಆಕೆಯನ್ನು ಈಗ ಗನ್‌ಮ್ಯಾನ್‌ಗಳ ಕ್ಯಾಬಿನ್‌ನಲ್ಲಿ ಕೂರಿಸಲಾಗಿದೆ. ನೀವು ನಂಬಿ, ಬಿಡಿ, ಕೆಲಸ ಸಿಕ್ಕು ನಾಲ್ಕು ತಿಂಗಳಾದರೂ ಮಮತಾಗೆ ಒಂದು ರೂಪಾಯಿ ಸಂಬಳವೂ ಸಿಕ್ಕಿಲ್ಲ. ಉದ್ಯೋಗ ನೇಮಕಾತಿ ಆದೇಶವನ್ನೂ ನೀಡಿಲ್ಲ. ಮಮತಾ ಈಗಲೂ ತನ್ನ ಕೈಯಿಂದಲೇ ತಿಂಗಳಿಗೆ ಸಾವಿರ ರೂ. ಖರ್ಚು ಹಾಕಿಕೊಂಡು ಓಡಾಡುತ್ತಿದ್ದಾರೆ.

ಜನತಾ ದರ್ಶನದ ಹಿಂದಿರುವ ರಾಕ್ಷಸ ಮುಖ ಪ್ರದರ್ಶನ ಇದು.



ಚೆಲುವಯ್ಯ

ಜನತಾ ದರ್ಶನದಲ್ಲಿ ನಿರುದ್ಯೋಗ, ಅನಾರೋಗ್ಯ ನಲ್ಲಿ ಬೀದಿ ದೀಪ ರಿಪೇರಿಗಳ ಅರ್ಜಿ ಪಡೆದು ಥ್ರಿಲ್ ಅನುಭವಿಸುತ್ತಿದ್ದ ಕುಮಾರಸ್ವಾಮಿ ಏಕಾಏಕಿ ಜಿಲ್ಲಾ ಜನತಾ ದರ್ಶನ ನಡೆಸುವುದಾಗಿ ಅನೌನ್ಸ್ ಮಾಡಿಬಿಟ್ಟರು. ಅದೇ ವೇಳೆಗೆ ಉತ್ತರ ಕರ್ನಾಟಕದಲ್ಲಿ ಪ್ರವಾಹ ಬಂದಾಗ ಆಗಸ್ಟ್ 24 ರಂದು ರಾತ್ರಿ ಒಂದೂವರೆ ಗಂಟೆಯಲ್ಲಿ ಅಫಜಲಪುರದ ಹಿರೇಮಾತೂರು ಗ್ರಾಮಕ್ಕೆ ಹೋಗಿ ಮಲಗಿಬಿಟ್ಟರು. ನಿದ್ದೆಗೆ ಮುನ್ನ ಚಪಾತಿ, ಜೋಳದ ರೊಟ್ಟಿ, ಹೋಳಿಗೆ, ಮಾವಿನ ಹಣ್ಣಿನ ಬರ್ಫಿ, ಡಾಲರ್ ಜಿಲೇಬಿಯ ಭರ್ಜರಿ ಔತಣದೂಟ ಬೇರೆ! ಇದಕ್ಕಾಗಿ ಅಡುಗೆ ಭಟ್ಟರನ್ನು ಮಹಾರಾಷ್ಟ್ರದ ಸೊಲ್ಲಾಪುರದಿಂದ ಕರೆಸಲಾಗಿತ್ತು!!

ಬರ-ಪ್ರವಾಹಗಳಿಂದ ತತ್ತರಿಸಿರುವ ಜನರೆದಿರು ಇದು ಕ್ರೂರವಾಗಿ ಕಾಣಬಹುದೆಂಬ ಕಾಮನ್‌ಸೆನ್ಸ್ ನಮ್ಮ ಮುಖ್ಯಮಂತ್ರಿಗೆ ಇರಲಿಲ್ಲ. ಹೀಗೆ ಪ್ರವಾಹ ಪೀಡಿತ ಪ್ರದೇಶಗಳ ನಾಟಕೀಯ ಸಮೀಕ್ಷೆ ನಡೆಸಿ ಬಂದ ನಂತರ ರಾಜ್ಯ ಸರ್ಕಾರ 1585 ಕೋಟಿ ರೂ. ಪರಿಹಾರ ಕೋರಿ ಕೇಂದ್ರಕ್ಕೆ ಮನವಿ ನೀಡಿತು. ಆದರೆ ರಿಲೀಸಾದ ಹಣ ಜುಜುಬಿ 250 ಕೋಟಿ ಮಾತ್ರ. ಪ್ರವಾಹದ ಭೀಕರತೆ ಎಷ್ಟಿತ್ತೆಂದರೆ ಕೊಪ್ಪಳ ತಾಲ್ಲೂಕಿನಲ್ಲಿ ಶೇ. 58 ರಷ್ಟು ಬೆಳೆ ನಾಶವಾಗಿದ್ದರೆ ಕುಷ್ಟಗಿಯಲ್ಲಿ ಶೇ. 72, ಯಲಬುರ್ಗಾದಲ್ಲಿ ಶೇ. 68, ಗಂಗಾವತಿ ತಾಲ್ಲೂಕಿನಲ್ಲಿ ಶೇ. 80 ರಷ್ಟು ಬೆಳೆ ಹಾಳಾಗಿತ್ತು. ತುರ್ತು ಪರಿಹಾರಕ್ಕಾಗಿ 50 ಕೋಟಿ ರೂ. ನಗದು ಹಾಗೂ 70 ಸಾವಿರ ಟನ್ ಆಹಾರ ಧಾನ್ಯ ಹಾಗೂ ಮೇವಿನ ಅಗತ್ಯವಿತ್ತು. ಇವೆಲ್ಲಾ ಈಗಲೂ ಜನರಿಗೆ ಪೂರೈಕೆಯಾಗಿಲ್ಲ.



ಕೊಪ್ಪಳ ಜಿಲ್ಲೆಯೊಂದರಿಂದಲೇ 25 ಸಾವಿರಕ್ಕೂ ಹೆಚ್ಚು ಜನ ಈಗಾಗಲೇ ಹುಬ್ಬಳ್ಳಿ-ಧಾರವಾಡ, ದಕ್ಷಿಣ ಕನ್ನಡ, ಚಿಕ್ಕಮಗಳೂರಿಗೆ ವಲಸೆ ಹೋಗಿದ್ದಾರೆ.

ಕುಮಾರಸ್ವಾಮಿಯ ಹಳ್ಳಿ ಭೇಟಿ, ವಾಸ್ತವ್ಯದ ನಂತರದ ಬೆಳವಣಿಗೆಗಳಿವು.

ದಲಿತನ ಮನೆಯಲ್ಲಿ ಬಲಿತವ

ಕಾಂಗ್ರೆಸ್ ನಾಯಕ ಸಿದ್ಧರಾಮಯ್ಯ ಕೆಣಕಿದರೆಂದು ಸೆಪ್ಟೆಂಬರ್ 6 ರಂದು ದಡದಕಲ್ಲು ಗ್ರಾಮದ ದಲಿತ ಚೆಲುವಯ್ಯನ ಮನೆಯಲ್ಲಿ ಹೋಗಿ ಠಿಕಾಣಿ ಹಾಕಿಬಿಟ್ಟರು ಕುಮಾರಸ್ವಾಮಿ. ಇಲ್ಲಿಗೂ ಇವರು ಹೋಗಿ ತಲುಪಿದ್ದು ಮಧ್ಯರಾತ್ರಿ 1 ಗಂಟೆಗೆ. ವಾಸ್ತವ್ಯ ದಲಿತರ ಕಾಲೋನಿಯಲ್ಲೇ ಆದರೂ ಕುಮಾರಸ್ವಾಮಿ ದಲಿತರ ಮನೆಯಲ್ಲಿ ತಯಾರಾದ ಊಟ ಮಾಡಲಿಲ್ಲ. ಬದಲಾಗಿ ಹತ್ತಿರದ ಗೋಡೌನ್‌ನಲ್ಲಿ ಅವರಿಗೆ ಸಪರೇಟಾಗಿ ಅಡಿಗೆ ಮಾಡಿಸಲಾಗಿತ್ತು. ಮಾರನೇ ಬೆಳಗ್ಗೆ ಸ್ನಾನ-ತಿಂಡಿಗೆ ಮುಖ್ಯಮಂತ್ರಿ ಹೋಗಿದ್ದು ಮೇಲ್ಜಾತಿಯ ವೀರಭದ್ರಸ್ವಾಮಿ ಎಂಬುವರ ಮನೆಗೆ. ಅಷ್ಟೇ ಅಲ್ಲ ಗ್ರಾಮದ ಮೇಲುಜಾತಿಯವರ ಅಹವಾಲನ್ನು ದೇವಸ್ಥಾನದ ಹತ್ತಿರವೂ, ದಲಿತರ ಕುಂದು ಕೊರತೆಗಳನ್ನು ಎಸ್‌ಸಿ ಕಾಲೋನಿಯಲ್ಲೂ ಕೇಳಿದ್ದಾರೆ. ಗ್ರಾಮದ ಹೊನ್ನಮ್ಮನ ಕೊಳದ ನೀರನ್ನು ದಲಿತರು ಮುಟ್ಟುವಂತಿಲ್ಲ ಎಂಬ ನಿರ್ಬಂಧವಿದೆ ಗ್ರಾಮದಲ್ಲಿ. ಆದರೆ ಈ 'ಗಾಂಧೀಜಿಯ ಶಿಷ್ಯ' ಕುಮಾರಸ್ವಾಮಿ ಅದರ ಬಗ್ಗೆ ಮಾತೇ ಆಡದೆ ವಾಪಸ್ ಬಂದಿದ್ದಾರೆ.




ಮಮತ

ವಾಸ್ತವವಾಗಿ ಕುಮಾರಸ್ವಾಮಿ ದಡದಕಲ್ಲು ಗ್ರಾಮಕ್ಕೆ ಹೋಗಿದ್ದು ದಲಿತರ ಮೇಲಿನ ಕಾಳಜಿಯಿಂದಲೂ ಅಲ್ಲ, ಹಳ್ಳಿಗರ ಕಷ್ಟ ಅರಿಯಲೂ ಅಲ್ಲ. ಬದಲಾಗಿ ಆ ಗ್ರಾಮ ಅವರ ಕಡುವೈರಿ ಸಿದ್ಧರಾಮಯ್ಯನವರ ಚಾಮುಂಡೇಶ್ವರಿ ಕ್ಷೇತ್ರದ ಗ್ರಾಮ ಎಂಬ ಕಾರಣದಿಂದಷ್ಟೇ ಹೋಗಿ ಬಂದಿರುವುದು.

ಜನರಿಗೆ ಈ ನಾಟಕ ಅರ್ಥವಾಗುವುದಿಲ್ಲವೆ?

ಈ ಭೇಟಿಗಳನ್ನೇ ಕೋ-ಜಾ ಸರ್ಕಾರದ ಯಶಸ್ವಿ ಆಡಳಿತವೆಂದು ನಂಬಿರುವ ಹುಂಬ ಮುಖ್ಯಮಂತ್ರಿ ಮುಂದಿನ ಸಾರಿ ಮುಸ್ಲಿಮರ ಮದರಸಾಗಳಲ್ಲೂ ಹೋಗಿ ತಂಗುವೆ ಎಂದು ಘೋಷಿಸಿದ್ದಾರೆ. ಇದು ಹೀಗೇ ಮುಂದುವರೆದರೆ, ಚರ್ಚು, ಅನಾಥಾ ಶ್ರಮ, ಛತ್ರ, ಸ್ಮಶಾನ, ಪಾರ್ಕು ಹೀಗೆ ಎಲ್ಲೆಂದರಲ್ಲಿ ಹೋಗಿ ನಿದ್ರೆ ಮಾಡಬೇಕಾಗುತ್ತದೆ ಮುಖ್ಯಮಂತ್ರಿ ಮಹಾಶಯರು.



ಹೊಟ್ಟೆಪಾಡಿಗಾಗಿ ಕೊಪ್ಪಳ ಜನರ ವಲಸೆ

ನಿಜ, ಆಡಳಿತ ನಡೆಸುವವರಿಗೆ ಜನಜೀವನದ ಪರಿಚಯ ಆಗಬೇಕು. ಆದರೆ ಯಾವ ಸಮಯದಲ್ಲಿ ಏನು ಮಾಡಬೇಕೆಂಬ ಕನಿಷ್ಠ ಜ್ಞಾನವಾದರೂ ಸರ್ಕಾರದ ಮುಖ್ಯಸ್ಥರಿಗೆ ಗೊತ್ತಿರಬೇಕಾಗುತ್ತದೆ. ಪ್ರಸ್ತುತ ರಾಜ್ಯದಲ್ಲಿ 102 ತಾಲ್ಲೂಕುಗಳನ್ನು ಬರಪೀಡಿತ ಎಂದು ಗುರುತಿಸಲಾಗಿದೆ. ಆದರೆ ಬರಪರಿಹಾರ ಕಾಮಗಾರಿಗೆ ಇನ್ನೂ ಚಾಲನೆ ನೀಡಿಲ್ಲ. ಮತ್ತೊಂದೆಡೆ ಪ್ರವಾಹ ಸಂತ್ರಸ್ತರನ್ನು ಅದೇ ನೀರಿನಲ್ಲೇ ಕೈ ಬಿಟ್ಟು ಬಿಡಲಾಗಿದೆ.

ಕುಮಾರಸ್ವಾಮಿ ಸರ್ಕಾರ ಹಳ್ಳಿಗಳ ಅಭಿವೃದ್ಧಿ ಬಗ್ಗೆ ಎಷ್ಟೇ ಹೇಳಿಕೆ ನೀಡಿದರೂ ಅವರ ಪೂರ್ಣ ಗಮನವಿರುವುದು ನಗರಗಳತ್ತಲೇ. 22 ಸಾವಿರ ಕೋಟಿಯ ಗ್ರೇಟರ್ ಬೆಂಗಳೂರು ಯೋಜನೆ, ವಿಕ್ಟೋರಿಯಾ ಹಾಗೂ ಬೌರಿಂಗ್ ಆಸ್ಪತ್ರೆ ನವೀಕರಣಕ್ಕೆ 22 ಕೋಟಿ. ಮಹಾರಾಣಿ ಕಾಲೇಜ್ ಆಧುನೀಕರಣಕ್ಕೆ 12 ಕೋಟಿ, ಬೆಂಗಳೂರು-ನೆಲಮಂಗಲ ನಡುವೆ ಆರು ಲೈನಿನ ಹೊಸ ರೋಡ್, ಬೆಂಗಳೂರು ಸುತ್ತಮುತ್ತ 6 ಟೌನ್‌ಶಿಪ್... ಇವೆಲ್ಲಾ ಮಣ್ಣಿನ ಮಕ್ಕಳ ಭವಿಷ್ಯದ ಯೋಜನೆಗಳು. 1 ಸಾವಿರ ಆಯ್ದ ಗ್ರಾಮಗಳಿಗೆ 1 ಸಾವಿರ ಕೋಟಿ ಯೋಜನೆಯೂ ಇನ್ನೊಂದಿದೆ.

ಇವೆಲ್ಲಾ ಬಹುತೇಕ ಪಿಡಬ್ಲ್ಯೂಡಿ ಕಾಮಗಾರಿಗಳಿಗೆ ಆದ್ಯತೆಯಿರುವ ಯೋಜನೆಗಳೆಂಬುದು ಗಮನಾರ್ಹ. ಅದರೆ ರೇವಣ್ಣನ ಇಲಾಖೆಗೆ ಸಂಬಂಧಿಸಿದ್ದು. ಅರ್ಥಾತ್ ಕಿಕ್‌ಬ್ಯಾಕ್ ಭೋಜನ ಸವಿಯುವ ಅವಕಾಶವಿರುವ ಸ್ಕೀಮುಗಳು ಮಾತ್ರ.

ಪ್ರವಾಹಪೀಡಿತ ಪ್ರದೇಶಕ್ಕೆ ಹೋದರೂ ಪರಿಹಾರ ಒದಗಿಸದೆ ಬರುವುದು, ದಲಿತರ ಮನೆಯಲ್ಲಿ ವಾಸ್ತವ್ಯ ಹೂಡಿದರೂ ಜಾತಿ ಚೌಕಟ್ಟು ಮೀರದಿರುವುದು, ನೂರಾರು ಕೋಟಿ ಭ್ರಷ್ಟ ಹಣ ಗಳಿಸುತಲೇ ಗಾಂಧಿ ಶಿಷ್ಯ ಎನ್ನುವುದು, ಹಳ್ಳಿಗಳ ಅಭಿವೃದ್ಧಿ ಮಾತಾಡುತ್ತಲೇ ನಗರ ಕೇಂದ್ರಿತ ಯೋಜನೆಗೆ ಹಣ ಹರಿಸುವುದು ಇವೆಲ್ಲಾ ಮುಖ್ಯಮಂತ್ರಿ ಕುಮಾರಸ್ವಾಮಿಯ ವ್ಯಕ್ತಿತ್ವದ ವೈರುದ್ಯಗಳು.

ಸದ್ಯಕ್ಕೆ ಐಲುಪೈಲಿನಂತೆ ಆಡುತ್ತಿರುವ ಮುಖ್ಯಮಂತ್ರಿಯನ್ನು ಜನ ಅಪ್ಪಿತಪ್ಪಿಯೂ ಕುಮಾರಸ್ವಾಮಿ ಎನ್ನದೆ 'ಜೋಕು'ಮಾರಸ್ವಾಮಿ ಎನ್ನುತ್ತಿರುವುದು ಸರಿಯಾಗಿಯೇ ಇದೆ.

ದೊರೆ ಮತ್ತು ಗುಲಾಮ ಪತ್ರಕರ್ತರು

ಕನ್ನಡ ದಿನಪತ್ರಿಕೆಗಳಲ್ಲಿ ಅಸಹ್ಯ ಎನ್ನಿಸುವ ಪರಂಪರೆಯೊಂದು ಶುರುವಾಗಿದೆ. ಅದು ಮುಖ್ಯಮಂತ್ರಿಯನ್ನು 'ದೊರೆ' ಎಂದು ಬಣ್ಣಿಸುವ ಪ್ರವೃತ್ತಿ.

ಮುಖ್ಯಮಂತ್ರಿ ಕುಮಾರಸ್ವಾಮಿಯ ಜನತಾ ದರ್ಶನ, ಹಳ್ಳಿ ವಾಸ್ತವ್ಯಗಳ ಬಗ್ಗೆ ವರದಿ ಬರೆಯುತ್ತಿರುವ ಕೆಲ ಗುಲಾಮ ಪತ್ರಕರ್ತರು 'ದೊರೆಯ ದರ್ಶನ, ಅಹವಾಲು ಆಲಿಸಿದ ದೊರೆ, ದೊರೆ ತಂಗಲಿರುವ ಮನೆ' ಎಂದೆಲ್ಲಾ ಬರೆದು ಸಂಭ್ರಮಪಟ್ಟುಕೊಳ್ಳುತ್ತಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಆರಿಸಿರುವ ಮಂತ್ರಿಗಳು, ಮುಖ್ಯಮಂತ್ರಿ, ಪ್ರಧಾನಮಂತ್ರಿಗಳಿರುತ್ತಾರೆಯೇ ವಿನಃ ಪಾಳೇಗಾರ, ದೊರೆ, ಚಕ್ರವರ್ತಿಗಳಲ್ಲ. ಒಬ್ಬ ಜನಪ್ರತಿನಿಧಿಯನ್ನು ದೊರೆ ಎಂದು ಬಿಂಬಿಸುವುದು ಪ್ರಬುದ್ಧ ಪತ್ರಿಕೋದ್ಯಮವೂ ಅಲ್ಲ. ಆದರೆ ಈಗಿನ ಕನ್ನಡ ದಿನಪತ್ರಿಕೆಗಳನ್ನು ನೋಡುತ್ತಿದ್ದರೆ ನಾವು 21 ನೇ ಶತಮಾನದಲ್ಲಿದ್ದೇವಾ ಅಥವಾ ರಾಜಶಾಹಿ ಆಡಳಿತದಲ್ಲಾ ಎಂಬ ಅನುಮಾನ ಬರುವಂತಿದೆ.

ಇನ್ನಾದರೂ ನಮ್ಮ ಪತ್ರಕರ್ತರು 'ದೊರೆ'ಯ ಗುಲಾಮಗಿರಿ ಬಿಡಲಿ.

ಹಾಸನದಲ್ಲಿ ಹೀಗೊಂದು ಪ್ರಹಸನ!

ಹಳ್ಳಿ ಹಳ್ಳಿ ಸುತ್ತಿ ಲಿಂಗಾಯಿತ-ಒಕ್ಕಲಿಗರ ಓಲೈಸಿ, ದಲಿತರಿಗೆ ನಯವಂಚನೆ ಮಾಡುತ್ತಾ ಸಾಗಿರುವ ಸಿ.ಎಂ. ಸಾಹೇಬರು ತವರು ಜಿಲ್ಲೆ ಹಾಸನದಲ್ಲೂ ಪ್ರಹಸನ ಮಾಡಿ ಹಾಸ್ಯಾಸ್ಪದರಾಗಿದ್ದಾರೆ.

ಸ್ಥಳೀಯ ಪಂಚಾಯ್ತಿಗಳಿಗೆ ಹೆಚ್ಚಿನ ಅಧಿಕಾರ ನೀಡುವುದಾಗಿ ರೀಲು ಬಿಟ್ಟರು. ಆದರೆ ಅಲ್ಲಿ ಬೆಂಗಳೂರಲ್ಲಿ ಪಂಚಾಯತ್ ಇಲಾಖೆಯಿಂದ ದಕ್ಷ ಅಧಿಕಾರಿ ಬಳಿಗಾರ್ ಎತ್ತಂಗಡಿ ಆಗಿ ಹೋಗಿತ್ತು!



ಶಿವಕುಮಾರ್

ಎಚ್.ಕೆ. ಕುಮಾರಸ್ವಾಮಿಗೆ ಮಂತ್ರಿ ಸ್ಥಾನ ನೀಡಿದ್ದನ್ನೇ ದಲಿತೋದ್ಧಾರ ಎಂದರು. ಆದರೆ ಹಾಸನ ಜಿಲ್ಲೆ ಉಸ್ತುವಾರಿ ಮಾತ್ರ ತಮ್ಮ ಅಣ್ಣ ರೇವಣ್ಣನ ಬಳಿಯೇ ಇರುವುದನ್ನು ಮರೆತಂತೆ ನಾಟಕವಾಡಿದರು. ಎರಡೆರಡು ಜಿಲ್ಲೆಗಳ ಉಸ್ತುವಾರಿ ಅಣ್ಣನಿಗೆ! ನಾಮಕಾವಸ್ತೆ ಮಂತ್ರಿಗಿರಿ ದಲಿತ ಎಚ್.ಕೆ. ಕುಮಾರಸ್ವಾಮಿಗೆ!?

ಒಳಮೀಸಲಾತಿ ಕುರಿತು ಮಾತಾಡುವ ಅಪ್ಪ-ಮಕ್ಕಳು ಹಾಸನ ಜಿಲ್ಲಾ ಪಂಚಾಯ್ತಿ ಅಧ್ಯಕ್ಷಗಿರಿಗೆ ಅಣ್ಣಪ್ಪ ಶೆಟ್ಟಿಯನ್ನು ತಂದರು. ಆದರೆ ಶೆಟ್ಟಿ ರೇವಣ್ಣ ಸಾಹೇಬರ ಹೂ-ಹಾರ, ಶಾಲು ಹೊರುತ್ತಾ ನಡೆಯಬೇಕಷ್ಟೇ. ಹೆಸರಿಗಷ್ಟೇ ಒಳ ಮೀಸಲಾತಿ, ಅಧಿಕಾರವೆಲ್ಲ ತಮ್ಮ ಕುಟುಂಬದ ಕೈಯಲ್ಲೇ!

ಹೋಗಲಿ, ವಿದ್ಯಾರ್ಥಿನಿಯರಿಗೆ ಸೈಕಲ್ಲು ವಿತರಿಸುವಲ್ಲಿಯಾದರೂ ಪ್ರಾಮಾಣಿಕತೆ ಬೇಡವೆ? ಗೌಡರ ಕುಟುಂಬದ ಏಳಿಗೆಗೆ ಸೈಕಲ್ಲು ತುಳಿಯುತ್ತಲೇ ಇರುವ ಪುಡಾರಿಗಳ ಮಕ್ಕಳಿಗಷ್ಟೇ ಸೈಕಲ್ಲುಗಳು! ಸೈಕಲ್ಲಾಯ್ತು, ಟ್ರ್ಯಾಕ್ಟರಿಗಳೂ ಗೌಡರ ಹಿಂಬಾಲಕರಿಗೇ ದಕ್ಕುತ್ತಿವೆ. ಸಬ್ಸಿಡಿ ದರದಲ್ಲಿ ರೈತರಿಗೆ ನೀಡಬೇಕಾಗಿದ್ದ ಟ್ರ್ಯಾಕ್ಟರುಗಳನ್ನು ಅಬಕಾರಿ ಗುತ್ತೇದಾರರಿಗೆ ನೀಡುತ್ತಿದ್ದಾರೆ ಗೌಡರ ಕುಟುಂಬದವರು. ಹೊಳೇನರಸಿಪುರದ ಕುಖ್ಯಾತ ಅಬಕಾರಿ ಕುಳ, ರೇವಣ್ಣನ ಭಂಟ ಟಿ. ಮಲ್ಲೇಶನಿಗೆ ಸಬ್ಸಿಡಿ ದರದಲ್ಲಿ ಟ್ರ್ಯಾಕ್ಟರ್ ನೀಡಲಾಗಿದೆ!




ಕೋಟ್ಯಾಧಿಪತಿ ಮಲ್ಲೇಶನಿಗೆ ಸಬ್ಸಿಡಿ ಟ್ರಾಕ್ಟರ್

ಈ ಮಲ್ಲೇಶ್ ಮತ್ತು ಅವನಣ್ಣ ಟಿ. ಶಿವಕುಮಾರ ಎಂಬುವವನು ಬೆಂಗಳೂರು, ಹಾಸನದಲ್ಲಿ ಕೋಟ್ಯಂತರ ವ್ಯವಹಾರ ನಡೆಸುತ್ತಿದ್ದಾರೆ.

ರೈತ, ದಲಿತ ವಿರೋಧಿ ಕುಮಾರಣ್ಣ ಮಾತ್ರ ಹಳ್ಳಿ ವಾಸ್ತವ್ಯದ ಡ್ರಾಮಾ ಮಾಡುತ್ತಲೇ ಇರುತ್ತಾರೆ... ಹಾಸನದಲ್ಲಿ ಅವರ ಕುಟುಂಬದ ಪ್ರಹಸನ ಮುಂದುವರೆಯುತ್ತಲೇ ಇರುತ್ತದೆ.

ಶಿವಮೊಗ್ಗದಲ್ಲೀಗ ಆಸ್ತಿ ಖರೀದಿಯ ಭರಾಟೆ ...ವಾಗಿ ನಡೆದಿದೆ. ಹಾಲಿ ಕೋ-ಬಾ ಸರ್ಕಾರದ ...ಸೇದಾನಿರುತ ಮಂತ್ರಿಗಳಾದ ಯಡಿ ...ಯೂರಪ್ಪ ಹಾಗೂ ಈಶ್ವರಪ್ಪಗಳು ...ದಾದ್ದೇ ಆಸ್ತಿಯಾಗಲಿ, ಎಲ್ಲೇ ಇರಲಿ, ...ದು ಹೇಗೇ ಇರಲಿ ಮಾರಾಟಕ್ಕಿದೆ ...ಎಂದು ಗೊತ್ತಾದರೆ ಸಾಕು ಕೇಳಿದಷ್ಟು ...ಷ್ಟು ಬಿಸಾಕಿ ವಶಪಡಿಸಿಕೊಳ್ಳುತ್ತಿದ್ದಾರೆ. ...ಮಾರ್ಕೆಟ್ ರೇಟಿಗಿಂತಾ ಲಕ್ಷ ರೂಪಾಯಿ ...ಷ್ಟನೇ ಬಿಸಾಕಿ Fancy rateನಲ್ಲಿ ...ವರಿಬ್ಬರು ಸಿಕ್ಕಸಿಕ್ಕ ಸೈಟು, ಮನೆ, ...ಶೋರೂಂಗಳನ್ನು ಪರ್ಚೇಸ್ ಮಾಡು ...ವ ಸುದ್ದಿ ಇಡೀ ಶಿವಮೊಗ್ಗ ನಗರದ ...ನೆ ಮಾತಾಗಿ ಹೋಗಿದೆ.



ಒಂದು ಕಡೆ ಭ್ರಷ್ಟ ದೇವೇಗೌಡರ ಮಕ್ಕಳು, ...ಷೆ ಅಳಿಯಂದಿರು ಬೆಂಗಳೂರು, ಮಂಡ್ಯ ಮೈಸೂರು ...ಲ್ಲಿ ತಮ್ಮ ಅಕ್ರಮ ಆಸ್ತಿಗಳ ಸಾಮ್ರಾಜ್ಯ ...ರ್ಮಿಸಿಕೊಳ್ಳುತ್ತಿದ್ದರೆ ಮತ್ತೊಂದೆಡೆ ಬಿಜೆಪಿಗಳೂ ಈಗ ...ವೇ ಭ್ರಷ್ಟ ಕೆಲಸಕ್ಕಿಳಿದಿದ್ದಾರೆ.

ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಬೇನಾಮಿ ಆಸ್ತಿ ಡೀಲ್‌ಗಳು ಬೆಚ್ಚಿಬೀಳಿಸುವಂತಿವೆ. ಮಂಡ್ಯದ ಬೂಕನಕೆರೆ ಬಿಟ್ಟು ಬರುವಾಗ ಈ ಯಡಿಯೂರಪ್ಪನ ಹತ್ತಿರ ಹಾಕಿಕೊಳ್ಳಲು ಎರಡನೇ ಚೆಡ್ಡಿ ಬನೀನೂ ಸೈತ ಇರಲಿಲ್ಲ ಎನ್ನುವ ಸತ್ಯ ಇಡೀ ಕರ್ನಾಟಕಕ್ಕೆ ಗೊತ್ತಿದೆ. ಆದರೆ ಇವತ್ತು ಮನೆಗಳು, ಕೃಷಿ ಜಮೀನುಗಳು, ಸೈಟು, ಬಂಗಲೆ, ಶೋರೂಂಗಳು, ಕಾಲೇಜುಗಳು ಎಲ್ಲಾ ಎರಡೆರಡಿವೆ. ಕೆಲವಂತೂ ಭಾರತದ ಜನಸಂಖ್ಯೆಗಿಂತಾ ವೇಗವಾಗಿ ಬೆಳೆದಿವೆ.



ಯಡ್ಡಿಯ ಬೇನಾಮಿ ಆಸ್ತಿ ಖರೀದಿ

ಆದರಲ್ಲೂ ಉಪಮುಖ್ಯಮಂತ್ರಿ ಯಡಿಯೂರಪ್ಪ ...ವರ ಬೇನಾಮಿ ಆಸ್ತಿ ಡೀಲ್‌ಗಳು ಬೆಚ್ಚಿಬೀಳಿಸುವಂತಿವೆ. ...960ರ ಅವಧಿಯಲ್ಲಿ ಮಂಡ್ಯದ ಬೂಕನಕೆರೆ ...ನೆ ಬಿಟ್ಟು ಬರುವಾಗ ಮೈಮೇಲಿದ್ದ ಬಟ್ಟೆ ...ಟ್ಟರೆ ಈ ಯಡಿಯೂರಪ್ಪನ ಹತ್ತಿರ ...ಕಿಕೊಳ್ಳಲು ಎರಡನೇ ಚೆಡ್ಡಿ ಬನೀನೂ ...ತ ಇರಲಿಲ್ಲ ಎನ್ನುವ ಸತ್ಯ ಇಡೀ ಕರ್ನಾಟಕಕ್ಕೆ ...ತ್ತಿದೆ. ನಂತರ ಕರೆದು ಹೆಣ್ಣು ಕೊಟ್ಟ ...ವನ ಮನೆಯನ್ನೇ ನುಂಗಿ ಆಪೋಶನ್ ...ಗೆದುಕೊಂಡ ಯಡಿಯೂರಪ್ಪನವರ ಹತ್ತಿರ ...ವತ್ತು ಮನೆಗಳು, ಕೃಷಿ ಜಮೀನುಗಳು, ...ಟು, ಬಂಗಲೆ, ಶೋರೂಂಗಳು, ಕಾಲೇಜು ...ಳು ಎಲ್ಲಾ ಎರಡೆರಡಿವೆ. ಕೆಲವಂತೂ ...ಭಾರತದ ಜನಸಂಖ್ಯೆಗಿಂತಾ ವೇಗವಾಗಿ ...ಳೆದಿವೆ.

ಹೀಗೆ ಯಡ್ಡಿ ಬೆಳೆಸಿಕೊಳ್ಳುತ್ತಿರುವ ಆಸ್ತಿಗಳ ...ಟ್ಟಿಗೆ ತೀರಾ ಇತ್ತೀಚೆಗೆ ಶಿವಮೊಗ್ಗ ಟೌನಿನಲ್ಲಿ ...ಮೂರು ಭಾರಿ ಆಸ್ತಿಗಳೂ ಸೇರಿಕೊಂಡಿವೆ. ...ವೆಲ್ಲಾ ತಲಾ ಒಂದು ಕೋಟಿ ಮೌಲ್ಯದವುಗಳು.



ಬಿ.ಎಚ್. ರಸ್ತೆಯ ಭೀಮಸೇನರಾಯರ ಒಂದು ಕೋಟಿ ಆಸ್ತಿ

ಬೃಂದಾವನ್ ಹೋಟೆಲ್ ಖರೀದಿ

ಶಿವಮೊಗ್ಗದ ಗೋಪಿ ಸರ್ಕಲ್ ಹತ್ತಿರ ರೈಲ್ವೆ ...ಷನ್ ರೋಡಿನಲ್ಲಿರುವ ಎಚ್‌ಪಿಸಿ ಟಾಕೀಸ್ ಪಕ್ಕದ ...ಂದಾವನ್ ಹೋಟೆಲ್ ಇಡೀ ಜಿಲ್ಲೆಗೆ ಗೊತ್ತಿರುವ ...ದು. ಅಂದಾಜು 50 ಅಡಿ ಅಗಲ 200 ಅಡಿ ...ದ್ದವಿರಬಹುದಾದ ಐತಿಹಾಸಿಕ ಮಹತ್ವವಿರುವ ಈ ...ಗ ಈಗ ಯಡ್ಡಿಯ ಕೈವಶವಾಗಿದೆ. ಹಾಸನದ ...ನ್ಮಾನ್ ಹೋಟೆಲ್ ಮಾಲೀಕ ರಾಘವೇಂದ್ರ ರಾಯನ ...ಸರಿನಲ್ಲಿ ಇದು ಖರೀದಿಯಾಗಿದ್ದರೂ ಇದು ಯಡ್ಡಿಯ ...ನಾಮಿ ಆಸ್ತಿಯಾಗಿದೆ. ಈ ಸನ್ಮಾನ್ ಯಾರೆಂಧರೆ ...ಶಿವಮೊಗ್ಗ ಸನ್ಮಾನ್ ಹೋಟೆಲ್ ಮಾಲೀಕನ ತಮ್ಮನೇ! ...ಈ ಬೃಂದಾವನ್ ಹೋಟೆಲ್‌ನ ಈ ಜಾಗಕ್ಕೆ ಹತ್ತಿರತ್ತಿರ ...ಕೋಟಿ ರೂ. ಪಾವತಿಸಲಾಗಿದೆ. ಸೆಲ್ಲರ್ ಹಾಗೂ ...ಯ್ಯರ್ ನಡುವೆ ಬಾಯಿ ಮಾತಿನ ಒಪ್ಪಂದ ...ಡಿಕೊಂಡು ಆಸ್ತಿ ರಿಜಿಸ್ಟರ್ ಆಗುವ ಮೊದಲೇ ...ವ ಹಳೇ ಕಟ್ಟಡ ಕೆಡವಿ ಖಾಲಿ ನಿವೇಶನ ಎಂದು ...ರಿಸಿ ನೋಂದಣಿ ಮಾಡಿಸಲು ಹೊರಟಿದ್ದಾರೆ. ...ಪ್ ಶುಲ್ಕ ಕದಿಯಲು ಯಡ್ಡಿ ಹುಡುಕಿರುವ ...ಉಪಾಯವಿದು. ಅತ್ಯಂತ ಆಯ ಕಟ್ಟಿನ ಸ್ಥಳದಲ್ಲಿರುವ ...ಸ್ಥಳದಲ್ಲಿ ಮುಂದೆ 10 ಕೋಟಿ ವೆಚ್ಚದ ಬೃಹತ್ ...ಂಗ್ ಕಾಂಪ್ಲೆಕ್ಸ್ ಎದ್ದೇಳಲಿದೆ.

ಹೀರೋ ಹೋಂಡಾ ಶೋರೂಂ ಗುಳುಂ

ಹಿಂದೂ ಸೇವಾ ಧುರೀಣ ಶ್ರೀಮಾನ್ ಯಡ್ಡಿ ಶಿವಮೊಗ್ಗದಲ್ಲಿ ಬೇನಾಮಿ ಹೆಸರಿನಲ್ಲಿ ಖರೀದಿಸಿರುವ ಇನ್ನೊಂದು ಆಸ್ತಿಯೇ ಅಂಜನ್ ಮಾಲೀಕತ್ವದಲ್ಲಿದ್ದ ಹೀರೋ ಹೋಂಡಾ ಶೋರೂಂ. ಬೈಪಾಸ್ ರೋಡಿನ ಹತ್ತಿರದ ಈ ಬೃಹತ್ ಆಸ್ತಿ ಒಂದು ಬೈಕ್ ಶೋರೂಂ, ಪಾಪುಲರ್ ಆಟೋಮೊಬೈಲ್ ಅಂಗಡಿಯನ್ನು ಒಳಗೊಂಡಿದೆ. ಅಂಜನ್ ತಂದೆ ಭರತ್ರಾಜ್ ಒಂದು ಕಾಲದಲ್ಲಿ ಭಾರಿ ಕೈಗಾರಿಕೋದ್ಯಮಿ ಎಂದು ಹೆಸರು ಮಾಡಿದ್ದವರು. ಕರ್ನಾಟಕ ಚೇಂಬರ್ ಆಫ್ ಕಾಮರ್ಸ್‌ನ ಡೈರೆಕ್ಟರ್ ಸಹ. ಇತ್ತೀಚೆಗೆ ಯಾವುದೋ ಆಟೋಮೊಬೈಲ್ ಬಿಡಿಭಾಗಗಳ ತಯಾರಿಕಾ ಘಟಕ ಮಾಡಲು ಹೋಗಿ ಭಾರಿ ಹಣ ಕಳೆದುಕೊಂಡಿದ್ದಾರೆ. ಅಷ್ಟೇ ಅಲ್ಲದೆ 2 ತಿಂಗಳ ಹಿಂದೆ ಷೇರ್ ಮಾರ್ಕೆಟ್ ದಿಢೀರನೆ ಕುಸಿದುಬಿದ್ದಾಗ ಅವರ ಮಗ ಅಂಜನ್ ಹತ್ತಾರು ಲಕ್ಷ ಕಳೆದುಕೊಂಡು ಸಾಲದ ಸುಳಿಗೆ ಸಿಕ್ಕಿಬಿದ್ದಿದ್ದ. ಜೊತೆಗೆ ವೈಶ್ಯಾ ಬ್ಯಾಂಕಿನಲ್ಲೂ ಅಂಜನ್ ಬಾರಿ ಲೋನ್ ಎತ್ತಿ ಸಾಲ ತೀರಿಸಲಾಗದೆ ಡಿಫಾಲ್ಟರ್ ಸಹ ಆಗಿದ್ದ. ಅದೇ ಸಮಯಕ್ಕೆ ಯಡ್ಡಿ ಬಳಿ ಕವಾಯಿ ಮಾಡಿಕೊಂಡಿದ್ದ ಹಡಬೆ ದುಡ್ಡಿತ್ತು. ಸರಿ ಅನ್ನ ಹಳಸಿತ್ತು, ನಾಯಿ ಹಸಿದಿತ್ತು ಎಂಬಂತೆ ಖರೀದಿ ಡೀಲ್ ಮುಗಿಯಿತು.

ವೀರಣ್ಣ ಮೇಸ್ತ್ರಿ ಹೆಸರಲ್ಲಿ ಆಸ್ತಿ

ಯಡ್ಡಿಗೆ ಪುರಾತನ ಕಾಲದಿಂದಲೂ ನಂಬಿಕಸ್ತ ಭಂಟನಾಗಿರುವ ಕಂಟ್ರಾಕ್ಟರ್ ವೀರಣ್ಣ ಮೇಸ್ತ್ರಿ ಹೆಸರಲ್ಲಿ ಈಗ ಶಿವಮೊಗ್ಗ ಸುತ್ತಾಮುತ್ತಾ ಭಾರೀ ಜಮೀನು ಖರೀದಿ ನಡೆಯುತ್ತಿದೆ.

ವಿಮಾನ ನಿಲ್ದಾಣಕ್ಕೆಂದು ಗುರುತಿಸಲಾಗಿರುವ ಶಿವಮೊಗ್ಗ ಸೋಗಾಣೆ ಹತ್ತಿರ ಕಳೆದ 2-3 ತಿಂಗಳಲ್ಲಿ ವೀರಣ್ಣ ಮೇಸ್ತ್ರಿ ಹೆಸರಿನಲ್ಲಿ 50 ಎಕರೆ ಜಮೀನು ಖರೀದಿಯಾಗಿದೆ. ಇದರ ಜೊತೆಗೆ ಸಾಗರ ರಸ್ತೆಯ ರಾಮನಗರದಲ್ಲಿ ಒಂದೇ ಏಟಿಗೆ 45 ಎಕರೆ ಜಮೀನು ಕೊಂಡಿದ್ದಾನೆ ವೀರಣ್ಣ ಮೇಸ್ತ್ರಿ.

ಇಷ್ಟೊಂದು ದುಡ್ಡು ವೀರಣ್ಣ ಮೇಸ್ತ್ರಿಯ ಹತ್ತಿರ ಇರಲು ಸಾಧ್ಯವೇ ಇಲ್ಲ ಎಂಬುದು ಇಡೀ ಶಿವಮೊಗ್ಗಾಗೆ ಗೊತ್ತಿದೆ. ಈ ಜುಜುಬಿ ಮೇಸ್ತ್ರಿಗೆ ಹಣ ಪಂಪ್ ಮಾಡುತ್ತಿರುವುದು ಯಡ್ಡಿ ಎಂಬುದೂ ಈಗ ಜಗಜ್ಜಾಹೀರು. 'ಸೋಗಾಣೆ ಬಳಿ ಏರ್‌ಪೋರ್ಟ್ ಬಂದರೆ



ಬೃಂದಾವನ ಹೋಟೆಲ್

ನಿಮ್ಮ ಭೂಮಿ ಸರ್ಕಾರ ವಶಪಡಿಸಿಕೊಂಡು ಕಡಿಮೆ ಪರಿಹಾರ ಕೊಡುತ್ತೆ. ಅದಕ ಬದಲು ನಮಗೇ ಮಾರಿಬಿಡಿ, ಜಾಸ್ತಿ ದುಡ್ಡು ಕೊಡ್ತೀವಿ' ಎಂದು ಪರೋಕ್ಷ ಬೆದರಿಕೆ ಹಾಗೂ ಪ್ರತ್ಯಕ್ಷ ಆಮಿಷವೊಡ್ಡಿ ರೈತರ ಈ ಜಮೀನು ಗಳನ್ನು ಲಪಟಾಯಿಸಿದ್ದಾರೆ 'ರೈತ ನಾಯಕ' ಯಡಿಯೂರಪ್ಪ.

ಭೀಮಸೇನ ರಾಯರ ಕುಟುಂಬಕ್ಕೆ, 1 ಕೋಟಿ ಆಫರ್!

ಯಡ್ಡಿ ನಡೆಸುತ್ತಿರುವ ರಿಯಲ್ ಎಸ್ಟೇಟ್ ಶಾಪಿಂಗ್‌ನಲ್ಲಿ ಇನ್ನೂ ಕೈಗೂಡದಿರುವ ಡೀಲ್ ಎಂದರೆ ಬಿ.ಎಚ್. ರೋಡಿನ ವಿನಾಯಕ ಟಾಕೀಸ್ ಎದುರಿಗಿರುವ ಬೃಹತ್ ನಿವೇಶನ. ಅಂದಾಜು 250 ಅಡಿ ಉದ್ದ 100 ಅಡಿ ಅಗಲವಿರುವ ಈ ಖಾಲಿ ಸೈಟ್ ಭೀಮಸೇನ ರಾವ್ ಕುಟುಂಬಕ್ಕೆ ಸೇರಿದೆ. ಹಾಗಂತ ಒಂದು ಬೋರ್ಡು ಅಲ್ಲಿ ನೇತಾಡುತ್ತಿದೆ. ಈ ಆಸ್ತಿಗೆ ಸಂಬಂಧಿಸಿದಂತೆ ಕೆಲ ಸಣ್ಣಪುಟ್ಟ ತಕರಾರುಗಳಿವೆ ಎಂದೂ ಹೇಳಲಾಗುತ್ತಿದೆ. ಆದರೆ ಯಡ್ಡಿ ಎಂತಾ ಉದಾರಿ ಹಾಗೂ ಕರುಣಾಮಯಿ ಎಂದರೆ 'ಲಿಟಿಗೇಷನ್ ಏನೇ ಇದ್ರು ನಾನು ನೋಡಿಕೋತೀನಿ, 80 ಲಕ್ಷಕ್ಕೆ ನನಗೆ ಕೊಡಿ' ಎಂದಿದ್ದಾರೆ. ಆದರೆ ಬೆಂಗಳೂರಿನ ಮೊಬೈಲ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ರಾಯರ ಮಗ ಏಕೋ ಏನೋ ಈ ಡೀಲಿಗೆ ಒಪ್ಪಿಲ್ಲ. ಕೊನೆಗೆ ಯಡ್ಡಿ 1 ಕೋಟಿ ಆಮಿಷ ಒಡ್ಡಿದ್ದರೂ ಡೀಲ್ ಕುದುರದೆ ಹಾಗೆ ಇದೆ. ಯಾರಿಗೆ ಗೊತ್ತು ಇದೇ ಯಡ್ಡಿ ನಾಳೆ ಒಂದೂವರೆ ಕೋಟಿ ಬಿಸಾಕುತ್ತೇನೆ ಎಂದರೂ ಶಿವಮೊಗ್ಗದ ಜನ ಆಶ್ಚರ್ಯ ಪಡುವುದಿಲ್ಲ, ಹಾಗಿದೆ ಯಡ್ಡಿಯ ಕಾಂಚಾಣ ಮಹಿಮೆ.

ಶಿವಮೊಗ್ಗದ ಜನ ಇದನ್ನೆಲ್ಲಾ ಗಮನಿಸಬೇಕಿದೆ. ಏಕೆಂದರೆ ಕಾಂಗ್ರೆಸ್ ಖದೀಮರ ಪಕ್ಷ, ಜನತಾ ದಳದವರು ಭ್ರಷ್ಟರು ಎಂದು ಸದಾ ಚೀರಿಕೊಳ್ಳುತ್ತಿದ್ದ ಯಡಿಯೂರಪ್ಪ ಬಿಜೆಪಿ ಮಾತ್ರ ಶ್ರೇಷ್ಠ ಎಂದು ಹೇಳಿಕೊಳ್ಳುತ್ತಿದ್ದರು. ಬಿಜೆಪಿ ಭ್ರಷ್ಟಾಚಾರ ವಿರೋಧಿಸುತ್ತದೆ ಎಂದು ಜನರನ್ನು ನಂಬಿಸಿದ್ದರು.

ಆದರೆ ಈಗ ಏನಾಗಿದೆ? ಏಳು ತಿಂಗಳ ಹಿಂದಿನವರೆಗೂ ಒಂದೇ ಒಂದು ಅಧಿಕಾರ ಹಿಡಿಯದಿದ್ದ, ಶಾಶ್ವತ ವಿರೋಧ ಪಕ್ಷದ ನಾಯಕನಾಗಿದ್ದ ಯಡ್ಡಿ ಈ ಪಾಟಿ ಹಣ ಮಾಡಿದ್ದು ಹೇಗೆ? ಇಂಥ ಮನುಷ್ಯನಿಗೆ ಅಧಿಕಾರ ಸಿಕ್ಕಿದರೆ ಆತ ಇನ್ನೆಷ್ಟು ತಿಂದು ತೇಗಬಹುದು ಎಂದು ಜನ ಚಿಂತಿಸಬೇಕಿದೆ. ಎಂದೂ ಅಧಿಕಾರ ಹಿಡಿಯದೇ ಭ್ರಷ್ಟನಾಗಿರುವ ಯಡ್ಡಿ ಇವತ್ತು ಶಿವಮೊಗ್ಗದಲ್ಲಿ ಹತ್ತಾರು ಕೋಟಿ ... ಆಸ್ತಿ ಖರೀದಿಸುತ್ತಿದ್ದಾರೆ.

... ●

ಬಿಜೆಪಿ ಕಳ್ಳರಿಂದ ಸೂಡಾಗೆ ಲಾಭ

ಚದರಡಿಗೆ ಒಂದು ನೂರು ರೂಪಾಯಿಯೂ ಸಿಗದ ಕಡೆ ಈಗ ನಾನ್ನೂರು, ಐನೂರು ರೇಟ್. ಇದು ಶಿವಮೊಗ್ಗ ಅರ್ಬನ್ ಡವಲಪ್‌ಮೆಂಟ್ ಅಥಾರಿಟಿಯ (ಸೂಡಾ) ಯೋಗ. ಸೂಡಾದವರು ಈಗ ಶಿವಮೊಗ್ಗದಲ್ಲಿ ಯಾವುದೇ ಮೂಲೆಯಲ್ಲಿರುವ ಸೈಟ್‌ಗಳನ್ನು ಹರಾಜು ಹಾಕಿದರೂ ಯಡಿಯೂರಪ್ಪ, ಈಶ್ವರಪ್ಪಗಳು ಪೈಪೋಟಿ ಮೇಲೆ ರೇಟ್ ಏರಿಸಿ ಖರೀದಿಸುತ್ತಿದ್ದಾರೆ. ಈ ಮೊದಲೆಲ್ಲಾ ...ಅಡಿಗೆ ನೂರು ರೂ.ಗಳು ಇರದಿದ್ದ ಗೋಪಾಳ ಮುಂತಾದ ಏರಿಯಾಗಳಲ್ಲಿ ರಾತ್ರೋರಾತ್ರಿ ರೇಟ್ ...ಏರಿಬಿಟ್ಟಿದೆ. ಸೂಡಾದವರು ಸೈಟ್ ಹರಾಜ್ ಬಗ್ಗೆ ಪತ್ರಿಕಾ ಜಾಹೀರಾತುಗಳನ್ನು ಕೊಟ್ಟರೆ ಸೈಟ್ ...ಕೊಳ್ಳುವ ಮೇಲೂ ಆ ಜಾಹೀರಾತು ಖರ್ಚು ಹುಟ್ಟುತ್ತಿರಲಿಲ್ಲ, ಆದರೆ ಈಗ ಬಿಜೆಪಿಯ ಮಂತ್ರಿವರ್ಯರು ...ದಿಂದ ಕದಿಯುತ್ತಿರುವ ಭಾರಿ ಹಣವನ್ನು ಇಲ್ಲಿ ತಂದು ಸುರಿಯುತ್ತಿದ್ದಾರೆ. ಈ ಹಣದ ಪ್ರಮಾಣ ... ಸೂಡಾ ... ಬಾರಿಗೆ ಕೋಟಿಗಳ ಲೆಕ್ಕದಲ್ಲಿ ಲಾಭ ಬಂದಿದೆ.

ಇದು ... ದುಡ್ಡು ...

THE TIMES OF INDIA

Times ಕೊಡುಗೆ 'ಡಬ್ಬಿಂಗ್' ಪತ್ರಿಕೋದ್ಯಮ!

ಉಷಾ ಕಿರಣ
ಸುಂದರ ಬೆಳಗಿನೊಂದು ಸಮೃದ್ಧ ಪತ್ರಿಕೆ

ವಿಜಯ ಕರ್ನಾಟಕ ಎಂಬ ನಂ.1 ಕನ್ನಡ ದಿನಪತ್ರಿಕೆ ಸೇರಿದಂತೆ ವಿಜಯಾನಂದ ಪ್ರಿಂಟರ್ಸ್ ಲಿಮಿಟೆಡ್ ಸಂಸ್ಥೆಯನ್ನೇ ಟೈಮ್ಸ್ ಗ್ರೂಪ್‌ನವರಿಗೆ ವಿಜಯಸಂಕೇಶ್ವರ ಎಂಬ ಲಾರಿ ಮಾಲೀಕ ಭಾರಿ ಲಾಭಕ್ಕೆ ಮಾರಿದಾಗ ಊಹಿಸಿದಂತೆ ಕನ್ನಡ ಪತ್ರಿಕೋದ್ಯಮದಕ್ಕೆ ಈಗ ಹೊಸ ಸವಾಲು ಎದುರಾಗಿದೆ.

ಪತ್ರಿಕೋದ್ಯಮದಲ್ಲೂ ಡಬ್ಬಿಂಗ್ ದಂಧೆ ಪ್ರಾರಂಭವಾಗುತ್ತಿದೆ!

ಕೇವಲ ಒಂದು ತಿಂಗಳ ಹಿಂದೆ ಲಾರಿ ಮಾಲೀಕ, ಪಾರ್ಟ್ ಟೈಂ ರಾಜಕಾರಣಿ ವಿಜಯಸಂಕೇಶ್ವರರ ಮಾಲೀಕತ್ವದ ವಿಜಯ ಕರ್ನಾಟಕ, ವಿಜಯ ಟೈಮ್ಸ್ ಹಾಗೂ ಉಷಾಕಿರಣ ಎಂಬ ಮೂರು ಪತ್ರಿಕೆಗಳನ್ನು ಕೊಂಡುಕೊಂಡಿದ್ದ ಟೈಮ್ಸ್ ಗ್ರೂಪ್‌ನ ಮಾರ್ವಾಡಿಗಳು ಈಗ 'ಉಷಾಕಿರಣ'ವನ್ನು ಮುಚ್ಚಿ 'ಟೈಮ್ಸ್ ಆಫ್ ಇಂಡಿಯಾ'ದ ಡಬ್ಬಿಂಗ್ ಪತ್ರಿಕೆಯೊಂದನ್ನು ತರಲು ಸಿದ್ಧತೆ ನಡೆಸಿದ್ದಾರೆ.

ಯಾವುದೇ ಪತ್ರಿಕೆಯನ್ನೂ ಇನ್ನೆರಡು ವರ್ಷ ಯಾವುದೇ ಕಾರಣಕ್ಕೂ ಮುಚ್ಚುವುದಿಲ್ಲ ಎಂದು ಪತ್ರಿಕೆಯನ್ನು ಕೊಂಡಾಗ ಬಣ್ಣದ ಮಾತನಾಡಿದ್ದ ಟೈಮ್ಸ್ ಗ್ರೂಪ್‌ನ ಅಧಿಕಾರಿಗಳಿಗೆ 'ಉಷಾಕಿರಣ' ಎಂಬ ಒಂದುವರೆ ವರ್ಷದ ಕೂಸನ್ನು ಉಳಿಸಿಕೊಳ್ಳುವುದರಿಂದ ಯಾವ ಲಾಭವೂ ಇಲ್ಲ ಎಂಬುದು ಮನವರಿಕೆಯಾಗಿದೆ.

ಹೀಗಾಗಿ ಕೂಡಲೇ ಇದಕ್ಕೊಂದು ಗತಿಕಾಣಿಸಲು ಮುಂದಾಗಿದ್ದು, ಇದರ ಮೊದಲ ಹಂತವಾಗಿ ಸೆ. 17 ರಿಂದ ಪತ್ರಿಕೆಯು ಐದು ಬ್ಯೂರೊಗಳನ್ನು ಮುಚ್ಚುತ್ತಿದ್ದಾರೆ. ಬೆಂಗಳೂರು ಕೇಂದ್ರ ಕಚೇರಿಯಲ್ಲೂ ಸಿಬ್ಬಂದಿ ಕಡಿತ ಮಾಡಲಾಗುತ್ತಿದೆ. ಪರಿಣಾಮ ಉಪಸಂಪಾದಕರು, ವರದಿಗಾರರು, ಬಿಡಿವರದಿಗಾರರು ಎಲ್ಲ ಸೇರಿ 300ಕ್ಕೂ ಹೆಚ್ಚು ಮಂದಿ ಪತ್ರಕರ್ತರು ಬೀದಿಗೆ ಬೀಳಲಿದ್ದಾರೆ.

ಮುಂದೆ ಡಬ್ಬಿಂಗ್ ದಂಧೆ

ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಮಂಗಳೂರು ಕೇಂದ್ರಗಳಿರುತ್ತವೆಯಾದರೂ ಇಲ್ಲಿ ಮುಂದೆ ನಡೆಯುವುದು ಡಬ್ಬಿಂಗ್ ದಂಧೆ!

'ಉಷಾಕಿರಣ' ಪತ್ರಿಕೆಯ ಬದಲಾಗಿ 'ಟೈಮ್ಸ್ ಆಫ್ ಕರ್ನಾಟಕ', 'ಟೈಮ್ಸ್ ಆಫ್ ಇಂಡಿಯಾ- ಕನ್ನಡ ಆವೃತ್ತಿ' ಹೀಗೆ ಯಾವುದಾದರೂ ಹೆಸರಿನಲ್ಲಿ ಈಗ ಇಂಗ್ಲಿಷ್‌ನಲ್ಲಿ ಬರುತ್ತಿರುವ ಟೈಮ್ಸ್ ಪತ್ರಿಕೆಯನ್ನು ಭಟ್ಟಿ ಇಳಿಸಿ ಕನ್ನಡ ಪತ್ರಿಕೆಯನ್ನು ತರಲು ಸಿದ್ಧತೆ ನಡೆದಿದೆ.

ಇಂಗ್ಲಿಷ್‌ನಿಂದ ಕನ್ನಡಕ್ಕೆ ತರ್ಜುಮೆ ಮಾಡುವವರನ್ನು ಮಾತ್ರ ಉಳಿಸಿಕೊಂಡು ಉಳಿದ ಪತ್ರಕರ್ತರಿಗೆ ಮೂರು ತಿಂಗಳ ವೇತನ ನೀಡಿ ಮನೆಗೆ ಕಳುಹಿಸುವ ತೀರ್ಮಾನ ತೆಗೆದುಕೊಳ್ಳಲಾಗಿದೆಯಂತೆ.

ಹೊಸ ಪತ್ರಿಕೆಯ 12 ಪುಟವೂ ಕಲ್ಲರ್ ಕಲ್ಲರಾಗಿ ಟೈಮ್ಸ್ ಆಫ್ ಇಂಡಿಯಾದ ರೀತಿಯಲ್ಲಿಯೇ ಪ್ರಕಟವಾಗಲಿದ್ದು, ಕೇವಲ ಬೆಂಗಳೂರು, ಮಂಗಳೂರು, ಮೈಸೂರು ಮತ್ತು ಹುಬ್ಬಳ್ಳಿಯ ನಗರದ ಓದುಗರಿಗೆ ಮಾತ್ರ ಒಂದು ರೂಪಾಯಿಗೆ ಲಭ್ಯವಾಗಲಿದೆಯಂತೆ. ಈ ಪ್ರಯೋಗ ಆರು ತಿಂಗಳಿನಲ್ಲಿ ಯಶಸ್ವಿಯಾದರೆ ಮುಂದೆ ಬೇರೆ ಜಿಲ್ಲೆಗಳಿಗೆ ವಿಸ್ತರಿಸಲಾಗುತ್ತದೆಯಂತೆ. ಇಲ್ಲವಾದಲ್ಲಿ ತರ್ಜುಮೆಗಾರರಾಗಿ ಬದಲಾಗಲಿರುವ ಉಳಿದ ಪತ್ರಕರ್ತರೂ ಬೀದಿಗೆ ಬೀಳಲಿದ್ದಾರೆ.

'ಗಾಳಿ ಬಂದೆಡೆ ತೂರಿ'ಕೊಳ್ಳುವುದನ್ನೇ ತಮ್ಮ 'ಪ್ರತಿಭೆ' ಎಂದು ಭಾವಿಸಿರುವ ಸಂಪಾದಕ ವೆಂಕಟನಾರಾಯಣ ಈ ಡಬ್ಬಿಂಗ್ ದಂಧೆಯ ನೇತೃತ್ವ ವಹಿಸಲಿದ್ದಾರೆ. ಈಗಾಗಲೇ ಈ ಕೆಲಸ ತಮ್ಮ ಅನುಭವಕ್ಕೆ ತಕ್ಕದ್ದಲ್ಲ ಎಂದು ಸುದ್ದಿ ಸಂಪಾದಕರಾಗಿದ್ದ ಜಯರಾಮ ಅಡಿಗ ರಾಜೀನಾಮೆ ನೀಡಿ ಮನೆಸೇರಿದ್ದಾರೆ. ಪ್ರಜಾವಾಣಿಯಿಂದ ಬಂದು ನಿವೃತ್ತಿ ಜೀವನ ಸಾಗಿಸುತ್ತಿದ್ದ ಶರತ್ ಕಲ್ಕೋಡ್, ಇನ್ನೂ ಉತ್ಸಾಹ ಕಳೆದುಕೊಳ್ಳದ ಸುದ್ದಿ ಸಂಪಾದಕ ತಿಮ್ಮಭಟ್ ಏನುಮಾಡುತ್ತಾರೋ ಕಾದು ನೋಡಬೇಕು ಎಂದು 'ಉಷಾಕಿರಣ'ದ ನಿರಾಶ್ರಿತರು ಪ್ರೆಸ್‌ಕ್ಲಬ್‌ನಲ್ಲಿ ತಲೆಮೇಲೆ ಕೈಹೊತ್ತು ಕೊಂಡು ಕುಳಿತು ಗುನುಗುತ್ತಿದ್ದಾರೆ.

ಕೇರಳದವರಿಂದ ಪಾಠ ಕಲಿಯಬೇಕಿದೆ

ಹಿಂದೊಮ್ಮೆ ಇದೇ ಟೈಮ್ಸ್ ಗ್ರೂಪ್‌ನ ಮಾರ್ವಾಡಿಗಳು ಕೇರಳದಲ್ಲಿ ಮಲೆಯಾಳಿ ಪತ್ರಿಕೆಯೊಂದರ ಮಾಲೀಕತ್ವವನ್ನು ಹಿಂಬಾಗಿಲಿನಿಂದ ಪಡೆಯಲು ಹೊರಟಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಅಲ್ಲಿಯ ಪ್ರಜ್ಞಾವಂತ ಓದುಗರು ಪ್ರತಿಭಟಿಸಿದ್ದರು. ಪ್ರತಿಭಟನೆಗೆ ಹೆದರಿ ಅಲ್ಲಿಂದ ಕಾಲ್ಕಿತ್ತ ಟೈಮ್ಸ್ ಮಾಲೀಕರ ಕಣ್ಣಿಗೆ ನಂತರ ಬಿದ್ದಿದ್ದು ಕರ್ನಾಟಕ.

ಕೇರಳದ ಘಟನೆಯಿಂದ ಪಾಠ ಕಲಿತ ಟೈಮ್ಸ್‌ನವರು ಕರ್ನಾಟಕದಲ್ಲಿ ನೇರವಾಗಿ ಕನ್ನಡ ಪತ್ರಿಕೆಯಲ್ಲಿ ಹಣ ಹೂಡಲು ಹೋಗಲಿಲ್ಲ, ಬದಲಾಗಿ ಇಲ್ಲಿ ಪತ್ರಿಕೆಯನ್ನು ಪ್ರಕಟಿಸುತ್ತಿದ್ದ ಸಂಸ್ಥೆಯೊಂದನ್ನೇ ಕೊಂಡರು. ಆ ಸಂಸ್ಥೆಯ ಹೆಸರಿನಲ್ಲಿಯೇ ನಂ.1 ಸೇರಿದಂತೆ ಎರಡು ಪತ್ರಿಕೆಗಳ ಒಡೆತನವನ್ನೂ ಪಡೆದರು. ನೆಪ ಮಾತ್ರಕ್ಕೆ ಆನಂದ ಸಂಕೇಶ್ವರರನ್ನು ನಿರ್ದೇಶಕ ಮಂಡಳಿಯಲ್ಲಿ ಇಟ್ಟುಕೊಂಡು ಕೇರಳದಂತೆ ಇಲ್ಲಿ ವಿರೋಧ ವ್ಯಕ್ತವಾಗದಂತೆ ನೋಡಿಕೊಂಡರು. ಈಗ ಕನ್ನಡ ಪತ್ರಿಕೆಯೊಂದರ ಸಿಬ್ಬಂದಿಗಳನ್ನೇ ಬಳಸಿಕೊಂಡು ಡಬ್ಬಿಂಗ್ ಪತ್ರಿಕೆಯೊಂದನ್ನು ಹೊರತರುವ ಧೈರ್ಯ ತೋರಿಸುತ್ತಿದ್ದಾರೆ.

ಕನ್ನಡನಾಡಿನ ಹಿತರಕ್ಷಣೆಯ ಬಗ್ಗೆ ಭಾಷಣ ಬಿಗಿಯುತ್ತ 'ಕನ್ನಡನಾಡು' ಎಂಬ ಪಕ್ಷ ಕಟ್ಟಿ ಜನರನ್ನು ಮೂರ್ಖರನ್ನಾಗಿಸಲು ಹೊರಟಿದ್ದ ವಿಜಯಸಂಕೇಶ್ವರರ ಮೂರ್ಖತನವೇ ಈ ಎಲ್ಲ ಬೆಳವಣಿಗೆಗಳಿಗೆ ಕಾರಣ.

ಲಾಭ-ನಷ್ಟದ ಲೆಕ್ಕಾಚಾರ

ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಬಿಂಬಿಸುವ 'ಸಂಸ್ಕೃತಿ'ಯ ಕನಸು ಕಾಣುವ ಕನ್ನಡ ಓದುಗರ ವರ್ಗ ಈ ಪತ್ರಿಕೆಯನ್ನು ಸ್ವೀಕರಿಸಬಹುದೆಂಬುದು ಟೈಮ್ಸ್‌ನವರ ಲೆಕ್ಕಾಚಾರ. ಜಾಹೀರಾತು ನೀಡುವವರಿಗೆ ಲಾಭತರುವ ಓದುಗರ ವರ್ಗ ಈ ಪತ್ರಿಕೆ ಕೊಂಡರೆ ಟೈಮ್ಸ್‌ನವರ ಪ್ರಯೋಗ ಗೆದ್ದಂತೆ.


ಇಂಗ್ಲಿಷ್ ಪತ್ರಿಕೆಯ ಕನ್ನಡ ಅನುವಾದ ಓದುವುದಕ್ಕೆ ಕೀಳರಿಮೆ ಕಾಡಿ, ಓದುಗರು ದೂರ ನಿಂತರೆ ಈ ಪ್ರಯೋಗ ಫ್ಲಾಪ್ ಆಗುತ್ತದೆ. ಹೀಗಾದರೆ ಟೈಮ್ಸ್‌ನವರಿಗೇನೂ ನಷ್ಟವಿಲ್ಲ, ನಷ್ಟದಲ್ಲಿರುವ ಪತ್ರಿಕೆಯೊಂದನ್ನು ಪ್ರಯೋಗ ನಡೆಸಿ ಮುಚ್ಚಿದಂತಾಗುತ್ತದೆ. ಏಕೆಂದರೆ ಸ್ಥಳೀಯ ಭಾಷೆಯಲ್ಲಿ ಟೈಮ್ಸ್ ಆಫ್ ಇಂಡಿಯಾ ಪ್ರಕಟಿಸುವ ಪ್ರಯೋಗ ನಡೆಯುತ್ತಿರುವುದು ಇದೇ ಮೊದಲು.

ಟೈಮ್ಸ್ ಆಫ್ ಇಂಡಿಯಾಕ್ಕೆ ಬರುವ ಜಾಹೀರಾತುಗಳನ್ನು ಪತ್ರಿಕೆಯ ಕನ್ನಡ ಆವೃತ್ತಿಯಲ್ಲಿಯೂ ಪ್ರಕಟಿಸಲು 10 ರೂ. ಜಾಹೀರಾತು ದರ ಏರಿಸಿದರೆ ಸಾಕು, ಕೋಟ್ಯಾಂತರ ರೂ. ಹಣ ಹರಿದುಬರುತ್ತದೆ. ಅದರಲ್ಲಿ ಒಂದಿಷ್ಟು ಖರ್ಚುಮಾಡಿ ಅನುವಾದ ಮಾಡಿಸಿದರೆ ಆಯಿತು. ಉಳಿದಿದ್ದೆಲ್ಲಾ ಲಾಭವೇ. ಎರಡು ವರ್ಷದಲ್ಲಿ ಮೂರು ಪತ್ರಿಕೆಗಳಿಂದ 30 ಕೋಟಿ ರೂ. ಲಾಭ ಮಾಡುತ್ತೇವೆ ಎಂದು ಕೊಂಡು ಬಂದಿರುವ ಟೈಮ್ಸ್ ದಣಿಗಳ ತಲೆಯಲ್ಲಿ ಇಂಥಹ ಅದೆಷ್ಟು ಐಡಿಯಾಗಳಿವೆಯೋ?

ಪರಿಣಾಮ ಏನು?

ಇದ್ದುದರಲ್ಲಿ ಒಂದಿಷ್ಟು ಜಾತ್ಯತೀತ ನಿಲುವು ಹೊಂದಿ, 'ವಿಜಯ ಕರ್ನಾಟಕ'ಕ್ಕಿಂತ ಒಂದಿಷ್ಟು ಮೇಲು ಎನ್ನಿಸಿದ್ದ 'ಉಷಾಕಿರಣ'ವನ್ನು ಮುಚ್ಚಿ ಡಬ್ಬಿಂಗ್ ಪತ್ರಿಕೆ ಆರಂಭಿಸುತ್ತಿರುವುದರ ಪರಿಣಾಮ ಏನು ಎಂಬ ಪ್ರಶ್ನೆಗೆ ಉತ್ತರವೇನೂ ಸರಳವಾಗಿಲ್ಲ.

ಈ ಪ್ರಯೋಗ ಕನ್ನಡ ಪತ್ರಿಕೋದ್ಯಮದ ಮೇಲೆ ಬೀರುವ ಪರಿಣಾಮ ಏನು? ಈ ರೀತಿಯ ಪತ್ರಿಕೆಗಳು ಯಾವ ಸಂಸ್ಕೃತಿಗೆ ಪ್ರೋತ್ಸಾಹ ನೀಡುತ್ತವೆ? ಇವುಗಳ ಹಿತಾಸಕ್ತಿ ಏನಾಗಿರುತ್ತದೆ? ಎಂಬುದನ್ನು ಟೈಮ್ಸ್ ಪತ್ರಿಕೆಯನ್ನು ನೋಡಿದರೆ ಗೊತ್ತಾಗುತ್ತದೆ. ಬಿಡಿಸಿ ಹೇಳಬೇಕಾಗಿಯೇನೂ ಇಲ್ಲ.



ಡಬ್ಬಿಂಗ್ ವಿರೋಧಿಸಿಯಾರೇ?

ಚಲನಚಿತ್ರ, ಟೀವಿ ಧಾರವಾಹಿಗಳ ಡಬ್ಬಿಂಗ್ ನಡೆದಾಗೆಲ್ಲಾ ಗಂಟಲು ಹರಿದುಹೋಗುವಂತೆ ಘೋಷಣೆ ಕೂಗಿ, ಪ್ರತಿಭಟನೆ ನಡೆಸುತ್ತಿದ್ದ ಕನ್ನಡ 'ಹೋರಾಟ'ಗಾರರು, ಕನ್ನಡದ ಚಿಂತಕರು ಪತ್ರಿಕೆಯ ಡಬ್ಬಿಂಗ್ ನಡೆದರೆ ಏನು ಮಾಡುತ್ತಾರೆ ಎಂಬುದೀಗ ಕುತೂಹಲದ ವಿಷಯ.

ಕರ್ನಾಟಕದಲ್ಲಿ ಯಾವ ರೀತಿಯ ಪ್ರಯೋಗ ನಡೆದರೂ ಕನ್ನಡಿಗರು ಸ್ವಾಭಿಮಾನ ಮರೆತು, ಸ್ವಂತಿಕೆಯಿಲ್ಲದ್ದನ್ನು ಸ್ವೀಕರಿಸುತ್ತಾರೆ ಎಂದಾದಲ್ಲಿ ಕನ್ನಡ ಓದುಗರ ಮನೆಯಲ್ಲಿಯೂ ಇನ್ನು ಟೈಮ್ಸ್ ಆಫ್ ಇಂಡಿಯಾದಲ್ಲಿ ಪ್ರಕಟವಾಗುವ ಅರೆಬೆತ್ತಲೆ ನಟಿಯರ ಫೋಟೋಗಳು ಮಿಂಚಲಿವೆ!

-ವರದಿಗಾರ

ಟೈಮ್ಸ್ ಮಾರ್ವಾಡಿಗಳಿಗೇ ವಿಆರ್‌ಎಲ್ ಟೋಪಿ!

'ಕನ್ನಡ ನಾಡಿ'ನ ಹಿತಾಸಕ್ತಿಯ ಮಾತನಾಡುತ್ತ... ದೊಡ್ಡ ಕನ್ನಡ ಓದುಗರ ಬಳಗವನ್ನು ಟೈಮ್ಸ್ ಧಣಿಗಳ... ಒಪ್ಪಿಸಿದ ವಿಜಯಸಂಕೇಶ್ವರ್ ಟೈಮ್ಸ್ ಮಾರ್ವಾ... ಗಳಿಗೇ ಟೋಪಿಹಾಕಲು ಹೋಗಿ ಸಂಕಷ್ಟದ... ಸಿಕ್ಕಿಹಾಕಿಕೊಂಡಿದ್ದಾರೆಂಬ ಸುದ್ದಿ ಬಂದಿದೆ.

ನಂ.1 ವಿಜಯಕರ್ನಾಟಕ, ಉಷಾಕಿರಣ ಹಾಗ... ವಿಜಯ ಟೈಮ್ಸ್ ಈ ಮೂರು ಪತ್ರಿಕೆಗಳನ್ನು 17... ಕೋಟಿ ರೂ. ಸುರಿದು ಟೈಮ್ಸ್ ಗ್ರೂಪ್‌ನವರ... ತರಾತುರಿಯಲ್ಲಿ ತೆಗೆದುಕೊಂಡರ... ಈಗ ವಿಆರ್‌ಎಲ್‌ನ ಆಸ್ತಿಯನ್ನು... ಯಾವ ಟೇಪಿನಿಂದ ಅಳೆದರೂ ಒಟ್ಟು... ಆಸ್ತಿಯ ಮೌಲ್ಯ 55 ರಿಂದ 60... ಕೋಟಿ ಮೀರುತ್ತಿಲ್ಲವಂತೆ.

ಇನ್ನು ಪತ್ರಿಕೆಗಳ ಪ್ರಸಾರ... ಜಾಹೀರಾತಿನಿಂದ ಬರುವ ಹಣ ಕೂ... ಸಂಕೇಶ್ವರ್ ತೋರಿಸಿದ ಲೆಕ್ಕಾಚಾ... ದಷ್ಟಿಲ್ಲವಂತೆ. ಹಳೆಯ ಧಣಿಯ... ಮಾತು ಕೇಳಿ ಸುಳ್ಳು

ಹೇಳಿದ ಒಬ್ಬೊಬ್ಬರೇ ಅಧಿಕಾರಿ... ಗಳು ಸುಮ್ಮನೆ ಜಾಗಖಾಲಿಮಾಡು... ತ್ತಿದ್ದಾರಂತೆ!

ಟೋಪಿ ಹಾಕಿಸಿಕೊಂಡಿದ್ದು ಗೊತ್ತಾಗುತ್ತಿದ್ದಂತೆಯೇ... ಬೆಸ್ತು ಬಿದ್ದ ಮಾರ್ವಾಡಿಗಳು ಈಗ ಕೋಲ್ಕತ್ತಾದಿಂ... ಆಸ್ತಿ ಅಂದಾಜಿಸುವ ತಜ್ಞರನ್ನು ಕರೆಸಿ, ಮತ್ತೆ ಮೂಲ... ಮೂಲೆಯಿಂದ ಆಸ್ತಿ ಅಳೆಸುತ್ತಿದ್ದಾರಂತೆ!

'ಏನಿಲ್ಲಾ ಅಂದ್ರೂ ಐವತ್ತು ಕೋಟಿ ಹೆ... ಕೊಟ್ಟಂತಾಗಿದೆ' ಎಂದು ಟೈಮ್ಸ್ ಅಧಿಕಾರಿಗಳ... ಕೈಹಿಸುಕಿಕೊಂಡು ಟೈಮ್ಸ್‌ನ ದಿಲ್ಲಿ ಧಣಿಗಳಿಗೆ ದೂರ... ಹೇಳುತ್ತಿದ್ದಾರೆಂಬ ವರದಿಗಳಿದ್ದು, ಸುಳ್ಳು ಹೇಳಿ... ಸಂಕೇಶ್ವರ್ ಗ್ಯಾಂಗಿಗೆ ಹೇಗೆ ಪಾಠ ಕಲಿಸುತ್ತಾರೋ... ಗೊತ್ತಿಲ್ಲ!

ಭಟ್ಟರ ಮೇಲೆ ಸುಧಾ ಕಣ್ಣು!




ಇನ್ಫೋಸಿಸ್‌ನ 'ಡಾಲರ್‌ಸೊಸೆ' ಸುಧಾಮೂರ್ತಿ ಈಗ ಕನ್ನಡ ಪತ್ರಿಕೆಯ ಸಂಪಾದಕರಾಗುವ ಕನಸು ಕಾಣುತ್ತಿದ್ದಾರೆ!

ಕೈತುಂಬಾ ಇರುವ ಹಣವನ್ನು ಖಾಲಿ ಮಾಡಲು ಸರಿಯಾದ ಮಾರ್ಗ ಎಂದರೆ ಪತ್ರಿಕೆ ಪ್ರಾರಂಭಿಸುವುದು ಎಂಬ ಹೊಸ 'ಬಿಸಿನೆಸ್' ಸಿದ್ಧಾಂತಕ್ಕೆ ಬಂದಿರುವ ಅವರು ಇದರಿಂದ ತಾವು ಕನ್ನಡನಾಡಿನಲ್ಲಿ ಅಜರಾಮರವಾಗಿ ಉಳಿಯಬಹುದು ಎಂಬ ಭ್ರಮೆಯಲ್ಲಿದ್ದಾರಂತೆ.

ಪತ್ರಿಕೆ ಪ್ರಾರಂಭಿಸಿದರೆ ಸಮಾಜಕ್ಕೆ 'ದೊಡ್ಡ' ಕೊಡುಗೆ ನೀಡಿದಂತೆಯೂ ಆಗುತ್ತದೆ, ಜೊತೆಗೆ ತಮ್ಮ ಹಿತಾಸಕ್ತಿಯನ್ನೂ ಕಾಪಾಡಿಕೊಳ್ಳಬಹುದು ಎಂದು ನಂಬಿರುವ ಸುಧಾಮೂರ್ತಿ ತಮ್ಮ ಕನಸನ್ನು ಈಡೇರಿಸಿಕೊಳ್ಳಲು ಸೂಕ್ತ ವ್ಯಕ್ತಿ ಎಂದು ಗುರುತಿಸಿರುವು... ಮಾತ್ರ ವಿಕದ ವಿಶ್ವೇಶ್ವರ ಭಟ್ಟರನ್ನು!

ಹೊಸ ಮ್ಯಾನೇಜ್‌ಮೆಂಟ್‌ನ ಗಮನ ಸೆಳೆಯಲು ಕಾರ್ಪೊರೇಟ್ ಶೈಲಿಯ ನಡವಳಿಕೆ ಪ್ರದರ್ಶಿ... ತಮಗಿದ್ದ ಬುದ್ಧಿವಂತಿಕೆಯನ್ನೆಲ್ಲಾ ಖಾಲಿ ಮಾಡಿಕೊಳ್ಳುತ್ತಿರುವ ವಿಶ್ವೇಶ... ಭಟ್‌ಗೆ ವಿಕ ಬಿಟ್ಟು ಹೋಗುವ ಧೈರ್ಯ ಇನ್ನೂ ಬಂದಿಲ್ಲವಂತೆ!



ಆದರೆ ಇನ್ಫೋಅಮ್ಮ 'ಭಟ್ಟರು ಬಂದರೆ ಮಾತ್ರ ಪೇಪ... ಶುರುಮಾಡುತ್ತೇನೆ' ಎಂದು ಆಪ್ತರಲ್ಲಿ ಹೇಳುತ್ತಿರುವುದು ಈಗಂತ... ಗುಟ್ಟಾಗಿ ಉಳಿದಿಲ್ಲ. ಟೈಮ್ಸ್‌ನವರು ಕೈಕಟ್ಟಿದರೆ, ಜಂಪ್ ಮಾಡ... ವೇದಿಕೆ ರೆಡಿಇದೆ ಎಂದು ಭಟ್ಟರು ಒಳಗೊಳಗೆ ಖುಷಿಪಡುತ್ತಿದ್ದಾರಂ...

ಟೈಮ್ಸ್‌ನಿಂದ ಬಂದಿರುವ ವರದಿಗಳ ಪ್ರಕಾರ ಭಟ್ಟರ 'ನಾಟ... ಆಟ'ಗಳೇನು ಎಂಬುದನ್ನು ತಿಳಿಯಲು ಹೊರಗಿನ ವ್ಯಕ್ತಿಯೋರ್ವರ... ನೇಮಿಸಿದ್ದಾರಂತೆ. ಭಟ್ಟರು ಬಾಲ ಬಿಚ್ಚಿದರೆ ಕಟ್‌ಮಾಡಲೂ ಸಿದ್... ನಡೆದಿದೆಯಂತೆ!

ಬುದ್ಧ ಎಂದರೆ, ವಿಹಾರ ಶಾಲೆಯಲ್ಲಿರುವ ವಸ್ತು ವಿಶೇಷ

ದಲಿತೋದ್ಧಾರ ಪ್ರಹಸನ

"ಇದು ಸಾಮಾಜಿಕ ಅಸ್ಪೃಶ್ಯರು, ಕೊಳಕು ಮನಸ್ಸಿನವರು ಮಾಡುವ ಕೆಲಸ. ಈ ಮಾನಗೇಡಿ ಮುಖ್ಯಮಂತ್ರಿ ದಲಿತರ ಮನೆಯಲ್ಲಿ ಮಲಗಿದರೂ ಹೊರಗಿಂದ ಹಾಸಿಗೆ ತರಿಸಿ, ಸವರ್ಣೀಯರಿಂದ ಅಡುಗೆ ಮಾಡಿಸಿ ದಲಿತರ ಸ್ವಾಭಿಮಾನವನ್ನು ಪರೀಕ್ಷಿಸಿದ್ದಾರೆ. ಇದು ಪಾಳೇಗಾರಿ ಬುದ್ಧಿಯನ್ನೂ ಮೀರಿದ ವಿಧ್ವಂಸಕ ಪ್ರಕ್ರಿಯೆ. ಗಾಂಧಿ ಮಹಾತ್ಮರಾಗಲು ದಲಿತರನ್ನು 'ಹರಿಜನ' ಎಂದು ಗೇಲಿ ಮಾಡಿದರು. ಕಾಲಾಂತರದಲ್ಲಿ ಅದು ಬದಲಾಗಬೇಕಿತ್ತು. ಆದರೆ ಈ 'ಜಾತ್ಯತೀತ' ಜನ ಆ 'ಹರಿಜನ' ಸಂಸ್ಕೃತಿಯನ್ನು ಮುಂದುವರಿಸುತ್ತಿದ್ದಾರೆ. ಯಾವನೋ ಒಬ್ಬ ಐಲು ಸ್ವಾಮೀಜಿ ದಲಿತರಿಂದ ಕಾಲು ತೊಳೆಸಿಕೊಳ್ಳುವುದೇ 'ದಲಿತೋದ್ಧಾರ'



ಅನ್ನೋದಕ್ಕೂ, ಈ ಕುಮಾರಸ್ವಾಮಿ ತಾನು ಮಲಗಿ, ಉಂಡು ಬಂದದ್ದರಿಂದಲೇ ದಲಿತರು ಪುನೀತರಾದರು ಅನ್ನುವುದಕ್ಕೂ ಅಂಥಾ ವ್ಯತ್ಯಾಸ ಇಲ್ಲ.

ಗಾಂಧೀಜಿ ಕಸಪರಿಕೆ ಹಿಡಿದು ದಲಿತ ಕೇರಿಗಳನ್ನು ಗುಡಿಸುವ ಚಳವಳಿ ಪ್ರಾರಂಭಿಸಿದಾಗ ಅಂಬೇಡ್ಕರ್ ಥರದ ದಲಿತ ನಾಯಕರು ಗಾಂಧಿಗೆ "ನೀವು ನಮ್ಮ ಬದುಕುಗಳನ್ನು ಗೇಲಿ ಮಾಡುತ್ತಿದ್ದೀರಿ" ಅಂದರು. ಗಾಂಧಿ ಕೊನೆಕೊನೆಗೆ ಇದನ್ನು ಅರ್ಥ ಮಾಡಿಕೊಂಡರು. ಈಗ ನಮ್ಮ 'ಜಾತ್ಯತೀತ' ಮುಖ್ಯಮಂತ್ರಿಗಳು ದಲಿತನ ಮನೆಯಲ್ಲಿ ಮಲಗಿ, ಉಂಡು ಅವರಿಗೆ ಭಾಗ್ಯ ಕರುಣಿಸುತ್ತಿದ್ದಾರೆ. ಮಾಧ್ಯಮಗಳು "ಮುಖ್ಯ ಮಂತ್ರಿ ನಿವಾಸವಾದ ದಲಿತರ ಮನೆ!" ಎಂದು ಸೋಜಿಗಪಟ್ಟು ಕೊಂಡಾಡುತ್ತವೆ.

"ನನಗೆ ಜಾತಿ-ಭೇದ ಗೊತ್ತಿಲ್ಲ, ಅಸ್ಪೃಶ್ಯತೆ ಎನ್ನುವುದು ಮಹಾರೋಗ" ಎಂದೆಲ್ಲಾ ಬಡಬಡಿಸುವ ಮುಖ್ಯಮಂತ್ರಿ ದಡದಕಲ್ಲಹಳ್ಳಿಯ ದಲಿತ ಚೆಲವಯ್ಯನ ಮನೆಯಲ್ಲಿ ಉಂಡಿದ್ದು ವೀರಶೈವ ಮಹಿಳೆಯರು ಮತ್ತು ಮೈಸೂರಿನ ಅಡುಗೆ ಭಟ್ಟರು ತಯಾರಿಸಿದ ಊಟ. ಅವರು ಸುಮಾರು 3 ಗಂಟೆಗಳ ಕಾಲ ನಿದ್ರಿಸಿದ್ದು(?) ಅವರ ಹಿಂಬಾಲಕರು ತಂದಿದ್ದ ಕರ್ಲಾನ್ ಹಾಸಿಗೆಯಲ್ಲಿ, ಕುಡಿದದ್ದು ಬಿಸ್ಲೇರಿ ನೀರು. ಇದನ್ನೆಲ್ಲಾ ನೋಡಿದರೆ ಬ್ರಾಹ್ಮಣ ಪಂಡಿತರು ದಲಿತ- ಹಿಂದುಳಿದವರ ಮನೆಯಲ್ಲಿ ಪೂಜೆ-ಪುನಸ್ಕಾರಕ್ಕೆ ಬಂದಾಗ ಮಾಡಿಕೊಳ್ಳುವ ಮಡಿ- ಸಿದ್ಧತೆಗಳಂತಿದ್ದವು.

ಇವರು ಅಂಥ ಜಾತ್ಯತೀತ ಮನೋಭಾವದವರಾಗಿದ್ದರೆ ಇಂದಿಗೂ ದಿನನಿತ್ಯ ರಾಜ್ಯದೆಲ್ಲೆಡೆ ನಡೆಯುತ್ತಿರುವ ದಲಿತರ ಬಹಿಷ್ಕಾರಗಳನ್ನು, ದಲಿತರ ಮೇಲಿನ ಅತ್ಯಾಚಾರ-ದೌರ್ಜನ್ಯ, ಅಸ್ಪೃಶ್ಯತೆಯ ಆಚರಣೆಗಳನ್ನು ತಡೆಗಟ್ಟಬೇಕು. ದುರಂತವೆಂದರೆ ಇವರು ಮತ್ತು ಇವರ ತಂದೆ ದೇವೇಗೌಡರ ಸ್ವಂತ ಊರಾದ ಹರದನಹಳ್ಳಿ ಮತ್ತು ಅಲ್ಲಿನ ಸುತ್ತಲಿನ ಹಳ್ಳಿಗಳಲ್ಲಿ ಇಂದಿಗೂ ಅಮಾನವೀಯವಾಗಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿದೆ. ಅಲ್ಲಿನ ಹೋಟೆಲುಗಳು, ದೇವಸ್ಥಾನಗಳಲ್ಲಿ ಇಂದಿಗೂ ದಲಿತರಿಗೆ ಪ್ರವೇಶ ನಿಷಿದ್ಧ.


ಇವರು ಉಳಿದುಕೊಂಡಿದ್ದ ದಡದಕಲ್ಲಹಳ್ಳಿಯಲ್ಲಿ ನಡೆದ ಘಟನೆಗಳೇ ಇವರ ಹಿಪಾಕ್ರಸಿಯನ್ನು ಬೆತ್ತಲು ಮಾಡುತ್ತವೆ. ಅಲ್ಲಿನ ದಲಿತರು ತಮ್ಮ ಅಹವಾಲನ್ನು ಅವರ ಕೇರಿಗಳಲ್ಲೇ ಮುಖ್ಯಮಂತ್ರಿಗಳಿಗೆ ಕೊಡುತ್ತಾರೆ. ಆದರೆ ಅದೇ ಹಳ್ಳಿಯ ಸವರ್ಣೀಯರು ದೇವಸ್ಥಾನದಲ್ಲಿ ಸೇರಿ ತಮ್ಮ ಅಹವಾಲುಗಳ ಮನವಿಗಳನ್ನು ಮುಖ್ಯಮಂತ್ರಿಗೆ ಕೊಡುತ್ತಾರೆ.

ಅಂದರೆ ಮಾಧ್ಯಮಗಳೆಲ್ಲಾ ಮಹಾನ್ ಕ್ರಾಂತಿ ಎಂದು ಬರೆದ ಹಳ್ಳಿಯೊಂದರ ದಲಿತರು ಅಲ್ಲಿನ ದೇವಸ್ಥಾನಗಳಿಗೆ ಹೋಗುವಂತಿಲ್ಲ! ಇದನ್ನು ಅರ್ಥಮಾಡಿಕೊಳ್ಳುವ ಸೂಕ್ಷ್ಮತೆಯೂ ಕುಮಾರಸ್ವಾಮಿಗೆ ಇಲ್ಲ. ಇದು ನಮ್ಮ ರಾಜ್ಯದ ದುರಂತವಲ್ಲದೆ ಮತ್ತೇನು?

-ಹುಲಿಕುಂಟೆ ಮೂರ್ತಿ

'ಲಂಕೇಶ್' ಈ ಬಗ್ಗೆ ನಾಡಿನ ಪ್ರಮುಖ ದಲಿತ ನಾಯಕರು, ಪ್ರಗತಿಪರರನ್ನು ಮಾತಾಡಿಸಿದಾಗ ಬಂದ ಅಭಿಪ್ರಾಯಗಳು

ದೇವನೂರು ಮಹಾದೇವ: ಈ ಹಳ್ಳಿಯವರಿಗೆ 'ಏನಯ್ಯಾ ಚೆನ್ನಾಗಿದ್ಯಾ...?' ಅಂದ್ರೆ ಸಮಾಧಾನ ಆಗುತ್ತೆ, ಆದ್ರೆ ಅವರ ಸಮಸ್ಯೆ ಬಗೆಹರಿಯಲ್ಲ; ಸ್ಥಿತಿ ಸುಧಾರಿಸಲ್ಲ. ರಾಜ್ಯದ ಮುಖ್ಯಮಂತ್ರಿಯೊಬ್ಬರು ಹೀಗೆ ಮಾಡಿ ಹಳ್ಳಿಯವರ ಸಮಸ್ಯೆಗಳನ್ನು ದುರಪಯೋಗ ಪಡಿಸಿಕೊಂಡ್ರೆ ಅದು ಸಮಾಜಕ್ಕೆ ಮಾಡಿದ ಅವಮಾನ; ದುಸ್ಥಿತಿಗೆ ಕಾರಣ. ಆ ಹಳ್ಳಿಯಲ್ಲಿ ಒಂದು ಹುಡುಗಿ ಶನಿದೇವರ ಫೋಟೋ ಇಟ್ಕೊಳ್ಳೋ ಥರ ಸತ್ತಿರೋ ಅವರಪ್ಪನ ಫೋಟೋ ಹಿಡಕೊಂಡು ನಿಂತಿದಾಳೆ; ಕುಮಾರಸ್ವಾಮಿ ಅವಳಿಗೆ 500 ರೂಪಾಯಿಯ ಒಂದು ನೋಟು ಕೊಡ್ತಾರೆ. ಈ ಫೋಟೋ ಪತ್ರಿಕೆಗಳಲ್ಲಿ ಬರುತ್ತೆ, ಮುಖ್ಯಮಂತ್ರಿಗೆ ಸೂಕ್ಷ್ಮತೆ ಇದ್ರೆ ಆ ಫೋಟೋ ನೋಡಿ ಊಟ ಸೇರಬಾರ್ದು. ಅದನ್ನು ನೋಡಿನೂ ಅವರು ಊಟ-ನಿದ್ರೆ ಮಾಡ್ತಾರೆ ಅಂದ್ರೆ ಅವರು ಸೂಕ್ಷ್ಮ ಆಗಿಲ್ಲ ಅಂಥ ಅರ್ಥ.




ಪ್ರೊ. ನಗರಿ ಬಾಬಯ್ಯ: 'ಸಂಕಟ ಬಂದಾಗ ವೆಂಕಟರಮಣ' ಅಂತ ಮುಖ್ಯಮಂತ್ರಿಗೆ ಈಗ ದಲಿತರ ನೆನಪಾಗಿದೆ. ಇವರು ಅಧಿಕಾರದಲ್ಲಿ ಉಳಿಯೋಕೆ ನಾಟಕ ಆಡ್ತಿದಾರೆ. ಆ ಮೂಲಕ ಇವರು ಜನರನ್ನು ತಮಾಷೆ ಮಾಡ್ತಿದಾರೆ. ದಲಿತರಿಗೆ ಸ್ವಾತಂತ್ರ್ಯ ಯಾಕೆ ಅನ್ನೋ ಜನ ಇವತ್ತು ಅವರನ್ನು



ಓಲೈಸುತ್ತಾ ಇದಾರೆ. ನಗರಗಳಲ್ಲಿ ಇವರೇ ದಲಿತರ ಗುಡಿಸಲುಗಳನ್ನು ಬುಲ್ಡೋಜ್ ಮಾಡಿಸ್ತಾರೆ; ಹಳ್ಳಿಯಲ್ಲಿ ಬಂದು ಮಲಗ್ತಾರೆ. ಎಲ್ಲರೂ ನಾಟಕ ಆಡ್ತಿದಾರೆ, ಆದಿವಾಸಿಗಳ ಬಗ್ಗೆ ಸೋನಿಯಾ ನಾಟಕ ಮಾಡ್ತಾರೆ, ಆದಿವಾಸಿಗಳನ್ನು ಕೊಲ್ತಾನೇ ಇರ್ತಾರೆ. ಇವರೂ ಅದನ್ನೇ ಮಾಡ್ತಿದಾರೆ. ಒಂದು ಕಡೆ ಕೋಮುವಾದಿಗಳು, ಇನ್ನೊಂದು ಕಡೆ ಸೆಕ್ಯೂಲರ್ ಪದದ ಅರ್ಥ ಗೊತ್ತಿಲ್ಲದ ಮುಖ್ಯಮಂತ್ರಿ. ಜನ ಎಚ್ಚರವಾಗದಿದ್ರೆ ಇವರು "ಉಂಡ ಮನೆ ಜಂತೆ ಎಣಿಸೋದನ್ನು ನಿಲ್ಲಿಸೊಲ್ಲ."

ಎಂ. ವೆಂಕಟಸ್ವಾಮಿ (ಎಸ್.ಎಸ್.ಡಿ.): ಸಿದ್ಧರಾಮಯ್ಯ ಹೇಳಿದರು ಅನ್ನುವ ಕಾರಣಕ್ಕೆ ಇವರು ದಲಿತರ ಮನೆಯಲ್ಲಿ ಉಳಿಯೋ




ನಾಟಕ ಆಡಿದಾರೆ. ಹಾಗೇನಾದ್ರೂ ಇವರಿಗೆ ದಲಿತರ ಮೇಲೆ ಕಾಳಜಿ ಇದ್ರೆ ಅವರು ಉಳಿದುಕೊಳ್ಳುವ ಕಾಲೋನಿಯಲ್ಲಿ ಒಂದು ವಸತಿ ಶಾಲೆ ಕಟ್ಟಿಸಲಿ. ದಲಿತರಿಗೆ ಬಂದ ಹಣ ವಾಪಸ್ ಕಳಿಸ್ತಾರೆ, ದಲಿತರ ಮನೆಯಲ್ಲಿ ಮಲಗಿ ಬರ್ತಾರೆ... ಇದು ದೌರ್ಜನ್ಯವಲ್ಲದೆ, ಮತ್ತೇನು?

ಕೋಟಿಗಾನಹಳ್ಳಿ ರಾಮಯ್ಯ: ಈ ಮುಖ್ಯಮಂತ್ರಿ ದಲಿತರ ಕೇರಿಗೆ ಹೋಗಿ ಬರೋದ್ರಿಂದ ದಲಿತರಿಗೆ ಯಾವ ವಿಶೇಷ ಮಾನ, ಶ್ರೇಷ್ಠತೆ ಬರೋದಿಲ್ಲ, ನಮ್ಮ ಮನೆಗೆ ಯಾರು ಬಂದ್ರೂ ನಾವು ಬೇಡ ಅನ್ನಲ್ಲ. ಹೊರಗಿಡುವುದು ನಮ್ಮ ಕಲ್ಚರ್ ಅಲ್ಲ. ನಮ್ಮನ್ನು ಹೊರಗಿಟ್ಟರೂ, ನಾವು ಅವರನ್ನು ಹೊರಗಿಡಲ್ಲ, ಆದರೆ ಆ ಮೂಲಕ, ಬೇರೆ ಊಟ, ಹಾಸಿಗೆ ತಂದು ದಲಿತರ ಮನೆಯಲ್ಲಿ ಉಳಿಯುವ ಮೂಲಕ ಅವಮಾನ ಮಾಡಿ ಅವರು ಬೆತ್ತಲಾಗ್ತಿದ್ದಾರೆ. ಅದು ಅವರಿಗೇ ಅವಮಾನ. ಇದು ನಿಜಕ್ಕೂ ಕುಮಾರಸ್ವಾಮಿಯವರ ಮಿತಿ, ಅಜ್ಞಾನ.



ಇಂದೂಧರ ಹೊನ್ನಾಪುರ: ಇವರು ಬೇರೆಯವರ ಮನೆಯಲ್ಲಿ ಊಟ ಮಾಡೋದ್ರ ಮುಖಾಂತರ ಗಿಮಿಕ್ಸ್ ಮಾಡ್ತಿದಾರೆ. ಈ ಮೂಲಕ ಅವರು ಮುಖ್ಯಮಂತ್ರಿ ಕೆಲಸಕ್ಕೆ ನಾಲಾಯಕ್ ಅಂತ ಗೊತ್ತಾಗುತ್ತೆ. ಇವರಿಗೆ ದಲಿತರ ಬಗ್ಗೆ ಕಾಳಜಿ, ಸಿನ್ಸಿಯಾರಿಟಿ ಇದ್ದಿದ್ರೆ ಅವರು ಬದುಕೋ ಹಂಗೇ



ಬದುಕಿ, ಅವರು ತಿನ್ನೋದನ್ನೇ ತಿನ್ನಬೇಕಿತ್ತು, ಆದ್ರೆ ಇವ್ರು ಅವರನ್ನ, ಅವರ ಬದುಕನ್ನು ಗೇಲಿ ಮಾಡಿದಾರೆ.

ಮಾವಳ್ಳಿ ಶಂಕರ್: ಕುಮಾರಸ್ವಾಮಿಯವರ ಸ್ವಂತ ಊರಲ್ಲೇ ದಲಿತರಿಗೆ ದೇವಸ್ಥಾನ, ಮನೆಗಳಿಗೆ ಪ್ರವೇಶ ಇಲ್ಲ, ಹಾಗೇ ರಾಜ್ಯದ ತುಂಬಾ ದಲಿತರ ಬದುಕಿನ ಸಮಸ್ಯೆ ಭೂಸಮಸ್ಯೆಗಳಿವೆ. ಇವರು ದೇವರನ್ನು ತೊಳೆಯುವ ನೀರನ್ನು ದಲಿತರು ಮುಟ್ಟೋ ಹಾಗಿಲ್ಲ, ಆದ್ರೆ ಇವರು ಬೇರೆ ಊರಲ್ಲಿ ಹೋಗಿ ದಲಿತಪರ ಅಂತ ಪೋಸ್ ಕೊಡ್ತಾರೆ. ಇದೂ ಕೂಡ ದಲಿತರಿಗೆ ಮಾಡಿದ ಅವಮಾನವೇ. ಮುಖ್ಯಮಂತ್ರಿ ಬಹಿರಂಗವಾಗಿ ಅಸ್ಪೃಶ್ಯತೆ ಆಚರಿಸಿದ್ದಾರೆ.



ಲಕ್ಷ್ಮೀನಾರಾಯಣ ನಾಗವಾರ: ಇದು ಕುಮಾರಸ್ವಾಮಿಯ ದೊಂಬರಾಟ. ದಲಿತರಿಗೆ ಮಾಡಿದ ಅವಮಾನ. ಚಾಮುಂಡೇಶ್ವರಿ ಕ್ಷೇತ್ರದ ಎಲೆಕ್ಷನ್ ಗಮನದಲ್ಲಿಟ್ಟುಕೊಂಡು ಈ ರೀತಿ ನಾಟಕ ಆಡಿದ್ದಾರೆ. ನಿಜವಾಗ್ಲೂ ತಾಖತ್ತಿದ್ರೆ ರಾಜಕೀಯವಾಗಿ ಚುನಾವಣೆ ಎದುರಿಸಬೇಕು. ಇವರಿಗೆ ದಲಿತರ ಬಗ್ಗೆ ಕಾಳಜಿ ಇದ್ರೆ ಅಸ್ಪೃಶ್ಯತೆ ಆಚರಣೆಯನ್ನು ಕಾನೂನಾತ್ಮಕವಾಗಿ ಪರಿಹರಿಸಬೇಕು. ಈಗ ಇವರು ಗಾಂಧೀಜಿ ಬಗ್ಗೆ ಮಾತಾಡ್ತಿದಾರೆ, ಇವರಿಗೆ ಅಂಬೇಡ್ಕರರ ತಾಯ್ತನ, ಗಾಂಧಿಯ ದಲಿತ ಪ್ರೇಮದ ವ್ಯತ್ಯಾಸ ಗೊತ್ತಾಗ್ತಿದ್ರೆ ಅಸ್ಪೃಶ್ಯತೆನೂ ಅರ್ಥ ಆಗಲ್ಲ.




ಲಕ್ಷ್ಮಣ್. ಜೆ: ವ್ಯಕ್ತಿಯೊಬ್ಬ ದಲಿತರ ಮನೆಗೋಗಿ ಉಂಡು, ಮಲಗಿದ ಮಾತ್ರಕ್ಕೆ ಅವನಲ್ಲಿರುವ ಜಾತೀಯತೆ ಹೋಗಲ್ಲ, ನಮ್ಮ ಮುಖ್ಯಮಂತ್ರಿ ನಿಜವಾಗಿಯೂ ಜಾತ್ಯತೀತರಾಗಿದ್ರೆ ದಲಿತರಲ್ಲೇ ತೀರಾ ಶೋಷಿತರಾಗಿರುವ ಮಾದಿಗ ಸಮುದಾಯದ ಹುಡುಗಿಯನ್ನೋ, ಹುಡುಗನನ್ನೋ ಅವರ ಮಕ್ಕಳಿಗೆ ಮದುವೆ ಮಾಡಿಕೊಳ್ಳಲಿ. ಆಗ ಇವರಿಗೆ ಸಾಮಾಜಿಕ ಕಾಳಜಿ ಇದೆ ಅಂತ ನಂಬ್ತೀವಿ. ಇಲ್ಲಾಂದ್ರೆ ದಯವಿಟ್ಟು ಈ ಬಣ್ಣದ ನಾಟಕ ನಿಲ್ಲಿಸಲಿ.

ಡಾ.ಬಿ. ಗಂಗಾಧರಮೂರ್ತಿ: ಇದೊಂದು sick joke. ಒಂದು ಕೊಳಕು ಮನಸ್ಸು ಮಾಡುವ ಸಾಮಾಜಿಕ ಅಪಮಾನದ ಜೋಕು. ಸುಮಾರು ಜನ ಆರೆಸ್ಸೆಸ್ಸಿನವರು ದಲಿತಕೇರಿಗೆ ಹೋಗಿದ್ದಾರೆ. ಪೇಜಾವರ ಶ್ರೀ ಕೂಡ ದಲಿತರ ಮನೆಗಳಿಗೆ ಹೋಗಿ ಕಾಲು ತೊಳೆಸಿಕೊಂಡು ಬಂದಿದ್ದಾರೆ. ಇವರೂ ಹಾಗೇ ಮಾಡ್ತಿದಾರೆ. ಇವರಿಗೆ ಪ್ರಾಮಾಣಿಕತೆ ಇದ್ರೆ ನಾಡಿನ ದಲಿತರ ಸ್ಥಿತಿ-ಗತಿ ಅಧ್ಯಯನ ಮಾಡಿ ಅದನ್ನು ಪರಿಹರಿಸಲು ಮುಂದಾಗ್ಬೇಕು.

ಡಾ. ಸಿದ್ಧಲಿಂಗಯ್ಯ: ದಲಿತರ ಕಾಲೋನಿ ಅನ್ನೋದು ಯಾರ ಗಮನಕ್ಕೂ ಬಾರದ ಸ್ಥಳವಾಗಿರುವಾಗ ಮುಖ್ಯಮಂತ್ರಿಗಳು ಅಲ್ಲಿ ಹೋಗಿ ವಾಸ ಮಾಡಿ ಬಂದದ್ದು ಒಳ್ಳೇ ಸಂಕೇತ. ಇದುವರೆಗೆ ಯಾವ ಮುಖ್ಯಮಂತ್ರಿಯೂ ದಲಿತ ಕೇರಿಯಲ್ಲಿ ಮಲಗಿಲ್ಲ. ಇದೊಂದು ಕ್ರಾಂತಿಕಾರಕ ಕ್ರಮ. ಈ ಕಳಕಳಿ ಎಲ್ಲರಿಗೂ ಬರಬೇಕು. ಸರ್ಕಾರದ ಅಧಿಕಾರಿಗಳು ಕಡ್ಡಾಯವಾಗಿ ದಲಿತರ ಕೇರಿಗೆ ಹೋಗಬೇಕು. ಎಲ್ಲರನ್ನು ಕರೆದು, ಅವರ ಮಧ್ಯೆ ಕೂತು ಸಮಸ್ಯೆಗಳನ್ನು ಪರಿಹಾರ ಮಾಡ್ಬೇಕು.



(ಡಾ. ಸಿದ್ಧಲಿಂಗಯ್ಯನವರನ್ನು ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಿಸಿದ್ದು ಇದೇ ಕುಮಾರಸ್ವಾಮಿ ಸರ್ಕಾರ)



ಬಿಟ್ bit ಹಿಡಿ!

ಜಿ.ಕೆ. ಮಲ್ಲನಗೌಡರ್

Hi ದಾಮಿನಿ,

ನೀ ಹ್ಯಂಗದಿಯವಾ?- ನಿನ್ನ ಪತ್ರ ಮುಟ್ಟಿತು...ಬಾಳಾಬಾಳಾ ಖುಷಿ ಆತು.... ನನಗೂ ಸಿನಿಮಾದಾಗ ಪಾರ್ಟು ಕೊಡಿಸ್ತಿನಿ ಅಂತ ನೀ ಬರೆದಿದ್ದು ಓದಿ ನಂಗ ಕನ್‌ಫ್ಯೂಸನ್ ಆಗಾಕ ಹತ್ತೈತಿ.... ನನಗೂ ಸಿನಿಮಾದಾಗ ಪಾರ್ಟು ಮಾಡೋ ಆಸೆ ಐತಿ... ಆದ್ರ ನಮ್ಮ ಮನ್ಯಾಗ ಬೈತಾರವ... ಅಲ್ಲಾ, ಸಿನಿಮಾದಾಗ ಕಿಸ್ ಕೊಡ್ತೀರಲ್ಲ... ಖರೆ ಖರೇನ ಕಿಸ್ ಕೊಡ್ತೀರನು? ನಂಗ ನಾಚಿಕೆ ಆಗುತ್ತವಾSSS....

ಕವಿತಾ ಲಂಕೇಶ್ ನಂಗ ಒಂದ್ ಪಾರ್ಟು ಮಾಡಾಕ ಕೇಳಿದ್ರು... 'ತನನಂ ತನನಂ' ಸಿನಿಮಾದಾಗ ರಕ್ಷಿತಾನ ಜಡೆ ಹಾಕೋ ಪಾರ್ಟು ಅಂತೆ.... ನಾ ಒಲ್ಲೆ ಅಂದ್ ಬಿಟ್ಟೆ..... ಜಡೆ ಹಾಕೋದು, ಹೇನು ತೆಗೆಯೋದು ಇಂತಾ ಪಾರ್ಟು ನಾ ಮಾಡಂಗಿಲ್ಲವಾ.....

ಅದೆಲ್ಲ ಇರ್‍ಲಿ, ನಿನ್ ಸಿನಿಮಾ ಥೇಟರಿಗೆ ಬರ್‍ತಾನೇ ಇಲ್ಲ... ಆ 'ಭಾ-ರತಿ' ಸಿನಿಮಾ ಮಾಡಿ ಹೆಸರು ಕೆಡಿಸಿಕೊಂಡುಬಿಟ್ಟೆ ನೀ.... ನಾನು, ನೀನು ಎಲ್ಲಾ ಸೇರಿ ಅವ್ವೊತ್ತು 'ಯೂಗ'ಕ್ಕೆ ಹೋಗಿದ್ದು ನೆನಪು ಐತನು? ನಾ ಅಂತೂ ಅದ್ನ ಮರೆಯಂಗಿಲ್ಲವಾ.... ನಾ ಸಿನಿಮಾದಾಗ ಪಾರ್ಟು ಮಾಡಾಕ ನಮ್ಮ ಮನ್ಯಾಗ ಒಪ್ಪದಿಲ್ಲ... ಟಿವಿಯೊಳಗ ಕಿಸ್ ಸೀನ್ ಬಂದ್ರ ಆಫ್ ಮಾಡಿಬಿಡ್ತಾಳ ನಮ್ಮವ್ವ.... ಆದ್ರೂ ರಾತ್ರಿ ಇಮ್ರಾನ್ ಹಶ್ಮಿಯ ಕಿಸ್ ಸೀನ್ ನೋಡಿಯೇ ನಾ ಮಲಗೋದು... ಇಲ್ಲಾಂದ್ರ ನಿದ್ದೀನ ಬರಾಂಗಿಲ್ಲ....

ನಿನ್ನ ಆರೋಗ್ಯ ಸರಿಯಾಗಿ ಇಟ್ಕೊ...ಬೆಂಗಳೂರಾಗ ಬಾಳ ಲಫಂಗರು ಅದಾರು... ಅವ್ರ ಬುಟ್ಟಿಗೆ ಬೀಳಬ್ಯಾಡ.....

-ಮುನ್ನಿ (*Zero hour*), ಧಾರವಾಡ

ಒಂದು CD ಗವನ

ಸಿ.ಡಿ.ಗಳ ಜಾತ್ರೆಯಲ್ಲಿ

ಜನ ಮರುಳು... ಜಾತ್ರೆಯೂ ಮರುಳು...

ಮರಳುಗಳ್ಳರ ನಡುವೆ ಅದಿರುಗಳ್ಳರು...

ಅದಿರು ಧೂಳಿನ ನಡುವೆ

ತೂರಿ ಬಂತು ಭಾಷಾ ಸಿ.ಡಿ....

ಗೌಡರೆಂದರು 'ಮಾತು ಇಲ್ಲದೇ ಮಡಿ'

ಸಿ.ಡಿ.ಗಳ್ ಮೋಜಲಿ

ನಿದ್ದೆ ಹೋದೆವು ನಾವು

ಹಿಡಿಯದೇ, ಪ್ಲೋಟಿಸದೇ...

ಒಂದು 'ಗಾದಿ' ಮಾತು

ಸಿ.ಡಿ.ಗೆ ಹೋದ ಮಾನ

[illegible]

ಮಚ್ಚನ ಕೊಲೆಗೆ ಪ್ರತೀಕಾರ
ತಿಮ್ಮೇನಹಳ್ಳಿ ಸೂರಿ ಖಲಾಸ್

ಹೇಗೆ ನಡುರಸ್ತೆಯಲ್ಲಿ ಅಡ್ಡಗಟ್ಟಿ ಲೇಔಟ್ ಮಂಜನನ್ನು ಮುಗಿಸಿದ್ದನೋ, ಯಾವ ಚಾಕಚಕ್ಯತೆಯಿಂದ ತಿಮ್ಮೇನಹಳ್ಳಿ ತಮ್ಮಯ್ಯನನ್ನು ರಸ್ತೆಯ ನಟ್ಟನಡುವೆ ಕೊಚ್ಚಿ ಹಾಕಿದ್ದನೋ; ಅಷ್ಟೇ ಮೊತ್ತದ ತಯಾರಿ, ಚಾಕಚಕ್ಯತೆ ಮತ್ತು ಕ್ರೈಸಾಚಕತೆಗೆ ಬಲಿಯಾಗಿದ್ದಾನೆ ತಿಮ್ಮೇನಹಳ್ಳಿಯ ಸೂರಿ!

ಅವನು ಮಾಡಿದ ಹತ್ಯೆಗಳಿಗೂ ಆತ ಕೊಲೆಯಾದ ರೀತಿಗೂ ಹೆಚ್ಚು ವ್ಯತ್ಯಾಸವಿಲ್ಲ. ಅದೂ ನಡುರಸ್ತೆಯಲ್ಲೇ ನಡೆದು ಹೋದ ಚೋದಿ ಹತ್ಯೆ. ಪತ್ರಿಕೆ ಇನ್ನೇನು ಅಚ್ಚಿಗೆ ಹೋಗಲಿದೆ ಎನ್ನುವ ಹೊತ್ತಿಗೆ ಸುದ್ದಿ ಬಂದಿತ್ತು. ಕೆಂಗೇರಿ ಉಪನಗರದ ವಡ್ಡರಪಾಳ್ಯದಲ್ಲಿ ಕೆಂಗೇರಿ ಪುರಸಭೆ ಉಪಾಧ್ಯಕ್ಷ ಜಿ. ಮುನಿರಾಜು ಮನೆಯಿಂದ ಹೊರ ಬಿದ್ದವನು ಇನ್ನೇನು ತನ್ನ ಸ್ಯಾಂಟ್ರೋ ಕಾರಿನ ಬಾಗಿಲು ತೆರೆಯಬೇಕೆನ್ನುವಷ್ಟರಲ್ಲೇ ಎದುರಿಗೆ ನಿಂತಿದ್ದ ಕ್ವಾಲಿಸ್‌ನಿಂದ ಗುಂಡು ಹಾರಿದ ಸದ್ದು-


ಎರಡು ಟಾಟಾ ಸುಮೋ, ಒಂದು ಕ್ವಾಲೀಸ್‌ನಲ್ಲಿ ಬಂದು ಸುತ್ತವರಿದಿತ್ತು ಯಮಕಿಂಕರರ ಪಡೆ. ಸೂರಿ ಯಾವತ್ತೂ ಯಾಮಾರಿದವನಲ್ಲ. ಆತನ ಬಂಟ ಟೋನಿ ಜೊತೆಗೇ ಇದ್ದ ಸಾಲದ್ದಕ್ಕೆ ಇನ್ನೂ ಇಬ್ಬರು ಹುಡುಗರನ್ನೂ ಕರೆತಂದಿದ್ದ. ಬೆಳಿಗ್ಗೆ ಹತ್ತೂವರೆ ಹೊತ್ತಿಗೆ ತನ್ನ ಹೊನ್ನಿಗನಹಟ್ಟಿಯ ಮನೆಯಿಂದ ಸ್ಯಾಂಟ್ರೋ ಕಾರಿನಲ್ಲಿ ನೇರವಾಗಿ ವಡ್ಡರಪಾಳ್ಯದ ಮುನಿರಾಜು ಮನೆಗೆ ಬಂದಿದ್ದ. ಔಟರ್ ರಿಂಗ್‌ರಸ್ತೆಯಲ್ಲಿ ತನ್ನನ್ನು ಮೃತ್ಯು ಹಿಂಬಾಲಿಸಿ ಬರುತ್ತಿರುವುದರ ಸಣ್ಣದೊಂದು ಸುಳಿವು ಕೂಡ ಆತನಿಗಿರಲಿಲ್ಲ. ತನ್ನ ಮೇಲೆ ಕೈ ಮಾಡಲು ಯಾರಾದರೂ ಉಳಿದಿದ್ದರೆ ತಾನೆ?


ಮಚ್ಚ ಕೊಲೆಯಾಗಿದ್ದ. ಮಚ್ಚನ ಅಳಿದುಳಿದ ಹುಡುಗರನ್ನು ಲೀಡ್ ಮಾಡುತ್ತಿದ್ದ ಕೋತಿರಾಮ ಮಂಡ್ಯ ಕೃಷ್ಣನ ಕೊಲೆ ಕೇಸಲ್ಲಿ ಜೈಲುಪಾಲಾಗಿದ್ದ. ಉಳಿದವನು ಟೀಸಿ ರಾಜ. ಆತನೂ ಅದೇ ಕೇಸಲ್ಲಿ ಕೊರಂಗು ಜೊತೆ ಜೈಲು ಸೇರಿದ್ದ. ಇನ್ನು ತಮ್ಮಯ್ಯನ ಪಕ್ಕಾ ಬೆಂಬಲಿಗ ಮತ್ತು ತನ್ನ ಕಡುವೈರಿ ಜಗ್ಗ. ಆತನನ್ನು ಚಂದ್ರಾ ಲೇಔಟ್ ಇನ್ಸ್‌ಪೆಕ್ಟರ್ ಓಂಕಾರಯ್ಯ ಹಂಡೆ ರಾಜನ ಸಮೇತ ಹಿಡಿದು ಜೈಲಿಗೆ ಹಾಕಿದ್ದರು. ಹಿಂದ್ಯಾವತ್ತೋ ತನ್ನಿಂದ ಹತನಾದ ಲೇಔಟ್ ಮಂಜನ ಸಾವಿಗೆ ಪ್ರತೀಕಾರ ಹೇಳಲು ಆತನ ಪಳೆಯುಳಿಕೆ ಕೂಡ ಉಳಿದಿರಲಿಲ್ಲ. ಹಾಗೇನಾದರೂ ಸುನೀಲನ ಗ್ಯಾಂಗ್ ಕೈಯಿಕ್ಕಬೇಕೆಂದರೆ ಅದು ಕೂಡ ದುಸ್ಸಾಧ್ಯವೇ. ಏಕೆಂದರೆ ತನಗೂ ಸುನೀಲನಿಗೂ ಅಂಥಾದ್ದೇನಿದೆ?

ಮಾರೇನಹಳ್ಳಿ ಜಗ್ಗ, ಟೀಸಿ ರಾಜ, ಕೋತಿರಾಮ, ಕೊರಂಗು, ಕಾಮಾಕ್ಷಿಪಾಳ್ಯದ ಜಾನಿ ಇತ್ಯಾದಿಗಳೆಲ್ಲ ಜೈಲಿಂದ ಹೊರಬಿದ್ದರೆ ತಾನೇ ತಾನು ಹುಷಾರಾಗಿರಬೇಕು? ಹಾಗೆಂದೇ ಲೆಕ್ಕ ಹಾಕಿದ್ದ ಸೂರಿ ತನ್ನ ಗುರು ತಿಮ್ಮೇನಹಳ್ಳಿ ಗೋವಿಂದನ ಮೇಲೆ ಕೈ ಮಾಡಿದ ನಂತರವಷ್ಟೇ ವೈರಿಗೆ ತಾನು ಟಾರ್ಗೆಟ್ ಆಗುವುದು? ಇಂಥದ್ದೇ ಉಡಾಫೆಗೆ ಬಿದ್ದವನು ಸೆಪ್ಟೆಂಬರ್ ಹತ್ತರ ಬೆಳಿಗ್ಗೆ ಒಂಬತ್ತೂವರೆ ಹೊತ್ತಿಗೆ ಮನೆ ಬಿಟ್ಟಿದ್ದಾನೆ. ಇತ್ತ ವಡ್ಡರಪಾಳ್ಯದ ಮುನಿರಾಜು ಮನೆಗೆ ಬಂದರೆ ಅಲ್ಲಿ ಕುಳಿತುಕೊಳ್ಳುವುದಕ್ಕೂ ಜಾಗವಿಲ್ಲದಷ್ಟು ಜನಜಂಗುಳಿ. ಅಲ್ಲಿಗೆ ಕೆಂಗೇರಿ ಪುರಸಭೆಯ ಮಾಜಿ ಅಧ್ಯಕ್ಷ ರ. ಆಂಜನಪ್ಪ ಕೂಡ ಬಂದಿದ್ದ. ಸೂರಿ ಬಂದವನೇ ಮುನಿರಾಜು ಕೈಗೆ ಆಹ್ವಾನ ಪತ್ರಿಕೆ ಕೊಟ್ಟಿದ್ದಾನೆ. ಕೊಮ್ಮಘಟ್ಟ ರಸ್ತೆಯಲ್ಲಿ ಹೊಸದಾಗಿ ತಲೆ ಎತ್ತಿದ ಅಪಾರ್ಟ್‌ಮೆಂಟ್ ಒಂದರ ಕೇಬಲ್ ಉಸಾಬರಿಯನ್ನು ಪಡೆದುಕೊಂಡಿದ್ದ. ಅದಕ್ಕೆ ಎರಡು ಲಕ್ಷದ ಅಡ್ವಾನ್ಸ್ ಕೂಡ ಪಾವತಿ ಮಾಡಿದ್ದ. ಸೋಮವಾರ ಅದರ ಪೂಜೆ ಇಟ್ಟುಕೊಂಡಿದ್ದ. ಆ ಪೂಜೆಗೆ ಆಹ್ವಾನ ಕೊಡಲೆಂದು ಆತ ಕೆಂಗೇರಿ ಪುರಸಭೆ ಉಪಾಧ್ಯಕ್ಷ ಮುನಿರಾಜು ಮನೆಗೆ ಬಂದಿದ್ದ.

ಹಾಗೆ ಆಹ್ವಾನ ಕೊಟ್ಟು ಇನ್ನೇನು ತನ್ನ ಸ್ಯಾಂಟ್ರೋ ಕಾರಿನ ಬಾಗಿಲು ತೆಗೆಯಬೇಕೆನ್ನುವಷ್ಟರಲ್ಲೇ ಎದುರಿಗಿದ್ದ ಕ್ವಾಲೀಸ್‌ನ ಬಾಗಿಲು ತೆರೆದಿತ್ತು. ಜೀನ್ಸ್‌ಧಾರಿಯೊಬ್ಬ ಚಂಗನೇ ನೆಗೆದು ತನ್ನೆರಡು ಕೈಗಳಿಂದ ರಿವಾಲ್ವರ್ ಹಿಡಿದು ಸೂರಿಯತ್ತ ಗುರಿಯಿಟ್ಟು ಫೈರ್ ಮಾಡಿದ್ದ. ಆದರೆ ಗುಂಡು ಗುರಿತಪ್ಪಿತ್ತು. ಅಷ್ಟೇ ವೇಗವಾಗಿ ಸೂರಿ ಕೂಡ ತನ್ನ ಸೊಂಟದಿಂದ ರಿವಾಲ್ವರ್ ತೆಗೆದನಾದರೂ ಗುಂಡು ಸಿಡಿಯಲೇ ಇಲ್ಲ. ರಿವಾಲ್ವರ್ ಅನ್ನು ಲಾಕ್ ಮಾಡಿರುವುದನ್ನೇ ಸೂರಿ ಮರೆತಿದ್ದ. ಕಾಲ ಮಿಂಚಿತ್ತು. ಪಕ್ಕದ







ಕೊಲೆಯಾದ ಸೂರಿ (ಒಳಚಿತ್ರದಲ್ಲಿ ಬದುಕಿದ್ದಾಗ ಸೂರಿ) ಮತ್ತು ಟೋನಿ

ಎರಡೂ ಟಾಟಾ ಸುಮೋಗಳಿಂದ ಹುಡುಗರ ಗುಂಪು ದಬದಬನೇ ಇಳಿದು ಸೂರಿಯತ್ತ ಧಾವಿಸಿ ಬಂತು. ಅದನ್ನು ಕಂಡಿದ್ದೇ ಸೂರಿ ಮುನಿರಾಜು ಮನೆಯಿಂದ ಪೂರ್ವಕ್ಕೆ ಜ್ಞಾನಜ್ಯೋತಿ ಲೇಔಟ್‌ನತ್ತ ಓಡತೊಡಗಿದ. ಜೊತೆಗಿದ್ದ ಟೋನಿ ಅದರ ವಿರುದ್ಧ ದಿಕ್ಕಿನ ರಿಂಗ್‌ರಸ್ತೆಗೆ ಓಡಿದ. ಆತನನ್ನು ಎಂಟ್ಹತ್ತು ಮಂದಿ ಅಟ್ಟಿಸಿಕೊಂಡು ಹೋದರೆ, ಸೂರಿಯನ್ನು ಹದಿನೈದರಿಂದ ಇಪ್ಪತ್ತರಷ್ಟಿದ್ದ ಪಡ್ಡೆ ಹುಡುಗರು ಬೆನ್ನಟ್ಟಿದ್ದರು. ಪ್ರತಿಯೊಬ್ಬರ ಕೈಯಲ್ಲೂ ಲಾಂಗ್. ಎಲ್ಲರೂ ಇಪ್ಪತ್ತರ ಆಸುಪಾಸಿನ ಹುಡುಗರೇ. ಯಾರೂ ಮುಖ ತೊಳೆದಂತಿರಲಿಲ್ಲ. ರಾತ್ರಿ ಮಲಗಿದ ವೇಷದಲ್ಲೇ ಇದ್ದರು. ಐನೂರು ಅಡಿ ಓಡಿದ ಸೂರಿಯನ್ನು ನೆರೆದ ಜನರ ಎದುರೇ ಸುತ್ತುವರಿದ ತಂಡ ಕೊಚ್ಚಿ ಹಾಕಿತ್ತು.

ಆತನ ಚೀತ್ಕಾರಕ್ಕಿಂತಲೂ ಕೊಚ್ಚುತ್ತಿದ್ದ ಹುಡುಗರ ಬಾಯಿಂದ ಬರುತ್ತಿದ್ದ 'ಹೊಡಿಯೋ, ಅವನಮ್ಮನ್ ಚುಚ್ಚೋ....' ಎಂಬ ಸದ್ದೇ ಜನರ ಕಿವಿಗಪ್ಪಳಿಸುತ್ತಿತ್ತು. ಸೂರಿಯ ಎಡಮುಂಗೈ ತುಂಡಾಗಿತ್ತು. ತಲೆ, ಎದೆ, ಕತ್ತು, ಬೆನ್ನು, ಭುಜ ಎಲ್ಲೆಂದರಲ್ಲಿ ಬಿದ್ದ ಮಚ್ಚಿನೇಟಿಗೆ ಕ್ಷಣಾರ್ಧದಲ್ಲೇ ಆತನ ಪ್ರಾಣ ಹಾರಿ ಹೋಗಿತ್ತು. ಇತ್ತ ಟೋನಿಯನ್ನು ಅಟ್ಟಿಸಿ ಹೋದ ಮತ್ತೊಂದು ತಂಡ ಆತ ರಿಂಗ್‌ರಸ್ತೆ ತಲುಪುವ ಮೊದಲೇ ಕೊಚ್ಚಿ ಹಾಕಿತ್ತು. ಕೆಂಗೇರಿ ಪುರಸಭೆಯ ಉಪಾಧ್ಯಕ್ಷ ಮುನಿರಾಜು ಮನೆಯ ಒಂದೊಂದು ದಿಕ್ಕಿಗೂ ಒಂದೊಂದು ಹೆಣ ಬಿದ್ದಿತ್ತು.

ಅಲ್ಲಿಗೆ ಸುರೇಶ ಆಲಿಯಾಸ್ ತಿಮ್ಮೇನಹಳ್ಳಿ ಸೂರಿ ಎಂಬ ಅಧ್ಯಾಯವೊಂದು ಮುಗಿದಂತಾಯ್ತು.

ಬದುಕಿದ್ದರೆ ಇವತ್ತಲ್ಲ ನಾಳೆ ಜೇಡರಹಳ್ಳಿ ಕೃಷ್ಣಪ್ಪನ ಮಟ್ಟಕ್ಕೆ ಬೆಳೆಯಬಲ್ಲ ತಾಕತ್ತು ಮತ್ತು ಜಾಣ್ಮೆ ಸೂರಿಗಿತ್ತು.

ತಿಮ್ಮೇನಹಳ್ಳಿ ಗೋವಿಂದನಿಗೆ ಆತ ಹತ್ತಿರದ ಸಂಬಂಧಿ ಕೂಡ. ತಿಮ್ಮೇನಹಳ್ಳಿ ಅರ್ಥಾತ್ ಗೋವಿಂದ ರಾಜನಗರದಲ್ಲಿ ಒಂದೆಡೆ ತಮ್ಮಯ್ಯನ ಪಡೆ ಮತ್ತೊಂದೆಡೆ ಗೋವಿಂದನ ಗ್ಯಾಂಗುಗಳು ಬಡಿದಾಟಕ್ಕಿಳಿಯುವ ಹೊತ್ತಿಗೆ ಸೂರಿ ಗೋಲಿ ಆಡಿಕೊಂಡಿದ್ದ. ಮೊಬೈಲ್ ರವಿ, ನೀರಾನೆ, ಅರುಣ; ಹೀಗೆ ಸಾಗುವ ಪಟ್ಟಿಯಲ್ಲಿ ಸೂರಿಯದು ದೊಡ್ಡ ಹೆಸರೇನಲ್ಲ. ತಿಮ್ಮೇನಹಳ್ಳಿಯ ಹಳೇ ವಂಚಕ ಅಯ್ಯ ಎಂಬಾತ ತನ್ನೆಲ್ಲಾ ಮನೆಹಾಳ ಕೆಲಸಕ್ಕೂ ಸೂರಿಯನ್ನು ಕರೆದೊಯ್ಯುತ್ತಿದ್ದ.

1995ರ ಹೊತ್ತಿಗೆ ಜೇಡರಹಳ್ಳಿ ವಿರುದ್ಧ ಬಂಡೆದ್ದ ಲೇಔಟ್ ಮಂಜ ಎಲ್ಲೆಂದರಲ್ಲಿ ಹಾವಳಿಯಿಡುತ್ತಿದ್ದ. ಆತನನ್ನು ಖತಂ ಮಾಡುವ ಹೊಣೆಯನ್ನು ಜೇಕೆ ತನ್ನ ಪಕ್ಕಾ ಶಿಷ್ಯ ಗೋವಿಂದನಿಗೆ ವಹಿಸಿಕೊಟ್ಟಾಗ ಮಿಕ್ಕೆಲ್ಲರಿಗಿಂತಲೂ ಮುಂದೆ ನಿಂತವನು ಸೂರಿ. ನೀರಾನೆ ಹರೀಶ, ಲಕ್ಷ್ಮೀಶ, ಮೊಬೈಲ್ ರವಿ, ಸೂರಿ ಮತ್ತು ಗೋವಿಂದ ಸೇರಿಕೊಂಡು ದಾಸರಹಳ್ಳಿ ಕೆರೆ ಏರಿಯ ಮೇಲೆ ಬರುತ್ತಿದ್ದ ಕಾರನ್ನು ಅಡ್ಡಗಟ್ಟಿ ಅದರಿಂದ ಲೇಔಟ್ ಮಂಜನನ್ನು ಹೊರಗೆಳೆದು ಬರ್ಬರವಾಗಿ ಕತ್ತರಿಸಿ ಹಾಕಿದ್ದರು.

ಅದು ಸೂರಿಯ ಮೊದಲ ಹತ್ಯೆ. ಸರಿಸುಮಾರು ಒಂದೂವರೆ ವರ್ಷಗಳ ಕಾಲ ಗೋವಿಂದನ ಜೊತೆ ಜೈಲು ಕಳೆದ ಸೂರಿ ಹೊರಬರುವ ಹೊತ್ತಿಗೆ ಗೋವಿಂದನ ಬಲಗೈ ಬಂಟನಂತಿದ್ದ ಅರುಣ ಕೊಲೆಯಾಗಿದ್ದ. ಆತನನ್ನು ಕೊಲ್ಲಿಸಿದ್ದೇ ತಮ್ಮಯ್ಯ ಎಂಬುದು ಗೋವಿಂದನ ಗುಮಾನಿ. ಅಷ್ಟಕ್ಕೂ ತಮ್ಮಯ್ಯ ಕೂಡ ಗೋವಿಂದನ ಸಂಬಂಧಿಯೇ. ಆ ಹೊತ್ತಿಗೆ ಜೇಕೆಯ ಕಡುವೈರಿಯಾಗಿದ್ದ ತಮ್ಮಯ್ಯನಿಗೆ ಕಾಮಾಕ್ಷಿಪಾಳ್ಯದ ಮಚ್ಚನೇ ಪಕ್ಕಾ ಶಿಷ್ಯ. ಹಾಗಂಥ ಗೋವಿಂದ ಫೀಲ್ಡಿಗಿಳಿಯಲಿಲ್ಲ. ಗೋವಿಂದ ನನ್ನು ಮುಗಿಸುವ ಜವಾಬ್ದಾರಿಯನ್ನು ಸೂರಿಗೆ ಬಿಟ್ಟ. ಅದನ್ನು ಸೂರಿ ಎಷ್ಟು ಚಾಕಚಕ್ಯತೆಯಿಂದ ನಿಭಾಯಿಸಿದನೆಂದರೆ ವಿಜಯನಗರದ ಅತ್ತಿಗುಪ್ಪೆ ಪೆಟ್ರೋಲ್ ಬಂಕ್ ಎದುರಿಗೆ ತನ್ನ ಕಾರಿನಲ್ಲಿ ಬರುತ್ತಿದ್ದ ತಮ್ಮಯ್ಯನನ್ನು ಮತ್ತೊಂದು ಕಾರಿನಿಂದ ಗುದ್ದಿ, ಇಳಿದು ಓಡುತ್ತಿದ್ದ ತಮ್ಮಯ್ಯನನ್ನು ನಡುರಸ್ತೆಯಲ್ಲೇ ಕೊಚ್ಚಿ ಹಾಕಿದ್ದ.

ಇದು ಸೂರಿಯ ಎರಡನೇ ಹತ್ಯೆ. ವಿಚಿತ್ರವೆಂದರೆ ಲೇಔಟ್ ಮಂಜನ ಕೊಲೆ ಕೇಸು ಸಾಕ್ಷಿಯಿಲ್ಲದೇ ಬಿದ್ದು ಹೋದರೆ, ತಮ್ಮಯ್ಯನ ಕೊಲೆ ಕೇಸು ಮಚ್ಚನ ಕೊಲೆಯಿಂದಾಗಿ ಬರಖಾಸ್ತಾಗಿತ್ತು. ತಮ್ಮಯ್ಯನ ಕೊಲೆ ಕೇಸಲ್ಲಿ ಎಲ್ಲ ಹಂತಕರಿಗೂ ಶಿಕ್ಷೆಯಾಗುವಂತೆ ನೋಡಿಕೊಂಡಿದ್ದ ಕಾಮಾಕ್ಷಿಪಾಳ್ಯದ ಮಚ್ಚ 2005ರ ನವೆಂಬರ್ ಒಂದರಂದು ಗೋಪಾಲಯ್ಯನ ಪಡೆಯಿಂದ ಹತನಾದ. ಅದಾಗಿ ತಿಂಗಳಿಗೇ ತಮ್ಮಯ್ಯನ ಕೊಲೆ ಕೇಸೂ ಬಿದ್ದು ಹೋಯಿತು. ಒಂದು ಮೂಲದ ಪ್ರಕಾರ ಜೈಲಲ್ಲಿದ್ದುಕೊಂಡೇ ಸೂರಿ ಮಚ್ಚನ ಮೇಲೆ ಕಣ್ಣಿಟ್ಟಿದ್ದ. ಆತನ ಚಲನವಲನಗಳ ಬಗ್ಗೆ ಕಣ್ಣಿಡುವುದಕ್ಕೆಂದೇ ಯಲಹಂಕದ ಸಂಜೀವಿನಿನಗರದ ಹುಡುಗರನ್ನು 'ಕವರ್' ಮಾಡಿಟ್ಟಿದ್ದ. ಬಹುಶಃ ಹೊರಗಿದ್ದರೆ ಸೂರಿ ಕೂಡ ಮಚ್ಚನ ಕೊಲೆ ಕೇಸಿನಲ್ಲಿ ಫಿಟ್ಟಾಗುತ್ತಿದ್ದನೇನೊ.

ಮಚ್ಚ ಮುಗಿದ ಒಂದೇ ತಿಂಗಳಿಗೆ ಸೂರಿ ಜೈಲಿಂದ ಹೊರಬಿದ್ದ. ಆ ಹೊತ್ತಿಗಾಗಲೇ ಬೆಂಗಳೂರು ಅಂಡರ್‌ವರ್ಲ್ಡ್‌ನ ಖತರ್‌ನಾಕ್‌ಗಳೆಲ್ಲ ಜೈಲು ಪಾಲಾಗಿದ್ದರು. ಗುರು ಗೋವಿಂದನೂ ಬಡುಗಡೆಯಾಗಿದ್ದ. ಆದರೆ ಸೂರಿಗೆ ಜೇಕೆ ಪಾಳಯದಲ್ಲಿ ದೊಡ್ಡಹೆಸರು ಪ್ರಾಪ್ತಿಯಾಗಿತ್ತು. ಗೋವಿಂದನಿಗಿಂತಲೂ ಸೂರಿ ಒಂದು ಕೈ ಮೇಲೆಂದು ಇಡೀ ಅಂಡರವರ್ಲ್ಡ್ ಮಾತಾಡುತ್ತಿತ್ತು. ಅದಕ್ಕೆ ತಕ್ಕಂತೆ ತನ್ನ ತಿಮ್ಮೇನಹಳ್ಳಿಯ ಮನೆಯನ್ನೇ ಖಾಲಿ ಮಾಡಿದ ಸೂರಿ ಕೆಂಗೇರಿ ಉಪನಗರದಲ್ಲಿ ಮನೆ ಮಾಡಿದ. ಕೇಬಲ್ ಶ್ರೀಧರನನ್ನು ಜೊತೆ ಹಾಕಿಕೊಂಡು ಕೆಂಗೇರಿ ಸುತ್ತಮುತ್ತ ಕೇಬಲ್ ದಂಧೆಗೆ ಕೈಯಿಟ್ಟ. ಅಲ್ಲಿಗೆ ಗೋವಿಂದನಿಂದ ಆತ ಪ್ರತ್ಯೇಕಗೊಂಡಂತಾಗಿತ್ತು. ತನ್ನದೇ ಪ್ರತ್ಯೇಕ ತಂಡವನ್ನೂ ಕಟ್ಟಿದ್ದ. ಅಷ್ಟಕ್ಕೇ ತನ್ನ ಪಾಡಿಗೆ ತಾನಿದ್ದರೆ ಆತ ಬದುಕುತ್ತಿದ್ದನೇನೋ.

ಈ ಮಧ್ಯೆ ಕೆಂಗೇರಿ ಉಪನಗರದ ಖತರ್‌ನಾಕ್ ಲ್ಯಾಂಡ್ ಗ್ಯಾಬರ್ ಕೇಕೆ ಆಲಿಯಾಸ್ ಕಾಡುಕುದರೆ ಕೃಷ್ಣಪ್ಪನ ದುಷ್ಕೃತ್ಯಕ್ಕೆ ಸೂರಿ ಪಾಲುದಾರನಾದ. ಈ ಕೇಕೆ ರಿಂಗ್‌ರಸ್ತೆಯ ಎಂಪಿಎಂ ಲೇಔಟ್ ಪಕ್ಕದಲ್ಲಿ ಕೇಕೆ ಲೇಔಟ್ ಅಂತ ಶುರು ಹಚ್ಚಿಕೊಂಡು ಅನೇಕರಿಂದ ಸೈಟಿಗೆಂದು ದುಡ್ಡು ಕಿತ್ತಿದ್ದ. ಆದರೆ ಸೈಟು ಕೊಡದೇ, ಹಾಗೊಮ್ಮೆ ಕೊಟ್ಟಿದ್ದರೂ ಕ್ಯಾತೆ ತೆಗೆದು ಖಾಲಿ ಮಾಡಿಸುತ್ತಿದ್ದ. ಅದಕ್ಕೆಂದು ಸೂರಿಗೆ ಹದಿನೆಂಟು ಸೈಟುಗಳನ್ನು ಕೇಕೆ ಬಿಟ್ಟುಕೊಟ್ಟಿದ್ದ. ಆದರೆ ಸೈಟು ಕಳಕೊಂಡವರ ಪರವಾಗಿ ಟೀಸಿರಾಜ ಎಂಟ್ರಿ ಪಡೆದಿದ್ದ.

ಈ ಟೀಸಿ ರಾಜ ಮಚ್ಚನ ಶಿಷ್ಯ. ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಟೀಸಿ ರಾಜ ಜೈಲು ಪಾಲಾಗುತ್ತಿದ್ದಂತೆ ಸೂರಿ ಗ್ಯಾಂಗ್ ಇಡೀ ಕೇಕೆ ಲೇಔಟನ್ನು ಆಕ್ರಮಿಸಿತ್ತು. ಟೀಸಿ ರಾಜ ಸದ್ಯ ಕೊರಂಗು ಶಿಷ್ಯ.

ಜೊತೆಗೆ ಮಚ್ಚನ ಬಲಗೈ ಬಂಟನಂತಿದ್ದ ಕೋತಿರಾಮನೂ ಬೆನ್ನಿಗಿದ್ದಾನೆ. ಸಾಲದ್ದಕ್ಕೆ ಗೋವಿಂದನ ಕಡುವೈರಿ ಮಾರೇನಹಳ್ಳಿ ಜಗ್ಗನೂ ಟೀಸಿ ರಾಜನನ್ನು ಬೆಂಬಲಿಸುತ್ತಾನೆ. ಇವರೆಲ್ಲರಿಗೂ ಗೋವಿಂದನ ಮೇಲೆ ಮಚ್ಚರ ಇದ್ದೇ ಇದೆ. ಇವರೆಲ್ಲ ಸೇರಿ ಸೇಫ್ಟಾಗಿ ಜೈಲಲ್ಲಿದ್ದುಕೊಂಡೇ ಸೂರಿಗೆ ಮುಹೂರ್ತವಿಟ್ಟರೆ?

ಸದ್ಯ ಮಾರೇನಹಳ್ಳಿ ಜಗ್ಗ ಮತ್ತು ಟೀಸಿ ರಾಜರ ಹೆಸರೇ ಅಂಡರ್‌ವರ್ಲ್ಡ್‌ನಲ್ಲಿ ಓಡಾಡುತ್ತಿದೆ. ಸೂರಿಯಂಥ ಘಾಟಿ ಹಂತಕರನ್ನು ಮುಗಿಸುವ ತಾಕತ್ತು ಅವರಿಗಲ್ಲದೆ ಇನ್ನಾರಿಗಿದ್ದೀತು?

-ರಾ. ಸೋಮನಾಥ್

ತೆಲಗಿ ಸೀಡಿಯ ಹಿಂದೆ ಚೆಡ್ಡಿಗಳು

(5 ನೇ ಪುಟದಿಂದ)

ತಂತ್ರವಾಗಿತ್ತು.

ಆದರೆ ಮಟ್ಟಣ್ಣವರ್ ಪತ್ರಿಕಾ ಹೇಳಿಕೆಯನ್ನು ಯಾರೂ ಗಂಭೀರವಾಗಿ ಪರಿಗಣಿಸಲಿಲ್ಲ. ಅದಾಗಿ ವಾರಕ್ಕೇ CNN-IBN ಸುದ್ದಿ ಚಾನಲ್ ತೆಲಗಿ ಜೈಲಿನಿಂದ ಮಾತಾಡಿದ ಟೇಪ್ ಒಂದನ್ನು ಬಿತ್ತರಿಸಿತು. ಅದರಲ್ಲಿ ತೆಲಗಿ ಮಹಾರಾಷ್ಟ್ರದ ಎನ್‌ಸಿಪಿ ಮುಖ್ಯಸ್ಥ ಶರದ್‌ಪವಾರ್ ಜೊತೆಗಿನ ತನ್ನ ನಂಟನ್ನು ಹೇಳಿಕೊಂಡಿದ್ದ. ಅದು ಸುದ್ದಿಯಾಯಿತಾದರೂ ನಿರೀಕ್ಷಿತ ಫಲ ಕೊಡಲಿಲ್ಲ. ಆದರೆ ಸಿಬಿಐ ವಶದಲ್ಲಿದ್ದ ತೆಲಗಿ ಸಂಭಾಷಣೆಯ ಟೇಪು ಹೇಗೆ ಹೊರಬಿತ್ತೆಂಬುದು ಮಾತ್ರ ಪ್ರಶ್ನೆಯಾಗಿಯೇ ಉಳಿದಿತ್ತು.

ಇದಾಗಿ ಹತ್ತೇ ದಿನಕ್ಕೆ, ಅಂದರೆ ಸೆಪ್ಟೆಂಬರ್ ಐದರಂದು 'ಈಟೀವಿ ಕನ್ನಡ' ಚಾನಲ್ ಬಾಂಬ್ ಹಾಕಿಯೇಬಿಟ್ಟಿತ್ತು. ಅದೇ ತೆಲಗಿಯ ಮಂಪರು ಪರೀಕ್ಷೆಯ ಸೀಡಿ!

ಸಿಬಿಐ ವಶದಲ್ಲಿದ್ದ ಈ ಸೀಡಿ ಈಟೀವಿಗೆ ಸಿಕ್ಕಿದ್ದಾದರೂ ಹೇಗೆ ಎಂದು ಕೆದಕುತ್ತಾ ಹೋದರೆ once again ಅದು ಚೆಡ್ಡಿ ಜಾಲದ ಬುಡಕ್ಕೇ ಬಂದು ನಿಲ್ಲುತ್ತದೆ. ಈಟೀವಿಯಲ್ಲಿ ಅದನ್ನು ಮೊದಲ ಬಾರಿಗೆ ವರದಿ ಮಾಡಿದ್ದು ಸೋಮಶೇಖರ್ ಕವಚೂರು. ಬಲ್ಲ ಮೂಲಗಳ ಪ್ರಕಾರ ಇದಕ್ಕೂ ಹತ್ತು ದಿನಗಳ ಮೊದಲೇ ತೆಲಗಿ ಹೇಳಿಕೆಯ ಲಿಖಿತ ದಾಖಲೆಯೊಂದನ್ನು ಸೀಡಿಗೆ ಹಾಕಿ ಕವಚೂರು ತಂದಿದ್ದ. ಅದನ್ನು ಆತನಿಗೆ ಒದಗಿಸಿದ್ದು ಹೈಕೋರ್ಟಿನ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಸಂಘ ಪರಿವಾರದ ಪರಮಾಪ್ತ ವಕೀಲ ದೊರೆರಾಜು!

ಯಾರೋ ಅನಾಮಧೇಯನ ಅನಧಿಕೃತ ಲಿಖಿತ ಹೇಳಿಕೆಯಂತಿದ್ದ ಅದನ್ನು ಸುದ್ದಿ ಮಾಡುವ ಧೈರ್ಯ ಕವಚೂರಿಗೆ ಬರಲಿಲ್ಲ. ಬಹುಶಃ ದೊರೆರಾಜು ಯಾಕೆ ಸುದ್ದಿ ಮಾಡಿಲ್ಲ ಎಂದು ಈಟೀವಿ ವರದಿಗಾರನನ್ನು ಒತ್ತಾಯಿಸಿದ್ದಾರೆ. ಅದಕ್ಕೆ ಆತ ವೀಡಿಯೋ ಸೀಡಿ ಇದ್ರೆ ಕೊಡೆ ನೋಡೋಣಂತೆ ಅಂದಿದ್ದಾನೆ. ಅಷ್ಟಂದಿದ್ದೇ ತಡ, ದೊರೆರಾಜು ತಮ್ಮ ಬಳಿಯಿದ್ದ ತೆಲಗಿ ಮಂಪರು ಪರೀಕ್ಷೆಯ ತುಣುಕುಗಳುಳ್ಳ ಸೀಡಿ ಕೊಟ್ಟಿದ್ದಾರೆ. ಅದರ ಮಹತ್ವ ಗೊತ್ತಾಗದೇ ಕವಚೂರು ಅದನ್ನು ಬೇಕಾಬಿಟ್ಟಿ ಸುದ್ದಿ ಮಾಡಿದ್ದಾನೆ. ಯಾವತ್ತು ಈಟೀವಿಯಲ್ಲಿ ಸುದ್ದಿಯಾಯಿತೋ ವಿಜಯ ಟೈಮ್ಸ್‌ನ ರಿಪೋರ್ಟರ್ ವಿಕ್ಕಿ ನಂಜಪ್ಪನಿಗೆ ತಾನಿನ್ನು ಕಾಯ್ದು ಪ್ರಯೋಜನವಿಲ್ಲ ಎನ್ನಿಸಿದೆ.

ಏಕೆಂದರೆ ತಿಂಗಳ ಹಿಂದೆಯೇ ತೆಲಗಿ ಮಂಪರು ಪರೀಕ್ಷೆಯ ಸೀಡಿಯೊಂದನ್ನು ವಿಕ್ಕಿ ನಂಜಪ್ಪ ವಕೀಲ ನಾಣಯ್ಯನವರಿಂದ ಗಿಟ್ಟಿಸಿಬಿಟ್ಟಿದ್ದ. ರೆಡ್ಡಿ ಸೀಡಿಯ ಗದ್ದಲದಲ್ಲಿ ಅದನ್ನ ಸುದ್ದಿ ಮಾಡುವುದು ಬೇಡ ಎಂದು ಗುಟ್ಟಾಗಿಟ್ಟಿದ್ದ. ಅದು ಆತನ ವಿವೇಕ. ಆದರೆ ಈಟೀವಿಯ ಕವಚೂರು ಆ ಮಟ್ಟದ ಆಸಾಮಿಯಲ್ಲ. ಆ ಬಗ್ಗೆ ತಿಳಿಹೇಳಬಹುದಿದ್ದ ಈಟೀವಿಯ ನ್ಯೂಸ್ ಬ್ಯೂರೋ ಚೀಫ್ ಜಿ.ಎನ್. ಮೋಹನ್ ಇಲ್ಲಿಗೆ ತಿಂಗಳ ಹಿಂದೆಯೇ ನಿಗೂಢವಾಗಿ ಕಣ್ಮರೆಯಾಗಿದ್ದಾರೆ. ಈಟೀವಿಯಲ್ಲಿ ಇದು ಬಯಲಾಗುತ್ತಿದ್ದಂತೆ ಉದಯ ಟೀವಿಯಲ್ಲಿ ಇದು ಇನ್ನಷ್ಟು ಗೌಜಿನೊಂದಿಗೆ ಸುದ್ದಿಯಾಯಿತು. ಅದೇ ದಿನ ವಿಜಯಟೈಮ್ಸ್ ಕೂಡ ಸುದ್ದಿ ಮಾಡಿತು. ಇದಾಗಿದ್ದು ಸೆಪ್ಟೆಂಬರ್ ಆರರಂದು. ಮರು ದಿನದ ಹೊತ್ತಿಗೆ ದೇಶದ ಅಷ್ಟೂ ಟೀವಿ ವಾಹಿನಿಗಳ ವರದಿಗಾರರೆಲ್ಲ ಹೈಕೋರ್ಟಿನ ದೊರೆರಾಜು ಆಫೀಸಿನ ಮುಂದೆ ಸಾಲುಗಟ್ಟಿ ನಿಂತಿದ್ದರು. ಹಾಗೇ ಸೀಡಿಗಾಗಿ ಹಾತೊರೆಯುತ್ತಿದ್ದ ಪ್ರತಿಯೊಬ್ಬರಿಗೂ ದೊರೆರಾಜುವೇ ಹೇಳಿಸಿ ಸೀಡಿಗಳ ಪ್ರತಿಯ ವ್ಯವಸ್ಥೆ ಮಾಡಿದ್ದಾರೆಂದರೆ ಏನರ್ಥ?


ಅದು ಕೇಸರಿ ಹಿತಾಸಕ್ತಿಯಲ್ಲದೇ ಮತ್ತೇನು?

-ವರದಿಗಾರ

ಹೊರೆ ಹೊತ್ತ ಕಲಾವತಿ ಮೇಲೆ ಹಲ್ಲೆ!

ಮಂಡ್ಯ

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾದ ಎಚ್.ಡಿ. ಕುಮಾರಸ್ವಾಮಿಯವರು ತಾವು ಮತ್ತು ತಮ್ಮ ಸರ್ಕಾರ ಬಡವರ ಪರ, ದಲಿತರ ಪರ, ಮಹಿಳಾಪರ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವ ಈ ಸಂದರ್ಭದಲ್ಲಿಯೇ ಅವರ ಜೆ.ಡಿ.ಎಸ್. ಪಕ್ಷದಿಂದಲೇ ಚುನಾಯಿತರಾಗಿರುವ ಬೆಳ್ಳೂರಿನ ಗ್ರಾಮ ಪಂಚಾಯ್ತಿ ಅಧ್ಯಕ್ಷೆಯ ಮೇಲೆ ಅವರದೇ ಪಕ್ಷದ ಗೂಂಡಾಗಳು ಹಲ್ಲೆ ಮಾಡಿದ ಪ್ರಸಂಗ ನಡೆದಿದೆ.



ಬೆಳ್ಳೂರಿನ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಕಲಾವತಿಯವರು ಕಾಮಗಾರಿ ಪರಿಶೀಲನೆ ಮಾಡದೆ ಬಿಲ್ಲಿಗೆ ಸಹಿ ಹಾಕುವುದಿಲ್ಲ ಎಂದು ಹೇಳಿದ ಒಂದೇ ಕಾರಣಕ್ಕೆ ಬೆಳ್ಳೂರಿನ ಹೃದಯ ಭಾಗದಲ್ಲಿರುವ ಅವರ ಮನೆಗೆ ನುಗ್ಗಿದ ಗೂಂಡಾ ಪಡೆ ಕಲಾವತಿಯವರ ಗಂಡ ಪುಟ್ಟರಾಜು, ಅತ್ತೆ ವೆಂಕಟಮ್ಮ ಮತ್ತು ಆಕೆಯ ಮೈದುನರನ್ನೊಳಗೊಂಡು ಸ್ವತಃ ಕಲಾವತಿಯವರನ್ನು ಹೀನಾಯವಾಗಿ ಥಳಿಸಿ ದೌರ್ಜನ್ಯವೆಸಗಿದ್ದಾರೆ.

ದಿನೇಶ್ ಎಂಬ ಗುತ್ತಿಗೆದಾರ ಬೆಳ್ಳೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಕೆಲಸವನ್ನು ನಿರ್ವಹಿಸಿದ್ದರು. ಈ ಅಭಿವೃದ್ಧಿ ಕಾರ್ಯದ ಒಟ್ಟು ಮೊತ್ತ ಆರೂವರೆ ಲಕ್ಷವಾಗಿತ್ತು. ಈ ಬಿಲ್ಲಿಗೆ ಗ್ರಾ.ಪಂ. ಕಾರ್ಯದರ್ಶಿಯವರ ಸಹಿಯಾದ ನಂತರ ಅಧ್ಯಕ್ಷರ ಸಹಿಯಾಗಬೇಕಾಗಿದ್ದು ನಿಯಮ. ಕಾರ್ಯದರ್ಶಿಯವರು ಸಹಿ ಮಾಡಿದ ಬಿಲ್ಲನ್ನು ದಿನೇಶ್ "ತನ್ನ ಗೂಂಡಾ ಪಡೆಯೇ ತೆಗೆದುಕೊಂಡು ಕಲಾವತಿಯವರ ಮನೆಗೆ ಹೋಗಿ ಸಹಿ ಹಾಕುವಂತೆ ಒತ್ತಾಯ ಮಾಡಿದ್ದಾರೆ. ಇದಕ್ಕೆ ಒಪ್ಪದ ಕಲಾವತಿಯವರು ಯಾವುದೇ ಅಭಿವೃದ್ಧಿ ಕಾರ್ಯವನ್ನು ಪರೀಶೀಲಿಸದೇ ಬಿಲ್ಲಿಗೆ ಸಹಿ ಹಾಕುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ಸಹಿಸದ ವಿಜಯಕುಮಾರ್, ರೋಹಿಂತ್, ಪಾಪಣ್ಣ ಉರುಫ್ ಪದ್ಮನಾಭ, ಮಹ್ಮದ್ ಯಾಸಿನ್, ಶಿವಣ್ಣ ಮತ್ತು ಮಹ್ಮದ್ ಆಸಿನ್ ಎಂಬ ಆರು ಜನರ ಗೂಂಡಾ ಪಡೆ ಕಲಾವತಿಯವರ ಮೇಲೆ ಏಕಾಏಕಿ ಹರಿಹಾಯ್ದು ಜೀವ ಬೆದರಿಕೆಯೊಡ್ಡಿ ಆರೂವರೆ ಲಕ್ಷ ರೂಪಾಯಿಗಳ ಚೆಕ್‌ಗೆ ಸಹಿ ಮಾಡಿಸಿಕೊಂಡು ಪರಾರಿಯಾಗಿದ್ದಾರೆ.



ಅಸಲಿಗೆ ಈ ಕಾಮಗಾರಿ ಕೆಲಸದ ಗುತ್ತಿಗೆದಾರ ದಿನೇಶ್ ಎಂಬ ವ್ಯಕ್ತಿ ಯಾರು? ಎಂಬುದೇ ನಿಗೂಢವಾಗಿದೆ. ದಿನೇಶ್ ಹೆಸರಿನಲ್ಲಿ ಪರವಾನಗಿಯನ್ನು ಬಳಸಿಕೊಂಡು ಈ ಹಿಂದೆಯೂ ಈ ಆರು ಜನರ ಗೂಂಡಾ ಪಡೆ ನಕಲಿ ಬಿಲ್ಲುಗಳನ್ನು ನೀಡಿ ಹಣ ವಸೂಲಿ ಮಾಡಿರುವ ಸುದ್ದಿಯನ್ನು ಸ್ವತಃ ಕಲಾವತಿಯವರೇ ಈಗ ಹೊರಗೆಡವಿದ್ದಾರೆ.

ಈ ಆರೂ ಜನರು ಸಹ ಜಾತ್ಯತೀತ ಜನತಾದಳದ ಸದಸ್ಯರಾಗಿದ್ದು, ಇವರ ಎಲ್ಲಾ ಕೃತ್ಯಗಳಿಗೆ ಸಾರಿಗೆ ಸಚಿವ ಚೆಲುವರಾಯ ಸ್ವಾಮಿಯರ ಕೃಪಾಶೀರ್ವಾದವೂ ಇದೆಯಂತೆ. ಸೀಕ್ರೆಟ್ ಟೆಂಡರ್‌ಗಳ ಮೂಲಕ ಅನೇಕ ಕಾಮಗಾರಿ ಕೆಲಸಗಳು ತಮ್ಮ ಸುಪರ್ದಿಗೆ ಬರುವಂತೆ ನೋಡಿಕೊಳ್ಳುತ್ತಿದ್ದರು. ಈ ಹಿಂದೆ ಬೆಳ್ಳೂರಿನ ಸುಬ್ರಮಣ್ಯ ಎಂಬುವವರು ನಿರ್ಮಿಸಿದ್ದ ಒಳಚರಂಡಿಗೆ ನಕಲಿ ಬಿಲ್ಲನ್ನು ನೀಡಿ ಮೂವತ್ತು ಸಾವಿರ ರೂಪಾಯಿಗಳ ಹಣವನ್ನು ಕಿತ್ತಿದ್ದರು. ಈ ಬಿಲ್ಲಿನ ಹಣವನ್ನು ನೀಡುವಂತೆ ಸ್ವತಃ ಚೆಲುವರಾಯಸ್ವಾಮಿಯವರೇ ದೂರವಾಣಿಯ ಮೂಲಕ ತಮಗೆ ಆದೇಶಿಸಿದ್ದರು ಎಂದು ಕಲಾವತಿಯವರು ಹೇಳಿಕೆ ನೀಡಿದ್ದಾರೆ.

ಈ ಹಲ್ಲೆ ವಿಷಯವನ್ನು ಶಿವರಾಮೇಗೌಡರೊಂದಿಗೆ ಪತ್ರಿಕಾಗೋಷ್ಠಿಯ ಮೂಲಕ ಹೊರಗೆಡವಿದ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಕಲಾವತಿಯವರು ಗ್ರಾಮ ಪಂಚಾಯ್ತಿಯಲ್ಲಿ ಇನ್ನೂ ಹಲವಾರು ರೀತಿಯ ಅವ್ಯವಹಾರಗಳು ನಡೆಯುತ್ತಿವೆ, ಗ್ರಾಮ ಪಂಚಾಯ್ತಿಗೆ ಸೇರಿದ ವಾಣಿಜ್ಯ ಸಂಕೀರ್ಣವೊಂದನ್ನು ಉದ್ಯಮಿಯೊಬ್ಬರಿಗೆ ರಹಸ್ಯವಾಗಿ ಮಾರಾಟ ಮಾಡುವ ಸಂಚು ರೂಪಿತವಾಗಿದೆ ಎಂದು ದೂರಿದ್ದಾರೆ.

ಅವೊತ್ತು ಶಿವರಾಮೇಗೌಡ....... ಇವತ್ತು ಚೆಲುವರಾಯಸ್ವಾಮಿ........ ನಾಗಮಂಗಲಕ್ಕೆ ಮುಕ್ತಿಯೇ ಇಲ್ಲವೆ?

-ವರದಿಗಾರ

ಸಿದ್ದು ಅರ್ಜೆಂಟ್ ಬನ್ನಿ

ದಾರಿ ತಪ್ಪುರಿದ್ದಾರೆ ಬೆಂಬಲಿಗರು!

ಕೊಪ್ಪಳ

ಸಿದ್ಧರಾಮಯ್ಯ ಈಗ ಅರ್ಜೆಂಟಾಗಿ ಸಿಮೆಂಟ್-ತ್ಯಾಪೆ ಹಿಡಿದು ಕೊಪ್ಪಳಕ್ಕೆ ಬರಬೇಕಿದೆ!

ಬೆಂಗಳೂರಿನ ವಿಲೀನ ಸಮಾವೇಶ ಮುಗಿದಿದೆ. ರಾಜ್ಯದಲ್ಲಿ ಅದೇನು ಬದಲಾವಣೆ ಆಗಲಿದೆಯೋ ಗೊತ್ತಿಲ್ಲ, ಆದರೆ ಕೊಪ್ಪಳ ಜಿಲ್ಲಾ ಕಾಂಗ್ರೆಸ್‌ಲ್ಲಿ ಒಂದು ರೌಂಡ್ ಫೈಟಿಂಗ್ ನಡೆಯಲಿರುವುದು ಖಚಿತ! ಜಿಲ್ಲೆಯ ಈ ಗ್ಯಾಂಗ್ ಅನ್ನು ಸಿದ್ದು ನಿರ್ಲಕ್ಷಿಸಿದರೆ ಕಾಂಗ್ರೆಸ್ ಅದರ 'ಫಲ' ಉಣ್ಣಬೇಕಾಗುತ್ತದಷ್ಟೇ.



ವಿಲೀನಕ್ಕೆ ಮೂರು ದಿನ ಮುನ್ನ ದಿಲ್ಲಿಯಲ್ಲಿ ಟೆಂಟ್ ಹಾಕಿದ್ದ ಕೊಪ್ಪಳದ ಕುರುಬ ನಾಯಕರಾದ ಸಂಸದ ವಿರುಪಾಕ್ಷಪ್ಪ, ಶಾಸಕ ಹಿಟ್ನಾಳ್, ಮಾಜಿ ಎಂ.ಎಲ್.ಸಿ. ಕರಿಯಣ್ಣ, ಎಬಿಪಿಜೆಡಿ ಅಧ್ಯಕ್ಷನಾಗಿದ್ದ ಹನುಮಂತಪ್ಪ ಬೆಂಗಳೂರು ಸಮಾವೇಶಕ್ಕೆ ಮೂರು ದಿಕ್ಕಾಗಿ ಹೋಗಿದ್ದರು. ಆಗಸ್ಟ್ 12 ರ ಸಿದ್ದು ಹುಟ್ಟುಹಬ್ಬಕ್ಕೆ ವಿಶ್ ಮಾಡುವ ಜಾಹೀರಾತನ್ನೂ ಹಾಕಲಿಲ್ಲ ಈ ಕುರುಬ ನಾಯಕರು!

ಕಾಂಗ್ರೆ ಶಾಸಕ ಹಿಟ್ನಾಳ ಸಮಾವೇಶಕ್ಕೆ ಕೇವಲ 25 ಬಸ್ ಮಾಡಿದ್ದ, ಜಾಗ ಸಿಗದ ಜನ ಶಪಿಸುತ್ತಾ ಹಳ್ಳಿಗಳಿಗೆ ವಾಪಸ್ಸಾದರು. ಎಲ್ಲಿ ಬರೀ ಎಬಿಪಿಜೆಡಿ ಕಾರ್ಯಕರ್ತರೇ ಬಸ್ ಹತ್ತಿ ಬಿಡುತ್ತಾರೋ ಎಂದು ಭಯಗೊಂಡಿದ್ದ ಹಿಟ್ನಾಳ್! ಒಟ್ನಲ್ಲಿ ಕೊಪ್ಪಳ, ಯಲಬುರ್ಗಗಳ ಕಾಂಗ್ರೆ ಶಾಸಕರಾದ ಹಿಟ್ನಾಳ್, ರಾಯರೆಡ್ಡಿಗಳಿಗೆ ಸಿದ್ದು ಬೆಂಬಲಿಗರನ್ನು ಕಂಡರೆ ಅಷ್ಟಕಷ್ಟೇ. ಸಂಸದ ವಿರುಪಾಕ್ಷಪ್ಪನ ಜೊತೆ ಸೇರುವ ರಾಯರೆಡ್ಡಿ ಕಾಂಗ್ರೆಸ್‌ನಲ್ಲಿ ರಾಮುಲು ಪ್ರಭಾವ ಕಡಿಮೆ ಮಾಡಲು ಫೈಟ್ ಮಾಡುತ್ತಲೇ ಇರುತ್ತಾರೆ. ರಾಮುಲು ಗುಂಪು ಸಿದ್ದು ಬೆಂಬಲಿಗರ ಪರ ನಿಂತಿದೆ. ಆದರೆ ಸಿದ್ದು ಬೆಂಬಲಿಗರೇ ವಿಲೀನದ ನಂತರ ಅಸ್ಪಷ್ಟವಾಗತೊಡಗಿದ್ದಾರೆ. ವಿರೂಪಾಕ್ಷಪ್ಪ, ರಾಯರೆಡ್ಡಿ ಜಾತಿ ರಾಜಕಾರಣಕ್ಕೇ ಆದ್ಯತೆ ಕೊಡುವುದರಿಂದ, ರಾಮುಲು ಗುಂಪೇ ಮೇಲುಗೈ ಸಾಧಿಸಲಿ ಎನ್ನುತ್ತಿದ್ದಾರೆ ಸಿದ್ದು ಕಾರ್ಯಕರ್ತರು. ಬೆಂಗಳೂರು ಸಮಾವೇಶದ ಪೂರ್ವಭಾವಿ ಸಭೆಗೆ ಸಿದ್ದು ಬಂದಿದ್ದಾಗ ರಾಯರೆಡ್ಡಿ, ವಿರುಪಾಕ್ಷಪ್ಪ, ಹಿಟ್ನಾಳ್ ಗಳು ಸಿದ್ದುಗೆ ರಾಮುಲುವನ್ನು ಭೇಟಿ ಆಗದಂತೆ ಸಲಹೆ ನೀಡಿದ್ದರು. ದೇವೇಗೌಡರು ಒಳಮೀಸಲಾತಿ ಕುರಿತು ಮಾತನಾಡುವ ಈ ಹೊತ್ತಿನಲ್ಲಿ ಜಾಣ ಸಿದ್ದು ಈಡಿಗ ಜನಾಂಗದ ರಾಮುಲುವನ್ನು ಭೇಟಿ ಆಗಿಯೇಬಿಟ್ಟರು. ಕಾಂಗ್ರೆಸ ವಿರುಪಾಕ್ಷಪ್ಪ, ಹಿಟ್ನಾಳ್, ರಾಯರೆಡ್ಡಿಗಳ ಒಣಸೊಕ್ಕಿನಿಂದ ವಿಲೀನದ ಉದ್ದೇಶವೇ ಬಿದ್ದುಹೋಗಬಹುದು. ಆದರೆ ಮೊನ್ನೆ ವಿಲೀನದ ಸಮಾವೇಶಕ್ಕೆ ರಾಮುಲು ಹೆಚ್ಚು ಜನರನ್ನು ಕಳಿಸುವ ಮೂಲಕ ವಿಲೀನದ ಆಶಯಕ್ಕೆ ಹತ್ತಿರವಾಗಿದ್ದರು. ಕಾಂಗ್ರೆಸ ಗದ್ದಲದಲ್ಲಿ ಸಿದ್ದು ಬೆಂಬಲಿಗರು ದಿಕ್ಕಾಪಾಲಾಗುವ ಸೂಚನೆಗಳಿವೆ. ಅದು ಕಾಂಗ್ರೆ, ಸಿದ್ದು ಇಬ್ಬರಿಗೂ ನಷ್ಟವೇ. ಅದಕ್ಕೆ ಅರ್ಜೆಂಟಾಗಿ ಸಿದ್ದು ಇಲ್ಲಿಗೆ ಬಂದು ಈಗಲೇ ರಿಪೇರಿ ಮಾಡಬೇಕಿದೆ.



-ವರದಿಗಾರ

ರೇಷನ್ ಅಕ್ಕಿ ಕೆರೊಸಿನ್

ಭಾಪಣಾ-ಬನವಾಸಿ ಬಾಯಿಗೆ!

ಹುಬ್ಬಳ್ಳಿ

ರೇಷನ್ ಅಕ್ಕಿಯೆಲ್ಲ ಬಡಾಡಿ ಹಂದಿಗಳ ಪಾಲಾಗುತ್ತಿದೆ. ಈ ಹಂದಿಗಳು ಕೆರೊಸಿನ್ ಕೂಡ ಬಿಡುವುದಿಲ್ಲ ಎನ್ನುತ್ತವೆ.

ಹುಬ್ಬಳ್ಳಿ ಬಡವರ ಅಕ್ಕಿ, ಕೆರೊಸಿನ್‌ಗೆ ಬಾಯಿ ಹಾಕಿದ ಮಿಕಗಳೆಂದರೆ ನಾಗರಾಜ ಬನವಾಸಿ ಮತ್ತು ರಮೇಶ್ ಭಾಪಣಾ. ಈ ನಾಗರಾಜ ಬನವಾಸಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್. ಕೆಲಸದ ವಿಷಯದಲ್ಲಿ ರೈಸ್ ಗ್ಯಾಬರ್! ಇವನಿಗೆ ಸಹಪಾಠಿಗಳಾಗಿರುವ ಮುತಾಲಿಕ್ ದೇಸಾಯಿ, ಮಠದ ಮತ್ತು ಪಾಟೀಲ್‌ಗಳೆಂಬ ಮೂವರು ಮುಠ್ಠಾಳರೂ ಕೈ ಜೋಡಿಸಿದ್ದಾರೆ. ಇಲಾಖೆಯ ಸಹಾಯಕ ನಿರ್ದಶಕಿ ಅನ್ನಪೂರ್ಣಮ್ಮರಿಗೆ 'ಅನ್ನ'ವಷ್ಟೇ ಗೊತ್ತು, ಅಕ್ಕಿಯ ವಿಷಯವಲ್ಲ, ಅಷ್ಟು ಅಸಹಾಯಕರನ್ನಾಗಿ ಮಾಡಲಾಗಿದೆ ಈ ಸಹಾಯಕ ನಿರ್ದೇಶಕಿಯನ್ನು. ಬನವಾಸಿಯ ಕೈ ಚಳಕವೇ ಅಂತಾದ್ದು, ಇಲ್ಲಾಂದ್ರೆ 8 ವರ್ಷದಿಂದ ಇಲ್ಲೇ ಟೆಂಟ್ ಹಾಕಿ ಕೂಡಲಾಗುತ್ತಿತ್ತೆ?

ಅಕ್ಕಿ ಮುಕ್ಕುವ ಚೆಡ್ಡಿ ಭಾಪಣಾ

ನಾಗರಾಜ ಬನವಾಸಿಗೆ ಸಾಥಿಯಾಗಿರುವ ವ್ಯಾಪಾರಿಯೇ ಚೆಡ್ಡಿ ರಮೇಶ್ ಭಾಪಣಾ.... ಮುಂದಿನ ಎಂಎಲ್‌ಎ ನಾನೇ ಎಂದು ತಿರುಗುತ್ತಿರುವ ಚೆಡ್ಡಿ ಚತುರ ಭಾಪಣಾ ಎ.ಪಿ.ಎಂ.ಸಿ. ಸದಸ್ಯ, ಬಿಜೆಪಿಯ ಲೋಕಲ್ ಪುಢಾರಿಗಳ ಗುಂಡು-ತುಂಡುಗಳ ವೆಚ್ಚ ನೋಡಿಕೊಳ್ಳುತ್ತಾ, ಬಡವರ ಅಕ್ಕಿಗೆ ಬಾಯಿ ಹಾಕುತ್ತಿದ್ದಾನೆ. ಕಾರ್ಪೊರೇಟರ್ ಬೆಂಡಿಗೇರಿ, ಮಾಜಿ ಕಾರ್ಪೊರೇಟರ್ ವೀರಣ್ಣ ಹಂಜಿ ಭಾಪಣಾ ಬೆನ್ನಿಗಿದ್ದಾರೆ. ಭಾಪಣಾನ ಅಸಿಸ್ಟೆಂಟ್‌ಗಳಾಗಿರುವ ಇಜಾರಿ, ಸೋಳಂಕಿ ಎಂಬ ಕ್ರಿಮಿಗಳು ಸೀದಾ FCI (ಭಾರತ ಆಹಾರ ನಿಗಮ) ಗೋಡೌನ್‌ನಿಂದ ಅಕ್ಕಿ ಎತ್ತಬಲ್ಲರು. ಒಳ್ಳೆ ಅಕ್ಕಿಯನ್ನು ಕ್ವಿಂಟಾಲ್‌ಗೆ ಕೇವಲ 500 ರೂ. ನಂತೆ ಇಜಾರಿ, ಸೋಳಂಕಿ, ಭಾಪಣಾಗಳಿಗೆ ಮಾರಲಾಗುತ್ತಿದೆ! ಈ ಅಕ್ಕಿಯನ್ನೇ ಇನ್ನಷ್ಟು ಪಾಲಿಶ್ ಮಾಡಿ ಮಾರ್ಕೆಟ್ಟನಲ್ಲಿ ಕೆ.ಜಿ.ಗೆ. 16 ರೂ.ಗಳಂತೆ ಮಾರಿ ಲಾಭ ಹೊಡೆಯುತ್ತಿವೆ ಕಳ್ಳ ಮಿಕಗಳು. ಅಕ್ಕಿಗಳ್ಳರು, ಕೆರೊಸಿನ್‌ಗಳ್ಳರಿಗೆಲ್ಲ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯೇ ಸಪೋರ್ಟು ಮಾಡುತ್ತಿರುವಾಗ ಜನಸಾಮಾನ್ಯರನ್ನು ಕೇಳುವವರಾರು?

ಕದ್ದ ರೇಷನ್ ಮಾಲೆಲ್ಲ ಕಳ್ಳ ವ್ಯಾಪಾರಿ ಭಾಪಣಾನ ಗೋಡೌನ್ ಪಾಲಾಗುತ್ತಿದೆ. 36 ಸಾವಿರ ಕಾರ್ಡ್‌ದಾರರ ಪಾಲಿನ ಅಕ್ಕಿ, ಸೀಮೆಎಣ್ಣೆಯಲ್ಲಿ ಅರ್ಧದಷ್ಟು ಕಳ್ಳರ ಪಾಲಾಗುತ್ತಿದೆಯಷ್ಟೇ. ಎಷ್ಟೋ ಜನರಿಗೆ ಇನ್ನೂ ಕಾರ್ಡ್‌ಗಳೇ ಸಿಕ್ಕಿಲ್ಲ.

ಹುಬ್ಬಳ್ಳಿಯ ಐದು ವಲಯಗಳಲ್ಲಿ ಹೆಚ್ಚು ಕಾರ್ಡ್‌ಗಳಿರುವುದು 2 ಮತ್ತು 5 ನೇ ವಲಯಗಳಲ್ಲಿ, ಈ ವಲಯಗಳ ಫುಲ್ ಇನ್‌ಚಾರ್ಜ್ ಕಳ್ಳ ಬನವಾಸಿಯದು.

ರೇಷನ್ ಅಂಗಡಿಗಳು ಕೊಡುವ ಮಂಥ್ಲಿಯೇ 1 ಲಕ್ಷಕ್ಕಿಂತ ಹೆಚ್ಚು, ಸೀಮೆಎಣ್ಣೆ ವಿತರಕರಿಂದಲೂ 1 ಲಕ್ಷದಷ್ಟು ಲಂಚ ಹರಿದು ಬರುತ್ತದೆ. ಬನವಾಸಿ ಹುಬ್ಬಳ್ಳಿಯೇ ಬದುಕಲು ವಾಸಿ ಎನ್ನದೇ ಬಿಡುತ್ತಾನಾ?

ಪ್ರತಿ ತಿಂಗಳು ಬಿಡುಗಡೆಗೊಳ್ಳುವ 5 ಲಕ್ಷ ಲೀಟರ್ ಕೆರೊಸಿನ್ ಜೆ.ವಿ. ಸವಣೂರ್, ಜೆ.ಎಸ್. ಸವಣೂರ, ರಾಯ್ಕರ್, ಸಿ.ವಿ. ಬಾಗಲಕೋಟೆ, ಮಹಾದೇವ್ ಆಯಿಲ್ ಕಂಪನಿಗಳೆಂಬ ಕಳ್ಳ ಕಂಪನಿಗಳ ಮೂಲಕ 400 ಚಿಲ್ಲರೆ ವಿತರಕರನ್ನು ತಲುಪುತ್ತದೆ. ಮುಂದೆ ಜನರಿಗೆ ನಾಮಕಾವಸ್ತೆ ತಲುಪುತ್ತದಷ್ಟೇ.

ನಾಗರಾಜ ಬನವಾಸಿ, ಭಾಪಣಾಗಳ ಅಕ್ಕಿ ಮುಕ್ಕುವಿಕೆ ನಿಲ್ಲಿಸುವವರಾರು? ಇಲಾಖೆಯ ಮಂತ್ರಿ ಗೋವಿಂದ ಕಾರಜೋಳನೇ ಕಳ್ಳರ ಕಳ್ಳನಾಗಿರುವಾಗ ಆತನಿಂದ ಏನು ನಿರೀಕ್ಷಿಸಲಾದೀತು?

ಬೀದಿ ಹೋರಾಟವೊಂದೇ ಉಳಿದಿರುವ ದಾರಿ....

-ವರದಿಗಾರ

ಹರಪನಹಳ್ಳಿ ಶಾಸಕ ಪರಮೇಶಿಯ ಪುಂಡಾಟಗಳು

ಬಳ್ಳಾರಿ

ಹರಪನಹಳ್ಳಿ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಿ ಎಂದು ಪ್ರಗತಿಪರರ ಪ್ರತಿಭಟನೆ ನಡೆದಿರುತ್ತದೆ. ಅಲ್ಲೇ ಹತ್ತಿರದಲ್ಲೇ ಹರಪನಹಳ್ಳಿಯ ಪುಂಡ ಶಾಸಕ [illegible] ಪರಮೇಶ್ವರ ನಾಯ್ಕನ ಕಾರ್ಯಕ್ರಮವಿರುತ್ತದೆ. [illegible] ವರ್ಷದ ಹಿಂದೆಯೇ ಆರಂಭಗೊಂಡ ಆರೋಗ್ಯ [illegible]ವನ್ನು ಈಗ ಉದ್ಘಾಟನೆ ಮಾಡುತ್ತಾನೆ ಶಾಸಕ. [illegible]ಕರು ಶಾಸಕನ ವಿರುದ್ಧ ಘೋಷಣೆ ಕೂಗಿದ್ದೇ [illegible]. ಪರಮೇಶಿಯ ಪುಂಡಪಡೆ ಮಾರಕಾಸ್ತ್ರಗಳಿಂದ [illegible] ಪ್ರತಿಭಟನಾಕಾರರನ್ನು ಹಿಗ್ಗಾಮುಗ್ಗಾ [illegible].

ಇದೇನೂ ಪರಮೇಶ್ವರ ನಾಯ್ಕನ ಮೊದಲ ಗೂಂಡಾಗಿರಿ ಪ್ರಕರಣವಲ್ಲ. ಆದರೂ ಪೊಲೀಸರು ಮಾತ್ರ ಶಾಸಕನ ಪುಂಡ ಪಡೆಗೆ ಬೆಂಗಾವಲಾಗಿ ನಿಲ್ಲುತ್ತಲೇ ಇರುತ್ತಾರೆ. ಹಲ್ಲೆಯಲ್ಲಿ ಮಾರಣಾಂತಿಕವಾಗಿ ಗಾಯಗೊಂಡ ಮೋತಿನಾಯ್ಕನಿಗೆ ಈಗಲೂ ಪ್ರಾಣಾಪಾಯವಿದೆ. ಮೋತಿನಾಯ್ಕ ದೂರು ಕೊಟ್ಟಿದ್ದು ಈಗಾಗಲೇ ಶಾಸಕನ ಗೂಂಡಾಗಿರಿ ವಿರುದ್ಧ ಪ್ರತಿಭಟನೆಗಳಾಗಿವೆ. ದಾವಣಗೆರೆಯಲ್ಲಿ ಧರಣಿಯೂ ನಡೆಯಲಿದೆ.

ಅವತ್ತು ಆಗಸ್ಟ್ 30 ರಂದು [illegible] ದಾಂಧಲೆ ನಡೆಸಿದ ಪುಂಡ ಪಡೆಯಲ್ಲಿ ಎಚ್.ಕೆ. ಹಾಲೇಶ್, ಎಂ.ವಿ. ಅಂಜಿನಪ್ಪ, [illegible] ಪರಶುರಾಮ, ಟಿ. ಪರಸಪ್ಪ, ಪೋಮ್ಯಾನಾಯ್ಕ, ಉಮೇಶ್‌ಗಳೆಂಬ ಪರಮೇಶಿಯ ಚೇಲಾಗಳೇ ಇದ್ದರು.

ಈ ಹಿಂದೆ ಶಾಸಕನ ಪಡೆ ರೈತ ಸಂಘದ ಮಹೇಶ್ವರಸ್ವಾಮಿ ಮೇಲೆ ಹಲ್ಲೆ ಮಾಡಿತ್ತು, ಪರಮೇಶಿಯ ಕಾಟ ತಾಳಲಾರದೇ ರಮೇಶ್‌ಬಾಬು ಎಂಬ ಕಂಟ್ರಾಕ್ಟರ್ ನೇಣು ಹಾಕಿಕೊಂಡ. ರಾಜ್ಯ ಮಟ್ಟದ ಅಥ್ಲೀಟ್ ವೆಂಕಟೇಶ್ ಎಂಬಾತನನ್ನು ಇದೇ ಗುಂಪು ಕೊಂದು ಹಾಕಿ ಆಕ್ಸಿಡೆಂಟ್ ಎಂದು ಕೇಸು ಮುಚ್ಚಿ ಹಾಕಿತು. ಈಗ ಮೋತಿನಾಯ್ಕ ಎಂಬ ಪ್ರಗತಿಪರ ಹೋರಾಟಗಾರನ ಮೇಲೆ ತನ್ನ ದಡಿದ್ದಪ್ಪಿ ಬೀರಿದ ಈ ಪುಂಡ ಪಡೆ. ದೂರಿನಲ್ಲಿ ಪರಮೇಶ್ವರ ನಾಯ್ಕನ ಹೆಸರು ಬರದಂತೆ ನೋಡಿಕೊಂಡ ಪೊಲೀಸರು ತಾವು ಶಾಸಕನ ಕುನ್ನಿಗಳು ಎಂದು ಸಾಬೀತು ಮಾಡಿವೆ.

ಅಕ್ಕಿ ಕಳ್ಳ ಸಾಗಾಣಿಕೆಯ 'ಕಿಂಗ್‌ಪಿನ್' ಎಂದೇ ಕುಖ್ಯಾತನಾಗಿರುವ ಶಾಸಕ ಪರಮೇಶ್ವರ ನಾಯ್ಕ ಎಲ್ಲ ಮೂಲೆಗಳನ್ನೂ ನೆಕ್ಕುತ್ತಾ ಕುಳಿತಿದ್ದಾನೆ. ಚನ್ನಗಿರಿ, ದಾವಣಗೆರೆಯಂತಹ ನೀರಾವರಿ ಪ್ರದೇಶಗಳನ್ನು ಬರಪೀಡಿತ ಎಂದು ಘೋಷಿಸಿದ್ದಾರೆ. ಆದರೆ ಬರದಿಂದ ನಲುಗುತ್ತಿರುವ ಹರಪನಹಳ್ಳಿಯನ್ನು ಆ ಪಟ್ಟಿಯಿಂದ ಹೊರಗಿಡಲಾಗಿದೆ.

ಗೂಂಡಾಗಿರಿಯಲ್ಲಿ ನಿರತನಾಗಿರುವ ಶಾಸಕನಿಗೆ [illegible] ನಿತ್ಯಮಂತ್ರ. ಜನರೇ [illegible] ಕಾಲ ಸನ್ನಿಹಿತವಾಗಿದೆ.

-[illegible]

ಬುದ್ಧ ಯಾರು? ಮೂರು ಕಾಲಿನ ಕತ್ತೆಯನ್ನು ನೋಡಿ

ಈ ಕಥೆಯಲ್ಲಿ ಜಾತಿಯ ಬಗ್ಗೆಯಾಗಲೀ, ಕೋಮಿನ ಬಗ್ಗೆಯಾಗಲೀ ನಾನು ಮಾತಾಡುವುದಿಲ್ಲ. ಅದರ ಅವಶ್ಯಕತೆಯೂ ಇಲ್ಲ ಬಿಡಿ. ಇತ್ತೀಚಿನ ಪತ್ರಿಕೆಗಳು ಸೂಚಿಸಿರುವಂತೆ "ಒಂದು ಕೋಮಿನವರು" ಹಾಗೂ "ಇನ್ನೊಂದು ಕೋಮಿನವರು" ಎಂದು ಹೇಳಿದರಾಯಿತು. ಅದಕ್ಕೇ ಇಲ್ಲಿಯ ಕಥಾನಾಯಕನಿಗೆ ಹೆಸರಿಲ್ಲ. ಬೇಕಿದ್ದರೆ ಅವನ ಜಾತಿ, ಕುಲ, ಗೋತ್ರ ಇತ್ಯಾದಿಗಳ ಬಗ್ಗೆ ನೀವೇ ತಲೆ ಕೆಡಿಸಿಕೊಳ್ಳಿ. ಈ ಕಥೆಯ ಮೂಲಕ ಕಂಡು ಹಿಡಿಯುತ್ತೇನೆ ಎಂದು ಹೊರಟಿರೋ, ವ್ಯರ್ಥ ಬಿಡಿ. ಶರ್ಟಿನ ಒಳಗೆ ಅವನು ಹಾಕಿಕೊಂಡ ಬನೀನು ಯಾವ ಗುರುತಿನದು ಎಂದು ಕಂಡು ಹಿಡಿಯುವಷ್ಟೇ ಇದೂ ಅಸಾಧ್ಯ. ಇರಲಿ, ಅವ ವಿಮೆಗೆ ಸಂಬಂಧಪಟ್ಟ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ. ಪ್ರತಿದಿನ ಹನ್ನೊಂದರಿಂದ ಸಂಜೆ ಐದು ಗಂಟೆಯ ತನಕ ತನ್ನ ಟೇಬಲಿನಲ್ಲಿ ಕೂತು ಅಂಕಿ ಸಂಖ್ಯೆಗಳನ್ನು ಪರಿಶೀಲಿಸುವ ಕೆಲಸ. ತಿಂಗಳ ಕೊನೆಗೆ ನೂರು ರೂಪಾಯಿಗಳ ಸಂಬಳದ ಲಕೋಟೆ ಅವನ ಕೈಗೆ ಬಂದು ಬೀಳುತ್ತಿತ್ತು. ಈಗೇನೋ ಅವ ಮಧ್ಯವಯಸ್ಕ. ಆದರೆ ಯೌವನದ ದಿನಗಳೇನೂ ಬೇರೆ ತರ ಇರಲಿಲ್ಲ ಬಿಡಿ. ಅದೇ ಟೇಬಲ್ಲಿನಲ್ಲಿ, ಅದೇ ಆಫೀಸಿನಲ್ಲಿ, ಅದೇ ಭಂಗಿಯಲ್ಲಿ ಕೂತು ಕೆಲಸ ಮಾಡಿ ಯೌವನದಿಂದ ಮಧ್ಯವಯಸ್ಸಿಗೆ ಜಾರಿದ್ದ. ಗಲ್ಲಿಯೊಂದರಲ್ಲಿ ಅವನ ಪುಟ್ಟ ಮನೆ. ಎರಡು ರೂಮು, ಹಜಾರ, ಒಬ್ಬಳು ಹೆಂಡತಿ, ನಾಲ್ಕು ಮಂದಿ ಮಕ್ಕಳಿರುವ ಅವನ ಸಂಸಾರಕ್ಕೆ ಅದು ಬೇಕಾದಷ್ಟು. ಯಾರಾದರೂ ಹೊರಗಿಂದ ಬಂದು ಉಳಿದರೆ ಸ್ವಲ್ಪ ಕಿಷ್ಕಿಂಧೆ ಅಂತನ್ನಿಸುತ್ತಿತ್ತು ಅಷ್ಟೇ. ಬೇಕಿದ್ದ ಅಂಗಡಿ ಪಂಗಡಿಗಳೆಲ್ಲವೂ ಹತ್ತಿರವೇ ಇದ್ದವು. ಮಕ್ಕಳ ಸ್ಕೂಲೂ ಸಹ ದೂರವಿಲ್ಲ. ಅವನ ಹೆಂಡತಿಗೆ ಸುತ್ತ ಮುತ್ತ ಗೆಳತಿಯರ ದಂಡೇ ಇತ್ತು. ಒಟ್ಟಿನಲ್ಲಿ ಸುಖೀ ಸಂಸಾರ.

ಅದೇನಾಯಿತೋ ಏನೋ, 1947 ರ ಅಕ್ಟೋಬರಿನ ನಂತರ ಸುತ್ತಮುತ್ತಲಿನ ಜನ ಮೈಯಲ್ಲಿ, ತಲೆಯಲ್ಲಿ ದೆವ್ವ ಹೊಕ್ಕಂತೆ ಆಡಲಾರಂಭಿಸಿದ್ದರು. ಸಾವಿರಾರು ಮೈಲಿ ದೂರದಲ್ಲಿ ಒಂದು ಗುಂಪು ಇನ್ನೊಂದು ಗುಂಪನ್ನು ಸಾಯಿಸಿತಂತೆ. ತಗೋ, ತಕ್ಷಣವೇ ಇಲ್ಲಿಯವರು ಸುತ್ತಮುತ್ತ ಇದ್ದವರನ್ನೇ ತರಿಯಲು ತೋಳೇರಿಸಿ ಹೊರಟರು. ಎಂಥಾ ಅಸಂಬಂದ್ಧ ಅಂತೀರಿ! ಎಲ್ಲೋ ನಡೆದ ಒಳ್ಳೆಯ ಕೆಲಸಕ್ಕೆ ಇಲ್ಲಿ ಮಾರುತ್ತರವಿರುವುದಿಲ್ಲ. ಅನಿಷ್ಟಗಳು ಮಾತ್ರ ಕಣ್ತೆರೆಯುವುದರಲ್ಲಿ ಎಷ್ಟೋ ಮೈಲಿಗಳಾಚೆ ಇರುವ ಇಲ್ಲೂ ಪವಾಡದಂತೆ ಘಟಿಸಿಬಿಡುತ್ತವೆ!

ನೆರೆಹೊರೆಯವರು ಪ್ರತಿದಿನ ಪತ್ರಿಕೆಗಳನ್ನು ಓದ ಓದುತ್ತಿದ್ದಂತೆ ಅವರ ಪಿತ್ಥವೂ ನೆತ್ತಿಗೇರುತ್ತಿದ್ದನ್ನ ನಮ್ಮ ಕಥಾನಾಯಕ ಗಮನಿಸುತ್ತಿದ್ದ. "ಇಲ್ಲಿರುವವರನ್ನೂ ಮಟ್ಟ ಹಾಕಬೇಕು", -ಯಾರೋ ಹೇಳುತ್ತಿದ್ದದ್ದು ಕಿವಿಗಪ್ಪಳಿಸಿತು. "ಹೆಂಗಸ್ರು, ಮಕ್ಕಳನ್ನೂ ಬಿಡಲ್ಲ ನೋಡಿ, ಎಂಥಾ ಕಟುಕರು!"- ಇನ್ಯಾರೋ ಹೇಳುತ್ತಿದ್ದರು. "ಸರಿ ಬಿಡಿ. ಮುಳ್ಳನ್ನ ಮುಳ್ಳಿಂದಲೇ ತೆಗೀಬೇಕು. ಅವರಿಗೆ ಅರ್ಥವಾಗುವ ಭಾಷೆಯಿಂದಲೇ ಚೆಂದಿ ಮಾಡ್ಬೇಕು. ಈ ನನ್ನ ಮಕ್ಕಳಿಗೆ ಇಲ್ಲದಿದ್ದರೆ ಬುದ್ದಿ ಬರೋಲ್ಲ" ಇನ್ಯಾರದ್ದೋ ಥಕಥೈ.

"ನೋಡೀ.... ಇಲ್ನೋಡೀ...ಸ್ವಲ್ಪ ನನ್ನ ಮಾತು ಕೇಳ್ತೀರಾ?" ಸಮಾಧಾನ ಹೇಳ ಹೊರಟ ನಮ್ಮ ಕಥಾನಾಯಕನಿಗೆ ಥಟ್ಟನೆ ಹೊಳೆಯಿತು. "ಅರೆ! ಹೌದಲ್ಲ? ಆಫೀಸಿನಲ್ಲಿ ತನ್ನ ಬಲಗಡೆಗೆ ಕೂರುವವ, ತನಗೆ ಪತ್ರಗಳನ್ನು ತಂದುಕೊಡುವ ಆ ಅಂಚೆಯವ, ಮೂಲೆಯಲ್ಲಿರೋ ಬೀಡಾ ಅಂಗಡಿಯವ, ಆ ಬ್ಯಾಂಕಿನ ಗೆಳೆಯ, ಎಲ್ಲರೂ ಇನ್ನೊಂದು ಕೋಮಿಗೆ ಸೇರಿದವರು! ಇಷ್ಟು ದಿನ ತನಗೆ ಹೊಳೆದದ್ದೇ ಇಲ್ಲ. ಅದರ ಅಗತ್ಯವೂ ಇರಲಿಲ್ಲ. ಎದುರು ಕಂಡಾಗ ಸೌಹಾರ್ದದಿಂದ ಮುಗುಳ್ನಕ್ಕು, ಕಷ್ಟ ಸುಖ ವಿಚಾರಿಸಿಕೊಂಡು, ಬೇಕಾದ ಸಹಾಯವನ್ನೂ ಮಾಡುವ ಈ ಸುತ್ತಮುತ್ತಲಿನ ಬಳಗದವರು ಈಗ "ಇನ್ನೊಂದು ಕೋಮಿನವರು"! ತನ್ನ ಕೋಮಿನವರು ಹ್ರಾಂ ಹ್ರೀಂ ಹ್ರೂಂ ಎಂದು ಆರ್ಭಟಿಸುವಾಗ ಆ ಅಂಚೆ ಇಲಾಖೆಯ ಗೆಳೆಯ ಬೀದಿಯಲ್ಲಿ ತರಿದು ಕೊಚ್ಚಲ್ಪಟ್ಟಂತೆ ಊಹಿಸಿಕೊಂಡು ನಡುಗಿದ. ಅವನ ಸಹೋದ್ಯೋಗಿ ಗೆಳೆಯನೊಬ್ಬನ ಪುಟ್ಟ ಮಗಳು, ತಾನು ಹೋದಾಗೆಲ್ಲ ನಿಂಬೆ ಶರಬತ್ತು ತರುತ್ತಿದ್ದ ಮುದ್ದು ಹುಡುಗಿ, ಕಲಿತಿದ್ದ ಹಾಡು, ಕುಣಿತವೆಲ್ಲವನ್ನೂ ಅವನೆದುರು ಮಾಡಿ ತೋರಿಸಿ ಶಭಾಷ್‌ಗಿರಿ ಪಡೆಯುತ್ತಿದ್ದ ಆ ಬಾಲೆ ತನ್ನ ಪೆನ್ಸಿಲ್, ರಬ್ಬರ್‌ಗಳಿದ್ದ ಪುಟ್ಟ ಬಾಕ್ಸನ್ನು ಹಿಡಿದು ಸ್ಕೂಲಿಗೆ ಹೋಗುತ್ತಿರುವಾಗ ತನ್ನ ಕೋಮಿನ ಪುಂಡರು ಅವಳನ್ನು ಅಟ್ಟಿಸಿಕೊಂಡು ಹೋಗುತ್ತಿರುವ ದೃಶ್ಯವಂತೂ ಅವನನ್ನು ಥರಗುಟ್ಟಿಸಿತು. "ಅಯ್ಯೋ! ದೇವರೇ! ಏನೂ ಆಗದಿರಲಿ..." ನೆರೆ ಹೊರೆಯವರಿಗೆ ಸಮಾಧಾನ ಹೇಳಲು ಪ್ರಯತ್ನಿಸಿದ, "ನೋಡೀ, ಎಲ್ಲೋ ಏನೋ ಆಯ್ತು ಅಂದ್ರೆ ಇಲ್ಲೂ ಹಾಗೇ ಆಗ್ಬೇಕಂತಿಲ್ಲವಲ್ಲಾ? ಏನೂ ಆಗೋಲ್ಲ... ಸುಮ್ಮನಿರಿ..." ತಾನು ಹೇಳುತ್ತಿರುವುದು ಸುಳ್ಳು ಎಂದು ಅವನಿಗೂ ಗೊತ್ತಿತ್ತು. ತನ್ನ ಕಡೆಯವರು ಚಾಕು, ಚೂರಿ, ದೊಣ್ಣೆಗಳನ್ನು ಪೇರಿಸಿಡುತ್ತಿದ್ದದ್ದು ಅವನಿಗೆ ತಿಳಿಯದೆ? ಕಾರ್ಯಾಚರಣೆಯ ವ್ಯವಸ್ಥಿತ ರೂಪವೊಂದು ಸಿದ್ಧವಾಗುತ್ತಿದ್ದನ್ನು ನೋಡಿ ಸಹಿಸುವ ಶಕ್ತಿ ಅವನ ಸೂಕ್ಷ್ಮ ಮನಸ್ಸಿಗೆ ಇರಲಿಲ್ಲ. ಬೆಂಕಿ, ಚಾಕು, ಚೂರಿ, ಲೂಟಿ ಇವೇ ಕಿವಿಗೆ ಬೀಳುತ್ತಿದ್ದ ಪದಗಳು. ಸೂಚನೆಗಳಿಗೆ, ದುಡ್ಡಿಗೆ ಅವನ ಮಾಮನ ಮನೆಯಲ್ಲಿ ಜಮಾಯಿಸುತ್ತಿದ್ದ ಪುಂಡ ಪೋಕರಿಗಳು ಅವನ ಕಣ್ಣಿಗೆ ಬೀಳುತ್ತಿದ್ದರು. "ನಾವಾಗೇ ಏನೂ ಮಾಡೋಲ್ಲ, ಆದರೇ ಅವರಾಗೇ ಏನಾದ್ರೂ ಬಾಲ ಅಲ್ಲಾಡಿಸಿದ್ರೋ...ಕಚಕ್! ಅವರ ಭಾಷೆಯಲ್ಲೇ ಉತ್ತರ ಕೊಡೋಣ..." ಅವನ ಮಾಮ ಆಗಾಗ್ಗೆ ಸೂಚನೆ ಕೊಡುತ್ತಿದ್ದದ್ದು ಕೇಳಿಸುತ್ತಿತ್ತು.

ದಿನದಿಂದ ದಿನಕ್ಕೆ ಬದುಕು ಅಸಹನೀಯವಾಗಲಾರಂಭಿಸಿತು. ಇಲ್ಲಿಯತನಕ ಇದ್ದ ಸೀದಾತನ ಎಲ್ಲಿ ಎಗರಿಹೋಯಿತು? ಪ್ರತಿಯೊಬ್ಬರಲ್ಲೂ ಏನೋ ಮೋಸ, ತಟವಟ. ಪ್ರತಿಯೊಬ್ಬರ ಮುಖದಲ್ಲೂ ಏನೋ ಸಣ್ಣಗಿನ ಸದ್ದೊಂದನ್ನು ಆಲಿಸುವವನಂತೆ ಕಿವಿಗಳನ್ನು ಚುರುಕಾಗಿ ಹೊರಳಿಸುತ್ತಿದ್ದ. ಆಗಬಾರದ್ದು ಥಟ್ಟನೆ ಆಗಿಬಿಟ್ಟರೆ? ಮೆಲ್ಲಗೆ ಕಳ್ಳ ಹೆಜ್ಜೆಯಿಡುತ್ತ ಬಂದ ಯಾರೋ ಬಾಗಿಲು ಒಡೆದು ಒಳಗೆ ನುಗ್ಗಿದರೆ? ಪುಟ್ಟ ಮಗಳ ಮತ್ತು ಹೆಂಡತಿಯ ಆಕ್ರಂದನ ಕೇಳಿದವನಂತೆ ಝುಲ್ಲನೆ ಬೆವರುತ್ತಿದ್ದ. ರಾತ್ರಿಯಿಡೀ ಅಸ್ಪಷ್ಟ ಭಯ, ನಡುಕ. ಆಯಾಸದಲ್ಲಿ ನಿದ್ದೆಯ ಮಂಪರಿಗೆ ಜಾರಿದರೂ ದೊಂಬಿಯೊಂದರ ಗಲಾಟೆಯನ್ನು ಕೇಳಿದವನಂತೆ ಫಕ್ಕನೆ ಎಚ್ಚರಾಗುತ್ತಿದ್ದ. ಎಲ್ಲೋ ನಾಯಿಯೊಂದು ಬೊಗಳುತ್ತಿದ್ದದ್ದನ್ನು ಕೇಳಿ ಥಟ್ಟನೆ ಎದ್ದು ದೂರದಲ್ಲೆಲ್ಲೋ ಕಾಣಿಸಬಹುದಾದ ಬೆಂಕಿಯ ಜ್ವಾಲೆಗಳಿಗೆ ಕಿಟಕಿಯಲ್ಲಿ ಇಣುಕುತ್ತಿದ್ದ. ಎಚ್ಚರಾದ ಹೆಂಡತಿ ನಿದ್ದೆಯ ಧ್ವನಿಯಲ್ಲಿ "ಏನ್ರೀ...ಅದೂ..." ಎಂದು ಕೇಳುತ್ತಿದ್ದಳು. "ಏನಿಲ್ಲ..ಮಲಕ್ಕೋ..." ಹಾಸಿಗೆಗೆ ಹಿಂತಿರುಗುತ್ತಾ ಹೇಳುತ್ತಿದ್ದ. ಸಧ್ಯ ಇಲ್ಲಿಯ ತನಕ ಏನೂ ಆಗಿಲ್ಲ, ಏನೇ ಆಗಲಿ, ಸೌದೆ ರೂಮಿನಿಂದ ಒಂದು ಮಚ್ಚೊಂದನ್ನು ತಂದು ಕೈಗೆಟುಕುವಂತೆ ಇಟ್ಟುಕೊಳ್ಳುವುದು ವಾಸಿ. ಲಾರಿಯೋ, ಕಾರೋ ಸುಯ್ಯನೆ ಹೋದರೆ ಧಢ್ಡನೆ ಎದ್ದು ಪೋಲೀಸ್ ಲಾರಿ ಏನಾದರೂ ದೊಂಬ ಹತ್ತಿದ ಜಾಗಕ್ಕೆ ಹೋಗುತ್ತಿದೆಯೆ ಎಂದು ಪರೀಕ್ಷಿಸಲು ಕಿಟಕಿಯ ಬಳಿ ತಾಸುಗಟ್ಟಲೆ

ಜಮಾಯಿಸ್ತಾ ಇರೋದು ನಮಗೆ ಗೊತ್ತಿಲ್ಲ ಅಂದು... ಕೊಂಡಿದೀಯಾ? ಆ ಹೊತ್ತಿನಲ್ಲಿ ಏನಂಥಾ... ಉಸಾಬರಿ?"

"ಹಗಲಲ್ಲಿ ಹಲವಾರು ಕೆಲಸಗಳಿರಬಹುದು."

"ಅದೆಲ್ಲಾ ಗೊತ್ತಿಲ್ಲ, ಹೊತ್ತಲ್ಲದ ಹೊತ್ತಲ್ಲಿ ಜ... ಒಟ್ಟುಗೂಡೋದು ನಮಗೆ ಇಷ್ಟವಿಲ್ಲ, ನಾವಾಗೇ... ಅವರ ಮೈ ಮೇಲೆ ಬೀಳೋಕೆ ಹೋಗೋಲ್ಲ, ಆದ್ರೆ ಅವರೇ ಏನಾದ್ರೂ ಕಾಲು ಕೆರೆದುಕೊಂಡು ಬಂದ್ರೋ...ಮಟಾಶ್! ಕೆಲಸ ಮುಗಿಸೋದಕ್ಕೆ ಕೆಲವೇ ಗಂಟೆಗಳು ಸಾಕು. ಬಟನ್ ಒತ್ತಿದಂತೆ ಧಮಾರ್... ಹೇಳಿದ್ನಲ್ಲ? ನಾವಾಗೇ ಏನೂ ಮಾಡಲ್ಲ"

ಇಪ್ಪತ್ತೊಂಬತ್ತರಂದು ಮುಂಜಾಗ್ರತಾ ಕ್ರಮವಾಗಿ... ಅಂಗಡಿ ಮುಗ್ಗಟ್ಟುಗಳು ಮುಚ್ಚಿದ್ದವು. ಮಕ್ಕಳಿಗೂ... ಸ್ಕೂಲಿಗೆ ರಜೆ. "ಇವತ್ತು ಸ್ಕೂಲಿಲ್ಲ. ಯಾಕೆ ಗೊತ್ತಾ... ಅಪ್ಪಾ? ಬೊಂಬಾಟ್ ಫೈಟಿಂಗ್ ಅಂತೆ!" ಮಕ್ಕಳ... ಧ್ವನಿಯಲ್ಲಿದ್ದ ಉತ್ಸಾಹವನ್ನು ನೋಡಿ ಅವನಿಗೆ ನಗ... ಬೇಕೋ, ಅಳಬೇಕೋ ಗೊತ್ತಾಗಲಿಲ್ಲ. ಅವನು ಆಫೀಸಿಗೆ... ಹೋಗೋದು ಹೆಂಡತಿಗೆ ಇಷ್ಟೂ ಇಷ್ಟವಿರಲಿಲ್ಲ... "ನೋಡೀ, ಅಕ್ಕಪಕ್ಕದೋರು ಯಾರೂ ಆಫೀಸಿಗೆ... ಹೋಗ್ತಾ ಇಲ್ಲ, ನೀವು ಮಾತ್ರ ಯಾಕೆ ಹೋಗ...



ದೇಶದ ವಿಭಜನೆಯ ಸಮಯದಲ್ಲಿ ಖ್ಯಾತ ಛಾಯಾಗ್ರಾಹಕ ಮಾರ್ಗರೆಟ್ ಬರ್ಕ್‌ವೈಟ್ ತೆಗೆದ ಚಿತ್ರ

ಆ ಕೋಮಿನವರು, ಈ ಕೋಮಿನವರು

ಈ ಕಥೆಯಲ್ಲಿ ಜಾತಿಯ ಬಗ್ಗೆಯಾಗಲೀ, ಕೋಮಿನ ಬಗ್ಗೆಯಾಗಲೀ ನಾನು ಮಾತಾಡುವುದಿಲ್ಲ. ಅದರ ಅವಶ್ಯಕತೆಯೂ ಇಲ್ಲ ಬಿಡಿ. ಇತ್ತೀಚಿನ ಪತ್ರಿಕೆಗಳು ಸೂಚಿಸಿರುವಂತೆ "ಒಂದು ಕೋಮಿನವರು" ಹಾಗೂ "ಇನ್ನೊಂದು ಕೋಮಿನವರು" ಎಂದು ಹೇಳಿದರಾಯಿತು. ಅದಕ್ಕೇ ಇಲ್ಲಿಯ ಕಥಾನಾಯಕನಿಗೆ ಹೆಸರಿಲ್ಲ. ಬೇಕಿದ್ದರೆ ಅವನ ಜಾತಿ, ಕುಲ, ಗೋತ್ರ ಇತ್ಯಾದಿಗಳ ಬಗ್ಗೆ ನೀವೇ ತಲೆ ಕೆಡಿಸಿಕೊಳ್ಳಿ.

ಕೊಲೆಗಡುಕರ ಕಳೆ! ಬಲಿಯನ್ನು ನೋಡುವ ನರಭಕ್ಷಕರ ತರಹ ಒಬ್ಬರು ಇನ್ನೊಬ್ಬರನ್ನು ನೋಡುತ್ತಿದ್ದ ರೀತಿ!! ಬೀದಿಯಲ್ಲಿ ನಡೆಯುವಾಗಲೂ ಕಳ್ಳ ದೃಷ್ಟಿ ಬೀರುತ್ತಾ ನಡೆಯುತ್ತಿದ್ದ ರೀತಿ ಹೇಸಿಗೆ ಹುಟ್ಟಿಸುತ್ತಿತ್ತು. ಗಾಳಿಯ ತುಂಬ ಭಯ, ಸಂಶಯದ ಗಬ್ಬು ನಾತ. ಅವನಿಗೆ ಯಾರನ್ನೂ ಭೇಟಿ ಮಾಡಲೂ ಹಿಂಜರಿಕೆ. ಏನೋ ಹೇಳಿದ್ದು ಇನ್ನೇನೋ ಆಗಿ, ಇನ್ನಷ್ಟು ಕಥೆಗಳು ಹುಟ್ಟಿಕೊಂಡುಬಿಟ್ಟರೆ? ಒಬ್ಬರಲ್ಲಾ ಒಬ್ಬರು ಏನಾದರೂ ವರದಿಯನ್ನು ಹೊತ್ತೇ ಬರುತ್ತಿದ್ದರು. "ಏನಂತೆ ಗೊತ್ತಾ? ನಿನ್ನೆ ಸಾಯಂಕಾಲ ಆ ದಾರೀಲಿ ಸೈಕಲ್ ಮೇಲೆ ಹೋಗುತ್ತಿದ್ದ ಒಬ್ಬನನ್ನು ಯಾರೋ ಇರಿದರಂತೆ. ಇನ್ನಷ್ಟು ಗಲಾಟೆ ಆಗುತ್ತೆ ಅನ್ನೋ ಭಯದಲ್ಲಿ ಪೋಲೀಸ್ನೋರು ಎಲ್ಲಾನೂ ಮುಚ್ಚಿ ಹಾಕ್ತಾ ಇದಾರಂತೆ. "ಅಥವಾ" ಇವತ್ತು ಒಬ್ಬ ಹೆಂಗಸಿನ ಮೇಲೆ ಕೈ ಮಾಡಿದ್ರಂತೆ" ಅಂತಲೋ, "ಹುಡುಗಿಯರ ಸ್ಕೂಲಿಗೆ ನುಗ್ಗಿದ್ರಂತೆ. ನಾಲ್ಕು ಹೆಣ್ಣು ಮಕ್ಕಳ ಪತ್ತೇನೇ ಇಲ್ವಂತೆ. ಈ ಪೋಲೀಸರೂ ಇದಾರೆ ನೋಡಿ ದಂಡಪಿಂಡಗಳು. ನಾವೇ ಏನಾದ್ರೂ ಮಾಡ್ಬೇಕು ನೋಡಿ.." ಹೀಗೆ ಹತ್ತು ಹಲವಾರು ಅಂತೆ ಕಂತೆಗಳು. ಪ್ರತಿ ಸಲವೂ ಅವನಿಗೆ ಏನೋ ಗಂಟಲಲ್ಲಿ ಸಿಕ್ಕಿ ಹಾಕಿಕೊಂಡಂತ ಅನುಭವ, ಮೈಯುದ್ದಕ್ಕೂ ಹರಡುತ್ತಿದ್ದ ಜ್ವರ. ತಿಂದ ಅನ್ನ ನಾಲಗೆಗೆ ಕಹಿಯಾಗುತ್ತಿತ್ತು, ಹೆಂಡತಿ ಮಕ್ಕಳ ಮುಗ್ಧ ಮುಖಗಳನ್ನು ನೋಡಿದಾಗೆಲ್ಲಾ "ಅಯ್ಯೋ ದೇವರೇ! ಇವರಿಗೆಲ್ಲ ಯಾವ ಗತಿ ಕಾದಿದೆಯೋ ಏನೋ!" ಎಂದು ವಿಹ್ವಲನಾಗುತ್ತಿದ್ದ.

ರಾತ್ರಿಯ ನಿದ್ದೆ ಯಾವಾಗಲೋ ಪರಾರಿಯಾಗಿತ್ತು.

ಕಥೆ

ಕನ್ನಡಕ್ಕೆ : ಸುಕನ್ಯಾ ಕನಾರಳ್ಳಿ

(ಮೂಲ: ಆರ್. ಕೆ. ನಾರಾಯಣ್ ಅವರ ಸಣ್ಣ ಕಥೆ "ಎನದರ್ ಕಮ್ಯೂನಿಟಿ")

ನಿಲ್ಲುತ್ತಿದ್ದ. ತಲ್ಲಣ, ತಳಮಳಗಳ ನಡುವೆ ಜರ್ಝರಿತನಾದವನಿಗೆ ಬೆಳಕು ಹರಿದರೆ ಸ್ವಲ್ಪ ಹಾಯೆನ್ನಿಸುತ್ತಿತ್ತು.

ಎಲ್ಲರ ಬಾಯಲ್ಲೂ ಒಂದೇ ಮಾತು. 29 ನೆಯ ತಾರೀಖು ಬರುವ ಬುಧವಾರ ಏನೋ ಆಗಲಿದೆಯಂತೆ. ಆವತ್ತಿನ ದಿನ ಮುಖಾಮುಖಿಯಂತೆ. 29 ನೆಯ ತಾರೀಖೇ ಯಾಕೆ? ಯಾರಿಗೂ ಗೊತ್ತಿಲ್ಲ, ಆದರೆ ಎಲ್ಲರ ಬಾಯಲ್ಲೂ ಅದೇ ಸುದ್ದಿ. ಆಫೀಸಿನಲ್ಲೂ, ಇಪ್ಪತ್ತೊಂಬತ್ತು ಬಿಟ್ಟರೆ ಬೇರೆ ಮಾತೇ ಇಲ್ಲ. ಅವನ ಮಾಮನ ಮನೆಯಲ್ಲಿ ಬಿರುಸಾದ ಚಟುವಟಿಕೆಗಳು ತೀವ್ರ ಸ್ಥಾಯಿಗೇರಿದ್ದವು. "ಅಬ್ಬ! ಸಧ್ಯ ಈ ಬರುವ ಇಪ್ಪತ್ತೊಂಬತ್ತರಂದು ಏನಾದ್ರೂ ಒಂದು ಗತಿ ಕಾಣುತ್ತಲ್ಲ! ಈ ಊರನ್ನ ಹೆಂಗೆ ಶುದ್ಧ ಮಾಡ್ತೀವಿ, ನೋಡೋವಂತೆ. ಎಷ್ಟು ಮಹಾ ಜನ ಇದಾರೆ ಅಂದುಕೊಂಡಿದೀಯ? ಒಂದು ಲಕ್ಷ? ಒಂದೂವರೆ ಲಕ್ಷ? ಆದೇ ನಾವು ಎಷ್ಟು, ಗೊತ್ತಾ?" ಅವನು ಉದುರಿಸುತ್ತಿದ್ದ ಅಂಕೆಸಂಖ್ಯೆಗಳ ಹೊಡೆತಕ್ಕೆ ಇವನು ಮೂರ್ಛೆ ಹೋಗುವುದೊಂದು ಬಾಕಿ.

"ಶೂನ್ಯ ವೇಳೆ" ಸಮೀಪಿಸುತ್ತಿತ್ತು. ತಲ್ಲಣದ ನಡುವೆಯೂ ಅವನಿಗೆ ಒಮ್ಮೊಮ್ಮೆ ಕುತೂಹಲವೆನ್ನಿಸುತ್ತಿತ್ತು. ಹೌದು, ಕಿಡಿ ಹೇಗೆ ಹತ್ತಿಸುತ್ತಾರೆ? ಈ ಕೋಮಿನವ ಆ ಕೋಮಿನವನೊಬ್ಬನಿಗೆ ನಿರ್ದಿಷ್ಟ ಗಳಿಗೆಯಲ್ಲಿ ಕೆನ್ನೆಗೆ ಹೊಡೆದು, ನಾಟಕೀಯವಾಗಿ ಶುರು ಮಾಡುತ್ತಾರೆಯೆ? "ಆಕಸ್ಮಾತ್ ಏನೂ ನಡೆಯದಿದ್ರೆ?" ಅವನ ಮಾಮನ ಉತ್ತರ ಸಿದ್ಧವಿತ್ತು, "ಅದು ಹೇಗೆ ಏನೂ ನಡೆಯೋದಿಲ್ಲ? ಮಧ್ಯ ರಾತ್ರಿಯ ನಂತರ ಅವರೆಲ್ಲ ಗುಟ್ಟಾಗಿ

ಬೇಕೂ?" ಜೋರಾಗಿ ನಕ್ಕು ಮಾತು ಹಾರಿಸಲು ಪ್ರಯತ್ನಿಸಿದ. "ನೋಡೂ, ನಿಂಗೆ ಅಷ್ಟು ಭಯ... ಇದ್ರೆ ಬಾಗಿಲು ಭದ್ರ ಮಾಡಿಕೊಂಡು ಮನೆ ಒಳಗೇನೆ ಇರು." ರೇಗಿಸುವ ಧ್ವನಿಯಲ್ಲಿ ಹೇಳಿದಾಗ ಹೆಂಡ... ಕೆನ್ನೆಯುಬ್ಬಿಸಿದಳು. "ನಮಗ್ಯಾಕ್ರೀ ಭಯ? ನಮ್ಮ ಮಾಮನೇ ಇಲ್ಲಿರೋವಾಗ ಭಯ ಗಿಯ ಯಾಕೆ?"

ಆಫೀಸಿನಲ್ಲಿ ಬಾಸ್ ಅಂತೂ ಇದ್ದರು. ಉಳಿದವರ... ಹೆಚ್ಚು ಮಂದಿ ನಾಪತ್ತೆ. ಕ್ಯಾಶುಯಲ್ ರಜೆ... ದಂಡಿಯಾಗಿ ಅರ್ಜಿಗಳು ಬಂದಿದ್ದವು. ಹಠಾತ್ತಾ... ಎಲ್ಲರಿಗೂ "ತುರ್ತಾದ ಸ್ವಂತ ಕೆಲಸ". ಬಂದ ಅಷ್ಟೋ... ಇಷ್ಟೋ ಮಂದಿ ಆ ದಿನ ಏನಾಗಬಹುದು ಎಂದು... ಚರ್ಚಿಸುತ್ತಾ ಹರಟೆಯಲ್ಲಿ ಮುಳುಗಿದರು. ಗಾ... ಸುದ್ದಿಗಳಿಂದ ಅವನ ತಲೆ ಗಿರ್ರೆನ್ನುತ್ತಿತ್ತು. ಯಾ... ಮಾತೂ ಬೇಡವಿತ್ತು. ತಲೆ ತಗ್ಗಿಸಿ ಕೆಲಸದ... ಮುಳುಗಲು ಪ್ರಯತ್ನಿಸಿದ. ಎಂಥಾ ಭರಭ... ಕೆಲಸವೆಂದರೆ ಮಾಡಲು ಕೆಲಸವೇ ಉಳಿಯುತ್ತಿ... ನಾಲ್ಕು ವರ್ಷಗಳ ಹಿಂದಿನ ಕಡತಗಳನ್ನು ಗೋ... ತೆಗೆದು ಕ್ಷುಲ್ಲಕ ವಿವರಗಳನ್ನು ಪರಿಶೀಲಿಸುತ್ತಾ ಕೂ... ಕಡತಗಳನ್ನು ಆಚೆ ಇಟ್ಟು ಏಳುವ ಹೊತ್ತಿ... ಏಳೂವರೆಯಾಗಿತ್ತು.

ಮನೆ ತಲುಪುವುದು ಹೇಗೆ ಎಂಬ ಯೋಚ... ಯಲ್ಲಿ ಯಾಕೋ ತಲ್ಲಣಿಸಿದ. ಹೆಂಡತಿ, ಮಕ್ಕ... ಗಾಬರಿ ಬಿದ್ದಿದ್ದರೆ? ಕಡತದ ಅಂಕೆಸಂಖ್ಯೆಗಳ ಸುಳಿಯ... ತಲೆ ಸತ್ತಂತಿತ್ತು. ಕೆಲಸ ಮುಗಿಯುವ ತನ... ಗೊತ್ತಾಗಿರಲಿಲ್ಲ. ಈಗ ಆದಷ್ಟೂ ಬೇಗ ಮ... ಸೇರಬೇಕೆಂಬ ತವಕ ಅವನನ್ನು ಆವರಿಸಿಕೊಂಡಿತು... ದಿನ ನಿತ್ಯ ಹೋಗುತ್ತಿದ್ದ ದಾರಿ ದೀರ್ಘವಾಗಿ ಕಂಡಿತು... ಆ ದಾರಿಯಲ್ಲಿ ಹೋದರೆ ಗಂಟೆಗಟ್ಟಲೆ ತಡವಾ... ಬಹುದು ಎಂದು ಅವನ ಅಸ್ವಸ್ಥ ಮನಸ್ಸು ಹೇಳಿತು... ಆಫೀಸಿನ ಎದುರಿಗೇ ಇರುವ ಗಲ್ಲಿಯೊಂದನ್ನು ಹಿಡಿದ... ಬೇಗ ಮನೆ ಸೇರಿದರೆ ಹೇಗೆ? ಅವಸರ ಇದ್ದಾಗೆ... ಅವನು ಹಿಡಿಯುತ್ತಿದ್ದದ್ದು ಅದೇ ದಾರಿ. ಉಳಿದ... ಚರಂಡಿ ದುರ್ನಾತ ದಿಂದ, ಕಿಚಗುಡುವ ಬೀ... ನಾಯಿಗಳಿಂದ ತುಂಬಿ ತುಳುಕುವ ಆ ಕಿರಿದಾ...

ಗಲ್ಲಿಯಲ್ಲಿ ಅವನು ಹೋಗುತ್ತಿದ್ದುದ್ದೇ ಇಲ್ಲ, ಕೈಗಡಿಯಾರದ ಕಡೆಗೊಮ್ಮೆ ದೃಷ್ಟಿ ಬೀರಿ ಕತ್ತಲು ತುಂಬಿದ್ದ ಗಲ್ಲಿಗಿಳಿದ. ಸ್ವಲ್ಪ ದೂರ ಹೋಗಿದ್ದನೋ ಇಲ್ಲವೋ, ಎದುರಿಗೊಬ್ಬ ಸೈಕಲ್ಲಿನಲ್ಲಿ ಬಂದ. ಅವ ಯಾವ ಕಡೆಗೆ ತಿರುಗುತ್ತಿದ್ದಾನೆ ಎಂದು ಇವನಿಗೆ ಗೊತ್ತಾಗದೇ, ಇವ ಯಾಕೆ ಹೀಗೆ ನಲಿಯುತ್ತಿದ್ದಾನೆ ಎಂದು ಅವನಿಗೆ ಗೊತ್ತಾಗದೇ, ಇಬ್ಬರೂ ಒಟ್ಟಿಗೇ ಬಲಕ್ಕೋ, ಎಡಕ್ಕೋ ತಿರುಗಿ, ಕೊನೆಗೆ ಅವ ಇವನ ಮೇಲೇ ಸೈಕಲ್ ನುಗ್ಗಿಸಿದ್ದೂ ಆಯ್ತು, ಸೀಟಿನಿಂದ ಕೆಳಗೆ ಬಿದ್ದಿದ್ದೂ ಆಯ್ತು. ರಸ್ತೆಯ ಧೂಳನ್ನು ಇಬ್ಬರೂ ಕೊಡವಿಕೊಳ್ಳುತ್ತಾ ಮೇಲೆದ್ದರು. ನಮ್ಮ ಕಥಾನಾಯಕನ ಬಿಗಿದ ನರಗಳು ಫಟ್ ಎಂದು ಬಿರಿದು ಭೋರಾಡಿದವು. "ಸರಿಯಾಗಿ ನೋಡೀ ಮಾಡಿ ಓಡಿಸೋದಕ್ಕಾ ಗೊಲ್ವಾ?"

ಕಷ್ಟ ಪಟ್ಟು ಎದ್ದು ಕೂರುತ್ತಿದ್ದ ಸೈಕಲ್ಲಿನವನೂ ಕಿರುಚಿದ: "ಸೈಕಲ್ ಬರ್ತಾ ಇದ್ದಿದ್ದು ಕಾಣಿಸ್ಲಿಲ್ವಾ? ಕಣ್ಣು ಕಾಣಿಸುತ್ತೋ ಹೆಂಗೆ?"

"ನನಗೇ ಕಣ್ಣು ಕಾಣಿಸಲ್ಲವಾ? ನಿನ್ನ ಸೈಕಲ್ಲಿಗೆ ದೀಪ ಎಲ್ಲಿ?"

"ಅದೆಲ್ಲಾ ಕೇಳೋದಿಕ್ಕೆ ನೀನ್ಯಾರೋ?" ಸೈಕಲ್ಲಿನವ ಇವನ ಮೂತಿಗೆ ರಪ್ಪನೆ ಬಾರಿಸಿದ. ಪೂರ್ತಿ ಹುಚ್ಚಾದ ಇವ ಅವನ ಹೊಟ್ಟೆಗೆ ರೂಥಿಸಿ ಒದ್ದ. ಸುತ್ತ ಜನ ಜಮಾಯಿಸುವುದಕ್ಕೆ ತಡವಾಗಲಿಲ್ಲ. "ನಮ್ಮ ಗಲ್ಲೀಗೆ ಬಂದು ನಮ್ಮನ್ನೇ ರುಮಾರಿಸ್ತಾನೆ ನೋಡು. ನಾಲಕ್ಕು ಇಕ್ಕಿದ್ರೆ ಸರಿಯಾಗ್ತಾನೆ. ಹೇಡಿಗಳು ಅಂದುಕೊಂಡು ಬಿಟ್ಟಿದಾರೆ ನಮ್ಮನ್ನೆಲ್ಲ." ಅರಚಾಟ ಜಾಸ್ತಿಯಾಗುತ್ತಲೇ ಹೋಯಿತು. ಇವನಿಗೆ ತಲೆ ಧಿಮ್ಮೆನ್ನಲಾರಂಭಿಸಿತು. ಯಾರೋ ದೊಣ್ಣೆಯಿಂದ ಒಂದೇಟು ಬೀಸಿ ದರು. ಇನ್ಯಾರೋ ಕೈಯಿಂದ ರಪ್ಪನೆ ಹೊಡೆದರು. ಚಾಕುವೊಂದು ಫಳ್ಳನೆ ಕತ್ತಲೆಯಲ್ಲೂ ಹೊಳೆಯಿತು!

ಅವನಿಗೆ ತನ್ನ ಅಂತ್ಯ ಹತ್ತಿರ ಬರುತ್ತಿದೆ ಅಂತನ್ನಿಸಿತು. ಯಾವುದೋ ವಿಲಕ್ಷಣ ಧೈರ್ಯ ತನ್ನೊಳಗೆ ನುಗ್ಗುತ್ತಿದೆ ಅಂತಲೂ ಅನ್ನಿಸಿತು. ಅಪಾರ ನಿರ್ಲಿಪ್ತತೆಯಿಂದ ಆ ಗಳಿಗೆಯನ್ನೆದುರಿಸಲು ಸನ್ನದ್ಧನಾದ. ಪರಿಸ್ಥಿತಿಯ ಹುಚ್ಚುತನವನ್ನು ಸುತ್ತ ಇದ್ದವರಿಗೆ ಅರ್ಥ ಮಾಡಿಸಲು ಯತ್ನಿಸಿದ. ಈ ವಿಪರೀತಗಳನ್ನು ತಕ್ಷಣ ನಿಲ್ಲಿಸಿ ಎಂದು ಕೂಗಿ ಹೇಳಲು ಪ್ರಯತ್ನಿಸಿದ. ಗಂಟಲಿನಿಂದ ಧ್ವನಿಯೇ ಹೊರಡಲಿಲ್ಲ. ಎಲ್ಲಾ ಕಡೆಯಿಂದ ಜನ ಅವನನ್ನು ನೂಕುತ್ತಿದ್ದರು. ಉಸಿರಾಡಲೂ ಕಷ್ಟವೆನ್ನಿಸಿತು. ಪ್ರತಿಯೊಬ್ಬರೂ ಹೇಗಾದರೂ ಅವನ ಮೇಲೆ ಮುಗಿ ಬೀಳುವಂತೆ ಎಳೆದಾ ಡುತ್ತಿದ್ದರು. ಎಲ್ಲವೂ ಮಸುಕಾಗಲಾರಂಭಿಸಿತು. ಎಲ್ಲಿಯೋ ತೇಲುತ್ತಿರುವ ಅನುಭವ. ಹತ್ತಿರವಿದ್ದವರಿಗೆ ಹೇಳುತ್ತಿರುವಂತೆ ಗೊಣಗಿದ, "ಏನಾಯಿತು ಅಂತ ನಾನು ಯಾರ ಹತ್ತಿರವೂ ಬಾಯಿ ಬಿಡುವುದಿಲ್ಲ. ನನ್ನ ಮಾವನಿಗೂ ಹೇಳುವುದಿಲ್ಲ, ಗಲಾಟೆ ಶುರು ಆಗೋದಿಕ್ಕೆ ಒಂದೇ ಒಂದು ಮಾತು ಸಾಕು. ಬಟನ್ ಒತ್ತೋಕೆ ಕಾಯ್ತಾ ಇರ್ತಾರೆ. ನಾನೆಂದೂ ಹಾಗಾ ಗೋದಿಕ್ಕೆ ಬಿಡೋಲ್ಲ, ಈ ಊರು ಹತ್ತಿ ಉರಿ ಯುವುದಕ್ಕೆ ಬಿಡಬಾರದು. ನನ್ನ ಹೆಂಡತಿ, ಮಕ್ಕಳು, ನಿಮ್ಮ ಹೆಂಡತಿ ಮಕ್ಕಳು ಎಲ್ಲರೂ ಸುಟ್ಟು ಬೂದಿಯಾಗುತ್ತೇವೆ. ನನ್ನ ಕೋಮು, ನಿನ್ನ ಕೋಮು ಎನ್ನುವುದೆಲ್ಲಾ ಸುಳ್ಳು. ನಾವೆಲ್ಲ ಈ ನೆಲದ ಮಕ್ಕಳು ಎನ್ನುವುದೊಂದೇ ಸತ್ಯ. ಬೆಂಕಿಯನ್ನು ಯಾರು ಹಚ್ಚಿದರೇನು? ಕೊನೆಗೆ ಎಲ್ಲರನ್ನೂ ಸುಟ್ಟೇ ತೀರುತ್ತದೆ. ಇಲ್ಲ...ಹೀಗಾಗೋದಕ್ಕೆ ಬಿಡಬಾರದು...ಖಂಡಿತಾ ಬಿಡಬಾರದು. ಮಾಮನಿಗೆ ಆಫೀಸಿನ ಮೆಟ್ಟಿಲಿನಿಂದ ಬಿದ್ದೆ ಅಂತ ಸಮಜಾಯಿಷಿ ಹೇಳುತ್ತೇನೆ. ಅವ ಬಟನ್ ಒತ್ತಲು ನಾನು ಬಿಡಲಾರೆ. ನನ್ನಾಣೆಗೂ.. ನಿಮ್ಮಾಣೆಗೂ..."

ಆಗಬಾರದ್ದು ಆಗಿಯೇ ಹೋಯಿತು. ಆ ಗಲ್ಲಿಯಲ್ಲಿ ನಡೆದ ಘಟನೆ ಎರಡು ಗಂಟೆಗಳಲ್ಲಿ ಇಡೀ ಊರನ್ನು ಹಬ್ಬುತ್ತು, ಕಾಯುತ್ತಿದ್ದ ಈ ಕಡೆಯ ಮಾಮಂದಿರು ಮತ್ತು ಆ ಕಡೆಯ ಮಾಮಂದಿರು ಬಟನ್ ಒತ್ತಿಯೇ ಬಿಟ್ಟರು. ಆಮೇಲೆ ಏನಾಯಿತು ಎನ್ನುವುದು ಇನ್ನೊಂದು ಘೋರ ಕಥೆ. ಮಾತಾಡುವ ಶಕ್ತಿಯಿದ್ದಿದ್ದರೆ ನಮ್ಮ ಕಥಾನಾಯಕ ಸುಳ್ಳೊಂದನ್ನು ಹೇಳಿ ಎಲ್ಲ ಅನಾಹುತವನ್ನೂ ತಪ್ಪಿಸುತ್ತಿದ್ದನೋ ಏನೋ. ಆದರೆ ಅವನ ಬಾಯಿಂದ ಒಂದು ಶಬ್ದವೂ ಹೊರಡಲಾಗಲಿಲ್ಲ, ಆ ಗಲ್ಲಿಯ ಹಳ್ಳವೊಂದರಲ್ಲಿ ಬಿದ್ದಿದ್ದ ಅವನ ದೇಹ ಮಾರನೆಯ ದಿನ ಪೊಲೀಸರಿಗೆ ಸಿಕ್ಕಿತು. ಅವನ ಶರ್ಟಿನ ಜೇಬಿನಲ್ಲಿದ್ದ ಐಡೆಂಟಿಟಿ ರೇಷನ್ ಕಾರ್ಡಿನ ಮೂಲಕ ಅವನ ಗುರುತನ್ನು ಹಚ್ಚಲು ಸಾಧ್ಯವಾಯಿತಂತೆ.

ಸನಂ ಸನಂ



ತೇಲಿ ಬಂದ ದಾರಿ

7 ಕವಿತಾ ಲಂಕೇಶ್

ತೆರೆಯ ಮೇಲೆ ಪಾತ್ರಗಳಾಗಿ ಹೀರೋ, ಹೀರೋಯಿನ್‌ಗಳು ಮಿಂಚುತ್ತಾರೆ. ಡೈರೆಕ್ಟ್ರು, ಮ್ಯೂಸಿಕ್ ಡೈರೆಕ್ಟ್ರು, ಸಾಹಿತ್ಯ ಬರೆದವರೂ ಗಮನ ಸೆಳೆಯಬಲ್ಲರು. ಆದರೆ ತೆರೆಯ ಹಿಂದೆ ಶ್ರಮವಹಿಸುವ ಎಷ್ಟೊಂದು ಜನರ ಕೈಚಳಕ ಸಾಮಾನ್ಯ ಪ್ರೇಕ್ಷಕನ ಗಮನಕ್ಕೆ ಬಾರದೇ ಹೋಗುತ್ತದೆ.

ಕ್ಯಾಮರಾಮನ್, ಅಸಿಸ್ಟಂಟ್ ಡೈರೆಕ್ಟರ್, ಪ್ರೊಡಕ್ಷನ್ ಮ್ಯಾನೇಜರ್, ಸೆಟ್‌ಬಾಯ್ಸ್ ಎಲ್ಲರ ಶ್ರಮ ಸೇರಿದರೇನೇ ಸಂಪೂರ್ಣ ವೃತ್ತ ಪರಿಪೂರ್ಣಗೊಳ್ಳುತ್ತದೆ.

ನನ್ನ 'ಪ್ರೀತಿ ಪ್ರೇಮ ಪ್ರಣಯ' ಚಿತ್ರಕ್ಕೆ ಕ್ಯಾಮರಾಮನ್ ಆಗಿದ್ದ ಎ.ಸಿ. ಮಹೇಂದರ್‌ರವರನ್ನೇ ಈ ಚಿತ್ರಕ್ಕೂ ತೆಗೆದುಕೊಳ್ಳೋಣವೆಂದು ನಿರ್ಮಾಪಕ ಸುರೇಶ್‌ಗೆ ಹೇಳಿದೆ. "ಮೇಡಮ್, ಅವ್ರು ಆ 'ಭಾ-ರತಿ' ಸಿನಿಮಾಕ್ಕೆ ಕ್ಯಾಮರಾ ವರ್ಕ್ ಮಾಡಿದ್ದಾರೆ. ಬೇರೆ ಯಾರನ್ನಾದರೂ ನೋಡುವಾ" ಎಂದು ಸುರೇಶ್



ಸಹನಿರ್ದೇಶಕ ಸಾವಂತ್ (ಎಡ) ಜೊತೆ ಕವಿತಾ ಮತ್ತು ನಟ ಅವಿನಾಶ್

ಪರದೆ ಕೆ ಪೀಚೆ ಇರುವ ಜನ

ಹೇಳಿದಾಗ ನಾನು ನಕ್ಕೆ. "ಮಹೇಂದರ್ ಏನೂ ಗಬ್ಬು ಚಿತ್ರ ಮಾಡುವುದಿಲ್ಲ... ಅವರು ತಮ್ಮ ಪಾಲಿನ ಕೆಲಸ ಮಾಡಿ ಬಂದಿದ್ದಾರೆ. ಆಮೇಲೆ ಪ್ರೊಡ್ಯೂಸರ್ ತಮ್ಮ ಗಬ್ಬು ಬುದ್ಧಿಯನ್ನು ತುರುಕಿದ್ದಾರಷ್ಟೇ..." ಎಂದು ಸುರೇಶ್‌ಗೆ ಒಪ್ಪಿಸಿದೆ. ಕನ್ನಡದಂತಹ ಸೀಮಿತ ಮಾರುಕಟ್ಟೆಯಲ್ಲಿ ಕ್ಯಾಮರಾಮನ್‌ಗಳು ಅವಕಾಶ ಸಿಕ್ಕ ಚಿತ್ರಗಳನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ.

ನಾನು ಬೇರೊಂದು ಪ್ರಾಜೆಕ್ಟ್‌ಗಾಗಿ ಈಗ ಸೂಪರ್ ಹಿಟ್ ಆಗಿರುವ ಕಮಲ್ ಅಭಿನಯದ ಹೊಸ ಚಿತ್ರದ ಕ್ಯಾಮರಾಮನ್ ರವಿವರ್ಮಾ ಜೊತೆಗೂ, ಹಿಂದಿಯ ಖ್ಯಾತ ಕ್ಯಾಮರಾಮನ್ ಸಂತೋಷ್ ಶಿವನ್ ಜೊತೆಗೂ ಚರ್ಚೆ ಮಾಡಿರುವೆ. ತಮ್ಮ ಬ್ಯುಸಿ ಶೆಡ್ಯೂಲ್ ಮಧ್ಯೆ ದೇವೀರಿಯಂತಹ ಚಿತ್ರ ಮಾಡಲು ಅವರಿಬ್ಬರಿಗೂ ಇಷ್ಟ. ಆದರೆ ರವಿವರ್ಮರ ಸಂಭಾವನೆ 30ರಿಂದ 40 ಲಕ್ಷವಾದರೆ, ಸಂತೋಷ್ ಶಿವನ್‌ರದು 75 ಲಕ್ಷ! ನಮ್ಮ ಕನ್ನಡ ಹೀರೋಗಳ ಬಜೆಟ್‌ನಷ್ಟು!!

ಅದಿರಲಿ, 'ಪ್ರೀತಿ ಪ್ರೇಮ ಪ್ರಣಯ'ದಲ್ಲೇ ನನ್ನ ಮತ್ತು ಮಹೇಂದರ್ ನಡುವೆ ದೃಶ್ಯಗಳು ಹೇಗಿರಬೇಕೆಂಬ ಅಂಡರ್‌ಸ್ಟಾಂಡಿಗ್ ಬೆಳೆದಿತ್ತು. ನಂತರ 'ಮಾಲ್ಗುಡಿ ಡೇಸ್' ಮಾಡುವಾಗ ನಾನು ಎಂಥ ವರ್ಕ್ ಬಯಸುತ್ತೇನೆ, ಕ್ಯಾಮರಾ ಆ್ಯಂಗಲ್ ಎಷ್ಟಿರಬೇಕು, ಲೈಟಿಂಗ್ ಹೇಗಿರಬೇಕು ಎಂಬುದನ್ನೆಲ್ಲಾ ಅರಿತಿದ್ದ ಮಹೇಂದರ್ ಈ ಚಿತ್ರದುದ್ದಕ್ಕೂ ನಾನು ಬಯಸಿದಂತೆಯೇ ಚಿತ್ರೀಕರಿಸಿ ತಮ್ಮ ಪ್ರತಿಭೆ ಮೆರೆದಿದ್ದಾರೆ. ಕಣ್ಣಿಗೆ ಡಿಸ್ಟರ್ಬ್ ಮಾಡದ, ಚೀಪ್ ಆ್ಯಂಗಲ್‌ಗಳನ್ನು ಬಳಸದ, ಹಾಡುಗಳಲ್ಲಿ ನಟನಟಿಯರ ಮೂವ್‌ಮೆಂಟ್ಸ್‌ಗಿಂತ ಕ್ಯಾಮರಾ ಮೂವ್‌ಮೆಂಟ್ಸ್ ದಡಾಬಡಾ ಬಂದು ಹೋಗುವುದನ್ನು ಮೆಚ್ಚಲಾರದ ನನ್ನ ಶೈಲಿ ಮಹೇಂದರ್‌ಗೂ ಇಷ್ಟವಾದ್ದರಿಂದ ಅವರು ಮನಮೋಹಕ ದೃಶ್ಯಗಳ ರಸದೂಟವನ್ನು ಬಡಿಸಿದ್ದಾರೆ ನಿಮಗೆಲ್ಲ....

ಈ ಚಿತ್ರದುದ್ದಕ್ಕೂ ಜಿಮ್ಮಿ ಜಿಪ್ ಕ್ಯಾಮರಾ ಬಳಸಿರುವುದರಿಂದ ಹಲವಾರು ರಿಚ್ ಸೀನ್‌ಗಳು ನಿಮ್ಮ ಮನ ತಣಿಸಲಿವೆ. ಮಹೇಂದರ್ ಅವರಿಗೆ ಜಿಮ್ಮಿ ಜಿಪ್ ಕ್ಯಾಮರಾ ಆಪರೇಟ್ ಮಾಡುವುದೂ ಗೊತ್ತಿರುವುದರಿಂದ ನಮಗೆ ಅನುಕೂಲಕರವಾಯ್ತು. ಹಂಪಿ, ಚಿತ್ರದುರ್ಗದ ಐತಿಹಾಸಿಕ ಸ್ಮಾರಕಗಳು, ನಂದಿಬೆಟ್ಟದ ಕಲ್ಯಾಣಿ ಎಲ್ಲವೂ ಜಿಮ್ಮಿಜಿಪ್‌ನಲ್ಲಿ ವೈಭವದ ಮೆರುಗು ಪಡೆದುಕೊಂಡಿವೆ.

ನನ್ನ 'ದೇವೀರಿ' ಚಿತ್ರವೊಂದನ್ನು ಬಿಟ್ಟು ಉಳಿದೆಲ್ಲ ಚಿತ್ರಗಳಿಗೆ ಸಾವಂತ್ ರವರು ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಉಪಯುಕ್ತ ನೆರವು ನೀಡಿದ್ದಾರೆ. 'ಕ್ಯಾಪ್ಟನ್ ಆಫ್ ದಿ ಶಿಪ್' ಅಂದರೆ ನಿರ್ದೇಶಕನ ಜೊತೆಗೆ ಟೀಮ್‌ನ ಎಲ್ಲ ಸದಸ್ಯರೂ ಕ್ರಿಯಾಶೀಲರಾಗಿದ್ದಾಗ ಒಳ್ಳೆ ಪ್ರಾಡಕ್ಟ್ ಬರುತ್ತದೆ. ಸಹ ನಿರ್ದೇಶನದ ಜೊತೆಗೆ ಇತರ ಹಲವಾರು ಸಂದರ್ಭಗಳಲ್ಲೂ ಸಾವಂತ್ ವಿಶಿಷ್ಟ ಕೆಲಸ ಮಾಡಿದ್ದಾರೆ. ಉದಾಹರಣೆಗೆ ಶ್ಯಾವ್ ದೀರ್ಘ ಸಂಭಾಷಣೆ ಹೇಳುವಾಗ **prompting** ಮಾಡಿ ಸಹಕರಿಸಿದ್ದು ಇದೇ ಸಾವಂತ್! ಕಾಸರವಳ್ಳಿ ಹಾಗೂ ಇತರರ ಜೊತೆ ಕೆಲಸ ಮಾಡಿರುವ ಅವರಿಗೆ ದೂರದ ಊರುಗಳ ಹಲವಾರು ಸ್ಥಳೀಯ ಕಲಾವಿದರ ಸಂಪರ್ಕವಿದೆ. ಚಿಕ್ಕಮಗಳೂರಿನ ಹತ್ತಿರ ಶೂಟ್ ಮಾಡುವಾಗ ಅರ್ಚಕ ಪಾತ್ರಧಾರಿ ನಾಪತ್ತೆ. ಆಗ ಸಾವಂತ್ ತಮಗೆ ಗೊತ್ತಿದ್ದ ಒಬ್ಬ ಸ್ಥಳೀಯ ಕಲಾವಿದರನ್ನು ತಂದು, ಹೀರೋ ಹೀರೋಯಿನ್‌ಗಳು ಕಾಯುತ್ತಾ ಕೂರುವುದನ್ನು ತಪ್ಪಿಸಿದರು.

ನಮ್ಮ ಆರ್ಟ್ ಡೈರೆಕ್ಟರ್ ಇಸ್ಮಾಯಿಲ್ ತೀರಾ ಹುಮ್ಮಸ್ಸಿನಿಂದಲೇ ಕೆಲಸ ಶುರು ಮಾಡಿದರು. ಅಬ್ಬಯ್ಯನಾಯ್ಡು ಸ್ಟುಡಿಯೋದಲ್ಲಿ 'ಚೆಲುವಾಂತ ರಾಜಕುಮಾರ' ಹಾಡಿಗೆ ಅವರು ಹಾಕಿದ ಸೆಟ್ ಬ್ಯೂಟಿಫುಲ್, ಸೂಪರ್ಬ್! ಅಲ್ಲೇ ಹಾಕಿದ ಹಳ್ಳಿಯ ನಾಟಕದ ವೇದಿಕೆಯ ಸೆಟ್ ನಿಜವಾಗಿಯೂ ಟೆಂಟ್ ನಾಟಕದ ವೇದಿಕೆಯಂತಿದೆ.

ಒಂದು ವಿಷಯ: ನಮ್ಮ ಕನ್ನಡದ ಬಹುತೇಕ ಆರ್ಟ್ ಡೈರೆಕ್ಟರುಗಳು ಹಾಡುಗಳ ಸೆಟ್‌ಗಳಿಗಷ್ಟೇ ಮಹತ್ವ ನೀಡುತ್ತಾರೆ. ಇಡೀ ಚಿತ್ರದುದ್ದಕ್ಕೂ ಅವರ ಛಾಪು ಇದ್ದರೇನೇ ಚೆಂದವಲ್ಲವೆ? ಆಯಾ ಮಣ್ಣಿಂದ, ಆಯಾ ನೆಲದಿಂದ ಬಂದ ಒಂದು ಪರಿಕಲ್ಪನೆ ಚಿತ್ರದುದ್ದಕ್ಕೂ ಆರ್ಟ್ ಮೂಲಕ ಬಿಂಬಿತಗೊಳ್ಳುವಂತೆ ಮಾಡಿದರೆ ಚೆನ್ನ. ನಮ್ಮ ಆರ್ಟ್ ಡೈರೆಕ್ಟರುಗಳು ಇತ್ತ ಸ್ವಲ್ಪ ಗಮನ ಹರಿಸಿದರೆ ಅವರು ಇನ್ನೂ ಹೆಚ್ಚು ಪ್ರೊಫೆಷನಲ್ ಎನಿಸಿಕೊಳ್ಳುವರು. ಆರ್ಟ್ಸ್ ಡಿಪಾರ್ಟ್‌ಮೆಂಟಿನ ಹುಡುಗ ಸೀನು ಸಹ ಹುಮ್ಮಸ್ಸಿನಿಂದ ಎಷ್ಟೋ ಮೇಜರ್ ಕೆಲಸ ಮಾಡಿ ತಮ್ಮ ಕೈಚಳಕ ತೋರಿದ್ದಾರೆ. ರಂಗಭೂಮಿಯ ಪ್ರಾಧಾನ್ಯತೆ ಬಿಂಬಿತವಾಗುವಂತೆ ಹಾಡಿನ ಸೆಟ್‌ಗಳು, ರಂಗವೇದಿಕೆಯ ಸೆಟ್‌ಗಳು ಮೂಡಿಬಂದಿವೆ. ಈ ಚಿತ್ರದಲ್ಲಿ ರಂಗಭೂಮಿಯ ಸಮೃದ್ಧ ದೃಶ್ಯಗಳನ್ನು ತೋರಿಸುವ ವಿಚಾರ ಮೂಡಿದಾಗ, ಕೆ.ವಿ. ಅಕ್ಷರ ಅವರು ಚಂದ್ರಶೇಖರ ಕಂಬಾರರ 'ಸಾಂಬಶಿವ ಪ್ರಹಸನ'ವನ್ನು ರೆಫರ್ ಮಾಡಿದರು. ಓದಿದಾಗ ಖುಷಿ ನೀಡಿತು. ಫೋನಿನಲ್ಲಿ ಸಿಕ್ಕ ಕಂಬಾರರು ಕೂಡಲೇ ಖುಷಿಯಿಂದ ಒಪ್ಪಿಕೊಂಡರು. ನಾಲ್ಕು ನಿಮಿಷ ಕಾಲ ಈ ದೃಶ್ಯ ಶೂಟ್ ಮಾಡಿದ್ದೇವೆ. ಆದರೆ ಅನಿವಾರ್ಯ ಕಾರಣದಿಂದ ಕೇವಲ ಒಂದು ನಿಮಿಷದ ದೃಶ್ಯ ತೋರಿಸಿದ್ದೇವೆ. ಹಾಗೆಯೇ ಇಲ್ಲಿ 'ಕೊರವಂಜಿ'ಯ ದೃಶ್ಯವಿದೆ. ಜಾನಪದ ಹಾಡು 'ಕಲಿತ ಹುಡುಗಿ' ಪೀಸ್ ಇದೆ.... ಹೀಗೆ ರಂಗನಾಯಕಿಯಾಗಿ ರಕ್ಷಿತಾ ಹಲವಾರು ವಿಭಿನ್ನ ಡ್ರೆಸ್‌ಗಳಲ್ಲಿ, ವಿಭಿನ್ನ ಭಾವಗಳಲ್ಲಿ ಮಿಂಚುತ್ತಾ ನಿಮ್ಮ ಮನ ತಣಿಸಲಿದ್ದಾಳೆ. ನಾಟಕದ ಸುತ್ತಲಿನ ದೃಶ್ಯಗಳಲ್ಲಿ ರಕ್ಷಿತಾಳೇ ಪ್ರಮುಖ ಕ್ಯಾರೆಕ್ಟರ್. ತಬಲಾ ತಬಲಾ, ಸುಂಟರಗಾಳಿಯಂತಹ ಅಧ್ವಾನದ ಹಾಡುಗಳಿಂದ ದೂರವಾಗಿ, ಅತ್ಯಂತ ವಿಭಿನ್ನ, ಕಣ್ಮನ-ಕಿವಿ ತಂಪಾಗಿಸುವ ಹಾಡುಗಳಲ್ಲಿ ಹೆಜ್ಜೆ ಹಾಕಿದ್ದಾಳೆ ರಕ್ಷಿತಾ.

ಅಯ್ಯೋ, ರಕ್ಷಿತಾಳನ್ನು ಬಹಳ ಹೊಗಳಿದೆನೇನೋ? ಒಬ್ಬಳನ್ನು ಹೆಚ್ಚು ಹೊಗಳಿದರೆ ಇನ್ನೊಬ್ಬಳು ಸಿಟ್ಟಾಗ್ತಾಳೆ... ಅಷ್ಟು 'ಕ್ಲೋಸ್ ಫ್ರೆಂಡ್ಸ್' ಈ ರಮ್ಯ ರಕ್ಷಿತಾ....

ಶೂಟಿಂಗ್ ಮಾಡುವಾಗಲೇ ಇವರನ್ನು ಹ್ಯಾಂಡಲ್ ಮಾಡೋದು ಕಷ್ಟವಾಗಿತ್ತು. ಈಗ ಯಾಕೆ ಹೊಸ ರಿಸ್ಕು? ಇಬ್ಬರೂ ಚೆನ್ನಾಗಿಯೇ ಆ್ಯಕ್ಟ್ ಮಾಡಿದ್ದಾರೆ. ತೆರೆಯ ಮೇಲೆ ನೋಡಿದ ನಂತರ



'ಕಲಿತ ಹುಡುಗಿ' ಹಾಡಿನಲ್ಲಿ ರಕ್ಷಿತಾ ಮತ್ತು ಸಂಗಡಿಗರು


ನೀವು ರಮ್ಯಳನ್ನು ಅಪ್ಪಿಕೊಳ್ಳೀರೋ? ರಕ್ಷಿತಾಳನ್ನೋ? ಅಥವಾ ಇಬ್ಬರನ್ನೂ....

Next week ಸಿಗ್ತೀನಿ...

ದಡ

ಸುರುಳಿ ಸುರುಳಿಯಾಗಿ
ಸುತ್ತಿಕೊಳ್ಳುವ
ಬಿಗಿದಪ್ಪಿಕೊಳ್ಳುವ
ನಿನ್ನ
ನಗುವ ಹಿಡಿಯಲೆಳಸುತ್ತೇನೆ
ಹೂವು; ನಗುತ್ತದೆ;
ನೆನಪುಗಳ ದೋಣಿಯಲಿ
ಕುಳಿತು
ಹುಟ್ಟು ಹಾಕುತ್ತ
ನಿನ್ನ ತಲುಪಲೆತ್ನಿಸುತ್ತೇನೆ
ದೋಣಿ
ನಿರಾಯಾಸವಾಗಿ ದಡಸೇರುತ್ತದೆ

-ಜ.ನಾ. ತೇಜಶ್ರೀ




ನೋಡಬನ್ನಿ ರಾಜಕಾರಣಿಗಳ ದೊಂಬರಾಟವ


ಹಿಂದೆ ಮೋಡಿ ಆಟಗಾರರು ಅಂತ ಇದ್ದರು. ಅವರಲ್ಲೇ ಎರಡು ಗುಂಪು. ಒಂದು ಗುಂಪು ಮೋಡಿ ಮಾಡಿ ಹಾವು ಕರೆಸಿದರೆ ಎದುರು ಗುಂಪಿನವರು ಕೀರವನ್ನು ಬಿಡುತ್ತಿದ್ದರು. ಇಲಿ ಮಾಡಿದರೆ ಬೆಕ್ಕನ್ನು ಬಿಡುತ್ತಿದ್ದರು. ಹೀಗೆ ಒಂದಕ್ಕೆ ಒಂದು ಬೆಳೀತಾ ಹೋಗುತ್ತಿತ್ತು, ನೋಡುವವರಿಗೆ ಬಹಳ ಮಜ ಇರ್ತಿತ್ತು.

ಈಗ ಯಾಕೆ ಈ ಸಂಗತಿ ಅಂದರೆ ನಮ್ಮ ರಾಜಕಾರಣಿಗಳೂ ಈ ಮೋಡಿ ವಂಶದವರಾ ಎಂಬ ಅನುಮಾನ ಕಾಡುತ್ತಿದೆ. ಇವರು ಎಷ್ಟು ಚೆನ್ನಾಗಿ ಮೋಡಿ ಮಾಡುತ್ತಾರೆಂದರೆ ಇವರು ಹಾಕುವ ಪಟ್ಟಿಗೆ ಎದುರಾಳಿ ನಡುಗಿ ಹೋಗ್ತಾನೆ. ಜನಾರ್ಧನ ರೆಡ್ಡಿ 150 ಕೋಟಿ ಬಾಂಬ್ ಬಿಡುತ್ತಿದ್ದಂತೆ ಅದು ಯಾವ ಮಾಯದಲ್ಲೋ ನೋಡಿ ಮೂರು ವರ್ಷದ ಹಿಂದಿನ ಮಂಪರು ಪರೀಕ್ಷೆ, ಸಿಡಿಗಳು, ಟಿವಿಗಳಿಗೆ ದೊರೆಯುತ್ತೆ! ಗಣ್ಯಾತಿ ಗಣ್ಯರು ಎನ್ನಿಸಿಕೊಂಡ ಹಲವರ ಬಂಡವಾಳವನ್ನೇ ತೆಲಗಿ ಮಹಾಶಯರು ಬಯಲು ಮಾಡಿದ್ದಾರೆ. ನಮ್ಮಲ್ಲಿ ಒಬ್ಬ ಪ್ರಖ್ಯಾತ ಬರಹಗಾರ್ತಿ ಇದಾರೆ. ಅವರು ಯಾವುದೋ ಗಮ್ಮತ್ತಿನಲ್ಲಿ 'ನಾನು ಆತ್ಮಕಥೆ ಬರೆದು ಸಾಂಸ್ಕೃತಿಕ ವಲಯದ ಘಟಾನುಘಟಿ ಕುಳಗಳ ಜಾತಾಕನೆಲ್ಲ ಜಾಲಾಡ್ತೀನಿ' ಅಂದರಂತೆ. ಆ ಮುಂದೇದು ಏನೇನು ಬರೆದುಬಿಡುತ್ತೋ, ತಮ್ಮ ಮಾನ ಹರಾಜಾಗುತ್ತಲ್ಲ ಎಂಬ ಫಿಕೀರಿನಿಂದ ಕೆಲವರು ನನ್ನ ಹೆಸರು ಸೇರಿಸಬೇಡ, ನನ್ನ ಹೆಸರು ಬಿಟ್ಟು ಬಿಡು ಅಂತ ಎಲ್ಲ ಆಕೆಯ ಮುಂದೆ ಗೋಗರೆಯುತ್ತಿದ್ದಾರಂತೆ. ಹಾಗೇನೇ ಆಗಿದೆ ತೆಲಗಿ ಕೇಸಿನಲ್ಲಿ, ಆತ ಬಯಲು ಮಾಡಿದ್ದು ಕೆಲವೇ ಸಂಗತಿಗಳನ್ನು ಮಾತ್ರ. ಯಾರು ಯಾರಿಗೆ ಹಣ ನೀಡಲಾಗಿದೆ ಎಂಬುದನ್ನು ತನ್ನ ಡೈರಿಯಲ್ಲಿ ಬರೆದು ಪರಪ್ಪನ ಅಗ್ರಹಾರದಲ್ಲಿಟ್ಟಿದ್ದೇನೆ ಅಂದಿದ್ದಾನೆ ಆ ಪುಣ್ಯಾತ್ಮ. ಈಗ ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ತನ್ನ ಹೆಸರು ಎಲ್ಲಿ ಬಯಲು ಮಾಡ್ತಾನೋ ಎಂಬ ವಿಷಯದಲ್ಲಿ ನಿದ್ರಾದೇವಿಯು ಅವರ ಆಲಿಂಗನಕ್ಕೆ ಬರುತ್ತಲೇ ಇಲ್ಲವಂತೆ.

ತಮ್ಮ ಹೆಸರು ಬಯಲಾದ ನಂತರ ರಾಜಕೀಯ ಧುರುಣೀರು 'ನನಗೂ ಇದಕ್ಕೂ ಸಂಬಂಧವೇ ಇಲ್ಲ; ತೆಲಗಿ ಯಾರೂ ಅಂತಾನೂ ಗೊತ್ತಿಲ್ಲ; ಅವನ ಮುಖಾನೆ ನನ್ನಪ್ಪನಾಣೆಗೂ ಕಾಣೆ' ಎಂದೆಲ್ಲ ಮಾಮೂಲಿನಂತೆ ಉತ್ತರಿಸಿದ್ದಾರಾದರೂ ಈ ಸಿಬಿಐನವರು ಎಲ್ಲಿ ತಗುಲಿ ಕೊಳ್ತಾರೋ ಎಂಬುದಾಗಿ ನಿದ್ದೆಯಲ್ಲೂ ಬೆಚ್ಚಿ ಬೀಳುತ್ತಿದ್ದಾರಂತೆ.

ಈ ವಿದ್ಯೆಯಲ್ಲಿ ಪಳಗಿದ ಗಿರಾಕಿಗಳು ಮಂಪರು ಪರೀಕ್ಷೆಯಲ್ಲಿ ಅವನು ಏನೇನೋ ವದರಿದ್ದಾನೆ, ಅರೆ ಎಚ್ಚರದಲ್ಲಿ ಹೇಳಿದ ಮಾತನ್ನು ನಂಬಲು ಆಗುತ್ತದೆಯೋ, ಸಂಪೂರ್ಣ ಎಚ್ಚರ ಆಗಿದ್ದಾಗ ಹೇಳಿದ್ದರೆ ಅಂತಹ ಮಾತನ್ನು ನಂಬಬಹುದಾಗಿತ್ತು ಎಂದು ಉಡಾಫೆ ಹೊಡೆದಿದ್ದಾರೆ. ಇನ್ನೂ ಮುಂದುವರೆದ ಕೆಲವರಿಗೆ ಮಂಪರು ಪರೀಕ್ಷೆ ಅಮಾನವೀಯವಾಗಿ ಕಂಡಿದೆ!





ಇಂತಹ ಪರೀಕ್ಷೆಯನ್ನು, ಅದರ ವರದಿಯನ್ನು ಸಾರಾಸಗಟು ಬಹಿಷ್ಕರಿಸಬೇಕು ಎಂದು ಆಗ್ರಹಿಸಿದ್ದಾರೆ. ಯಾಕೋ ಏನೋ ಮಂಪರು ಪರೀಕ್ಷೆ ನಡೆಸಿದವರು ಅದು ಶೇಕಡಾ 97ರಷ್ಟು ನಂಬಲರ್ಹ ಎಂದು ಹೇಳಿರುವುದನ್ನು ಇನ್ನೂ ಯಾರೂ ಅದು ಹಣ ನೀಡಿ ಹೇಳಿಸಿರುವ ಹೇಳಿಕೆ ಎಂದೋ, ಪ್ರಾಣ ಬೆದರಿಕೆ ಹಾಕಿ ಇಂತಹ ವರದಿ ನೀಡಿಸಿದ್ದಾರೆ ಎಂದೋ ಇದುವರೆಗೂ ಹೇಳದಿರುವುದು ಆಶ್ಚರ್ಯಕರವಾಗಿದೆ.

ಅಣಕ

ಏನೇ ಆಗಲಿ, ರಾಜಕಾರಣಿ-ಅಧಿಕಾರಶಾಹಿ-ಪಾತಕಿಗಳ ಕೂಟ ನಮ್ಮನ್ನು ಆಳುತ್ತಿರುವ ಸಂಗತಿ ಇದರಿಂದ ವೇದ್ಯವಾಗುತ್ತದೆ. ಇದನ್ನು ಅರಿತೋ ಏನೋ ಗೋಪಾಲವರ್ಮ ತಮ್ಮ 'ಶಿವ' ಚಿತ್ರದಲ್ಲಿ 'ಚೋರ್ ಪೊಲೀಸ್' ಎಂದು ಹಾಡು ಬಳಸಿದ್ದಾರಂತೆ. ಇದರ ಜನಪ್ರಿಯತೆ ಪೊಲೀಸಿನವರಿಗೆ ಬಿಸಿತುಪ್ಪ ಆಗಿದೆಯಂತೆ. ಸತ್ಯ ಯಾವತ್ತೂ ಕಹಿ ಅಲ್ಲವಾ. ಈ ಹಾಡನ್ನು ಕೈ ಬಿಡಿ ಅಂತ ಅವರ ವರಾತ ಅಂತೆ. ಸಾಧ್ಯವೇ ಇಲ್ಲ ಅಂದದ್ದಕ್ಕೆ 'ಚೋರ್ ಪೊಲೀಸ್' ಹಾಡಿನಲ್ಲಿ 'ಚೋರ್' ಆದರೂ ಬಿಡಿ ಅಂತ ಗಂಟು ಬಿದ್ದಿದ್ದಾರಂತೆ. ಅದು ಎಲ್ಲಿಗೆ ತಲುಪಿದೆಯೋ ಗೊತ್ತಿಲ್ಲ. ಒಂದಂತೂ ಸತ್ಯ. 'ಚೋರ್' ಬಿಡದೆ ಚಿತ್ರ ಬಿಡುಗಡೆ ಆದರೆ ಪೊಲೀಸಿನವರೇ ಪ್ರಚೋದನೆ ನೀಡಿ ಗಲಭೆ ಎಬ್ಬಿಸಿ ಚಿತ್ರ ಎಕ್ಕುಟ್ಟಿ ಹೋಗುವಂತೆ ಮಾಡಬಲ್ಲರು!

ಇಂತಹ ದುಷ್ಟಕೂಟಕ್ಕೆ ಜನ ಈ ಸಲ ಬಾರಿ ಮನ್ನಣೆ ನೀಡುತ್ತಿರುವುದು ಗಣೇಶನ ಹಬ್ಬದಲ್ಲಿ ಬಯಲಾಗಿದೆ. ಗಣೇಶನ ಮೂರ್ತಿಯನ್ನು ತಮ್ಮ ತಮ್ಮ ಇಷ್ಟ ವ್ಯಕ್ತಿಗಳ ರೀತಿಯಲ್ಲೇ ಮಾಡಿಸಿ ಪೂಜಿಸುತ್ತಿದ್ದಾರಂತೆ... ಅದು ಹೇಗೆ ಸಾಧ್ಯ? ಗಣೇಶನಿಗೆ ಆನೆಯ ಸೊಂಡಿಲು ಇರಬೇಕಲ್ಲ ಅಂದರೆ ಇಷ್ಟ ವ್ಯಕ್ತಿಯ ಮುಖಕ್ಕೆ ಸೊಂಡಿಲು ಹಾಕಿಸಿದ್ದರಂತೆ! ಇದಕ್ಕೆ ಅವಕಾಶ ಇಲ್ಲದವರು ಗಣೇಶನ ವಿಗ್ರಹದ ಪಕ್ಕದಲ್ಲಿ ಇಷ್ಟ ವ್ಯಕ್ತಿಗಳ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದರಂತೆ! ಕೊಲ್ಕತ್ತಾ ನಗರದಿಂದ ಒಂದು ವಿಚಿತ್ರ ಸುದ್ದಿ ಬಂದಿದೆ. ಅದೇನು ಅಂದರೇ ಈಗ ದಸರಾ ಸಂದರ್ಭ ತಾನೆ, ದಸರಾ ಹಬ್ಬದಲ್ಲಿ ಅಸುರರನ್ನು ಕೊಲೆ ಮಾಡಬೇಕು. ಯಾರು ಈ ಅಸುರರು ಎಂದರೆ ಹೇಳುವುದು ಕಷ್ಟ. ಸಿದ್ಧರಾಮಯ್ಯಂಗೆ ದೇವೇಗೌಡ ಅಸುರರಂತೆ ಗೋಚರಿಸಬಹುದು. ದೇವೇಗೌಡರಿಗೆ ಸಿದ್ಧರಾಮಯ್ಯ ಅಸುರರಾಗಿ ಕಾಣಬಹುದು. ಹೀಗೆ ಅವರವರ ಭಾವಕ್ಕೆ ತಕ್ಕಂತೆ ಅಸುರರು ಯಾರು ಯಾರೋ ರೂಪದಲ್ಲಿ ಕಾಣಿಸಬಹುದು.

ಕೊಲ್ಕತ್ತಾದ ಬಾಬುಗಳಿಗೆ ಅಸುರನಾಗಿ ಕಾಡಿದ್ದು ಗ್ರೇಗ್ ಚಾಪೆಲ್! ಕೊಲ್ಕತ್ತಾದ ಯುವರಾಜ ಸೌರವ್ ಗಂಗೂಲಿಯ ಕ್ರಿಕೆಟ್ ಇತಿಹಾಸವನ್ನೇ ಅಳಿಸಿ ಹಾಕಲು ಪ್ರಯತ್ನಿಸಿದವನಲ್ಲವೇ ಆ ಧೂರ್ತ.. ಅದಕ್ಕೇ ಅವನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಅದರ ಸಂಹಾರಕ್ಕೆ ಅಲ್ಲಿನ ಕ್ರಿಕೆಟ್ ಪ್ರೇಮಿಗಳು ಮುಂದಾಗಿದ್ದಾರಂತೆ. ಆದರೆ ಪೊಲೀಸಿನವರು ಇದಕ್ಕೆ ತೀವ್ರವಾದ ಆಕ್ಷೇಪ ವ್ಯಕ್ತಪಡಿಸಿದ್ದಾರಂತೆ. ಯಾರ ಕೈ ಮೇಲಾಗುವುದೋ ಈ ಸುರ-ಅಸುರರ ಜಗಳದಲ್ಲಿ ನೋಡಬೇಕು..

ಅಂದಹಾಗೆ ದೇಶದ ಅಸುರರು ಯಾರು ಎಂದರೆ ಸಾಮಾನ್ಯ ಜನರು ಯಾರನ್ನು ಹೆಸರಿಸಬಹುದು?

ಕೊನೆಯ ಮಾತು:


ದೇವೇಗೌಡರ ಕುಟುಂಬದ ಭ್ರಷ್ಟಾಚಾರವನ್ನು 'ಲಂಕೇಶ್' ಧಾರವಾಹಿಯಂತೆ ಪ್ರಕಟಿಸುತ್ತಿರುವುದು ತರವಲ್ಲ ಎಂಬುದು ಕೆಲವರ ಆಕ್ಷೇಪ. ಅದು ಯಾಕೆಂದರೆ ಗೌಡರು ಹಳ್ಳಿಯಿಂದ ಬಂದವರು. ಒಟ್ಟು ಕುಟುಂಬದ ಲಕ್ಷಣ ತಿಳಿದವರು. ಒಟ್ಟು ಕುಟುಂಬದಲ್ಲಿ ಕೆಲಸದ ವಿಭಜನೆ ಮಾಡಲಾಗುತ್ತದೆ. ಕುರಿ ಕಾಯಲೇ ಒಬ್ಬ ಇರುತ್ತಾನೆ. ಅವನು ಎಲ್ಲರಿಗೂ ಕುರಿಯಪ್ಪ, ಕುರಿಯಣ್ಣ ಕುರಿಮಾವ ಆಗಿರುತ್ತಾನೆ. ದನ ಮೇಯಿಸಲೇ ಒಬ್ಬ ಇರುತ್ತಾನೆ. ಅವನು ದನದ ಅಪ್ಪ, ದನದ ಅಣ್ಣ, ದನದ ಮಾವ ಆಗಿರುತ್ತಾನೆ. ಯಾರೋ ಒಬ್ಬ ವಿದ್ಯಾಭ್ಯಾಸ ಮಾಡುತ್ತಾನೆ. ಅವನು ಓದೋ ಅಪ್ಪ, ಓದೋ ಅಣ್ಣ, ಓದೋ ಮಾವ ಆಗಿರುತ್ತಾನೆ. ಹೀಗೆ ಒಬ್ಬೊಬ್ಬರು ಒಂದೊಂದು ಕೆಲಸ ನಿರ್ವಹಿಸುವುದರಿಂದ ಮನೆಯಲ್ಲಿ ನೆಮ್ಮದಿ ಮೂಡುವುದಲ್ಲದೆ ಮನೆಯ ಶ್ರೇಯಸ್ಸಿಗೂ ಕಾರಣ ಆಗುತ್ತದೆ.

ಇದನ್ನು ದೇವೇಗೌಡರು ಚೆನ್ನಾಗಿ ಬಲ್ಲರು— ಆದ್ದರಿಂದಲೇ ತಮ್ಮ ಮನೆ ಮಂದಿಗೆಲ್ಲ ಒಂದೊಂದು ಕೆಲಸ ಹಂಚಿದ್ದಾರೆ. ಒಬ್ಬರಿಗೆ ವರ್ಗಾವಣೆ, ಒಬ್ಬರಿಗೆ ಗಣಿ, ಒಬ್ಬರಿಗೆ ವಿದ್ಯುತ್ ಮತ್ತು ರಸ್ತೆ, ಒಬ್ಬರಿಗೆ ಹಣಕಾಸು ವ್ಯವಸ್ಥೆ, ಒಬ್ಬರಿಗೆ ಟಿವಿ ಚಾನೆಲ್ಲು ಹೀಗೇ... ಇದರಿಂದ ಮನೆಯಲ್ಲಿ ನೆಮ್ಮದಿ ಮೂಡುವುದಲ್ಲದೆ ಸಂಸಾರದ ಶ್ರೇಯಸ್ಸೂ ಆಗುತ್ತದೆ ಎಂಬುದನ್ನು ಅವರು ಬಲ್ಲರು. ಇದನ್ನೇ ತಪ್ಪು ಎಂದು ಪದೇ ಪದೇ ಹೇಳುವುದು ತರವಲ್ಲಾ ಬಿಡಿ ಎಂಬುದು ಅವರ ಆಕ್ಷೇಪ!

—ಎಚ್.ಎಲ್.ಕೇಶವಮೂರ್ತಿ

ಈ ಮಣ್ಣಿನ ಮಕ್ಕಳಿಗೆ ಮಾನ ಉಂಟೇ?

"ಮಕ್ಕಳ ಹಾಗೂ ಯುವತಿಯರ ಮಾರಾಟದ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದ ಕಾನೂನೇ ಇದ್ದರೂ, ಪೊಲೀಸರು ನನ್ನೊಂದಿಗೆ ಸಹಕರಿಸುತ್ತಿಲ್ಲ. ಈ ಬಗ್ಗೆ ನಾನು ಸಿ.ಎಂ.ಗೆ ದೂರು ಹೇಳುವೆ" ಎಂದು ಇವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ಇದು ಸಾಮಾನ್ಯ ವ್ಯಕ್ತಿಯೊಬ್ಬರ ದೂರಲ್ಲ, ಈ ರಾಜ್ಯದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವ ಹೆಚ್.ಕೆ. ಕುಮಾರಸ್ವಾಮಿಯ ದೂರು! ಒಬ್ಬ ಸಚಿವರ ಸ್ಥಿತಿಯೇ ಹೀಗಿದ್ದಲ್ಲಿ ಜನ ಸಾಮಾನ್ಯರ ಪರಿಸ್ಥಿತಿ ಏನು? ರಾಜ್ಯದಲ್ಲಿ ಅಧಿಕಾರಿಗಳು ಯಾವ ಪ್ರಮಾಣದಲ್ಲಿ ಜನ ಸಾಮಾನ್ಯರ ಅಭಿವೃದ್ಧಿ ಕೆಲಸಕ್ಕೆ ಸ್ಪಂದಿಸುತ್ತಾರೆಂಬುದುಕ್ಕೆ ಇದು ಸಾಕ್ಷಿಯಾಗಿದೆ. ಶ್ರೀಯುತರು ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ದೇವೇಗೌಡರ ಹೊಲದಲ್ಲಿ ಆಲೂಗಡ್ಡೆ ಬೆಳೆಯಲು ಹೋಗುವುದು ಸೂಕ್ತ.




ಹೆಣ್ಣುಮಕ್ಕಳಿಗೆ ಸೈಕಲ್ ವಿತರಣೆ, ಹೆಣ್ಣು ಮಕ್ಕಳ ಹೆಸರಿನಲ್ಲಿ ಠೇವಣಿ ನೀಡುವುದು... ಇಂತಹ ಹತ್ತಾರು ಅಸ್ಪಷ್ಟ ಯೋಜನೆಗಳನ್ನು ಸರಕಾರ ರೂಪಿಸಿದೆ. ಆದರೆ ಈಗಿರುವ ಕಾರ್ಯಕ್ರಮಗಳನ್ನೇ ಸರಿಯಾಗಿ ನಡೆಸಲಾರದ ಸರ್ಕಾರ ಹೊಸ ಯೋಜನೆಗಳನ್ನು ನಡೆಸುವುದಾದರೂ ಹೇಗೆ? ಹೋಗಲಿ ಬಿಡಿ ಅದನ್ನೆಲ್ಲ, ಈ ಭ್ರಷ್ಟ ಸರಕಾರದಿಂದ ನಿರೀಕ್ಷಿಸುವುದೇ ಪೆದ್ದುತನವೇನೋ ಅಲ್ಲವೇ?

-ಶೀಜನ ಎಂ. ಲಕ್ಷ್ಮಣ. ಮಡಿಕೇರಿ

ಗೌರಿ 'ಲಂಕೇಶ್' ವಾರಪತ್ರಿಕೆ ಈಗ ನಾಲ್ಕು ತಿಂಗಳಿಂದ ಕರ್ನಾಟಕವನ್ನು ಆಳುತ್ತಿರುವ ಗುತ್ತೇದಾರರ ಬಂಡವಾಳವನ್ನು ಬಿಚ್ಚಿಟ್ಟಿದೆ.

ಕೋ-ಜಾ ಸರ್ಕಾರ ಭಯ, ಭೀತಿ, ಮಾನ ಇತ್ಯಾದಿ ಎಲ್ಲವನ್ನೂ ತಿರಸ್ಕರಿಸಿ ಲೂಟಿ ಮಾಡುತ್ತಿದ್ದರೂ ಈ ನಾಡಿನ ಪ್ರಜ್ಞಾವಂತ ಜನ ಮೌನವಾಗಿರುವುದನ್ನು ಕಂಡು ಇವರಿಗೆಲ್ಲ ಏನಾಗಿದೆ ಅನ್ನಿಸದೇ ಇರದು.



ಪ್ರಸ್ತುತ ಸರ್ಕಾರದ ದುಷ್ಟ ರಾಜನೀತಿಯನ್ನು, ಭ್ರಷ್ಟ ವ್ಯವಹಾರವನ್ನು 'ಲಂಕೇಶ್' ವಾರಪತ್ರಿಕೆ ತನಿಖೆ ಮಾಡಿ ಬಹಿರಂಗ ಪಡಿಸಿರುವಂತೆ ಇನ್ನಾವ ಪತ್ರಿಕೆಗೂ ಸಾಧ್ಯವಾಗಿಲ್ಲ, ಇದನ್ನು ನೋಡಿ ಮಿಕ್ಕೆಲ್ಲ ಪತ್ರಿಕೆಗಳೂ ಆಳುವವರ ಮುಲಾಜಿಗೆ ಬಲಿಯಾಗಿರಬಹುದೇ? ಎಂಬುದು ಎಲ್ಲ ಸೂಕ್ಷ್ಮ ಮನಸ್ಸಿನ ಓದುಗರ ಪ್ರಶ್ನೆಯಾಗಿದೆ.

ಗಣಿ ಕಪ್ಪ, ವೈಟ್ ಫೀಲ್ಡ್ ಬಳಿಯ ಕಟ್ಟಡ ಖರೀದಿ, ಮೈಸೂರು-ಬೆಂಗಳೂರು ಕಾರಿಡಾರ್ ರಸ್ತೆಗೆ ಅಂಟಿಕೊಂಡ ಭೂಮಿ ಅವ್ಯವಹಾರದ ಕುರಿತು ಖಚಿತ ದಾಖಲೆ ಸಹಿತ ಪತ್ರಿಕೆ ಬಯಲಿಗಿಟ್ಟಿದೆ. ಗೌರಿ ಲಂಕೇಶರೇ, ನಿಮ್ಮ ಪತ್ರಿಕಾಧರ್ಮ ಪಾಲನೆಗಾಗಿ ಹೃತ್ಪೂರ್ವಕ ಧನ್ಯವಾದಗಳು.


ಆದರೆ ನಮಗೊಂದೇ ಸಂಶಯ. ದಾಖಲೆಗಳೇ ಗೌಡರ ಕುಟುಂಬದ ಭೂ ಕಬಳಿಕೆ, ಭ್ರಷ್ಟಾಚಾರಗಳನ್ನು ಸಾಬೀತುಪಡಿಸಿರುವಾಗ ಇವರು 'ಮಾನನಷ್ಟ ಮಾನನಷ್ಟ' ಎಂದು ಉದ್ಧಟವಾಗಿ ಮಾತಾಡುತ್ತಾರಲ್ಲಾ? ಈ ಮಣ್ಣಿನ ಮಕ್ಕಳಿಗೇನಾದರೂ ಮಾನ ಎಂಬ ಶಬ್ದಕ್ಕೆ ಅರ್ಥವಾದರೂ ಗೊತ್ತಿದೆಯಾ? ಮಾನ ಎಂಬುದು ನಷ್ಟವಾಗುವುದು ಅದು ಇದ್ದವರಿಗೆ ಮಾತ್ರ ಅಲ್ಲವೇ? ಖಾಲಿ ಕಿಸೆಯವನ ಪಿಕ್‌ಪಾಕೆಟ್ ಮಾಡುವುದು ಯಾವ ಕಳ್ಳ ಖದೀಮನಿಂದಲೂ ಸಾಧ್ಯವೇ?

-ಕೆ.ಜೆ. ಶೆಟ್ಟಿ, ಕದಂದಲೆ

ಹೊಗಳಿಕೆ

ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ 'ಹ್ಯಾಟ್ರಿಕ್ ಹೀರೋನ ಹಾರ್ಟ್‌ಬೀಟ್' ಅಂಕಣ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಶಿವರಾಜ್ ಅವರ ಜೀವನದ ರಸವತ್ತಾದ ಕ್ಷಣಗಳು ನಮಗೆ ತುಂಬಾ ಸಂತೋಷವನ್ನು ಕೊಡುತ್ತಿವೆ. ಪ್ರತಿ ವಾರ ತಪ್ಪದೇ ಓದುವ ನಾವು ಪತ್ರಿಕೆಗೆ ತುಂಬಾ ಚಿರಋಣಿಗಳಾಗಿದ್ದೇವೆ. ಇಂತಹ ಪ್ರಯತ್ನ ಮಾಡಿದ ಪತ್ರಿಕೆಗೆ ಮತ್ತು ಸದಾಶಿವ ಶೆಣೈರವರಿಗೆ ನಮ್ಮ ತುಂಬು ಹೃದಯದ ಅಭಿನಂದನೆಗಳು.

ಬಿ.ಛತ್ರಯ್ಯ- ರಾಯಚೂರು



ಚಿಂತನೆಗೆ ಹಚ್ಚಿದ 'ಲಂಕೇಶ್'

ಬಯಲು ಸೀಮೆಯ 'ಕಟ್ಟೆಪುರಾಣ'
ಯಾಹೂವಿನ 'ಥೂತ್ತೇರಿ'
ಎಚ್‌ಎಲ್‌ಕೆ ಅವರ 'ಅಣಕ'
ಮನಕೆ ಮುದ ನೀಡಿತು

ಗೌರಿ ಅವರ 'ಕಂಡಹಾಗೆ'
ಹಸೀನಾಳ 'ಸೋಲೊಪ್ಪದ ಗೆಲುವು'
ಪೀರ್‌ಬಾಷಾರ 'ಗದ್ಯಕಾವ್ಯ'
ಗಮನ ಸೆಳೆಯಿತು

ಅಂತೆಯೇ ಪಾಂಡವಪುರದ
ವ್ಯಕ್ತಿಗತ ಘರ್ಷಣೆಗೆ ಕೋಮು
ಬಣ್ಣ ಕಟ್ಟುವವರನ್ನು ಧಿಕ್ಕರಿಸಿದ
ನಾಗರಿಕ ಪ್ರಜ್ಞೆ ಮೆಚ್ಚುಗೆಯಾಯಿತು

ಗೌಡರ ಕುಟುಂಬದ ಭ್ರಷ್ಟಾಚಾರ
ಹೆಣವಾದ ಪತ್ರಕರ್ತನ ದುರಾಚಾರ
ಓದಿ ವ್ಯಥೆಯಾಯಿತು
ಒಟ್ಟಾರೆ ಸೆ.6 ಸಂಚಿಕೆ
ಪುಟ ಪುಟವೂ ಸೆಳೆಯಿತು
ಚಿಂತನೆಗೆ ಹಚ್ಚಿತು

-ಅನಾರ್ಕಲಿ ಸಲೀಂ. ಶ್ರೀರಂಗಪಟ್ಟಣ



ಕಾಲೇಜು ಜೀವನಕ್ಕೂ ಫಿಲ್ಮ್ ಇನ್‌ಸ್ಟಿಟ್ಯೂಟಿನ ಜೀವನಕ್ಕೂ ಅಜಗಜಾಂತರ ವ್ಯತ್ಯಾಸವಿತ್ತು. ನಾನು ಫಿಲ್ಮ್ ಇನ್‌ಸ್ಟಿಟ್ಯೂಟಿಗೆ ಕಾಲಿಟ್ಟಾಗ ಮತ್ತೆ ಏಕಾಂಗಿಯಾದೆ. ಹೊಸ ವಾತಾವರಣ, ಹೊಸ ಜನ, ಹೊಸ ರೀತಿಯ ಪಾಠಗಳು... ಇದೆಲ್ಲದರ ನಡುವೆ ನನ್ನ ನಟನಾ ಶಾಲೆಯ ಅನುಭವ...!

ನಟನಾ ಶಾಲೆಯ ಅನುಭವ



"ನೀನು ಮದರಾಸಿನ ಫಿಲ್ಮ್ ಇನ್‌ಸ್ಟಿಟ್ಯೂಟಿಗೆ ಯಾಕೆ ಸೇರಬಾರದು? ಅಲ್ಲಿ ಒಳ್ಳೆ ಎಕ್ಸ್‌ಪೀರಿಯನ್ಸ್ ಸಿಗುತ್ತದೆ" ಎಂದು ಅಪ್ಪಾಜಿಯವರು ಹೇಳಿದರು. ನನಗೂ ಅದು ಸರಿಯೆನ್ನಿಸಿತು. ನಾನು ಒಬ್ಬನೆ ಮನೆಯಲ್ಲಿ ಸ್ಟಂಟ್ಸ್ ಕಲಿಯುವ ಬದಲಾಗಿ ಫಿಲ್ಮ್ ಇನ್‌ಸ್ಟಿಟ್ಯೂಟಿಗೆ ಹೋದರೆ ಅಲ್ಲಿ ಏನಾದರೂ ಹೊಸತನ್ನು ಕಲಿಯಬಹುದೆಂಬ ಉತ್ಸಾಹ, ಆಸಕ್ತಿ ಹುಟ್ಟಿ ಕೊಂಡಿತು.

ಅದೇ ಹೊತ್ತಿಗೆ ಮೊದಲ ಬಾರಿಗೆ ನಮ್ಮ ಮನೆಯವರು ನನಗೆ ಕಾರು ತೆಗೆಸಿಕೊಟ್ಟರು. ಅದು ಮಾರುತಿ-800. ಕಾಲೇಜು ಜೀವನವನ್ನೆಲ್ಲ ಬಸ್ಸಿನಲ್ಲೇ ಕಳೆದಿದ್ದ ನನಗೆ ಅದೊಂದು ರೀತಿಯಲ್ಲಿ ಥ್ರಿಲ್ ನೀಡಿತು. ಏಕೆಂದರೆ ನಮ್ಮ ಮನೆಯಲ್ಲಿ ನಾಲ್ಕೈದು ಕಾರುಗಳಿದ್ದರೂ ಎಂದೂ ಕಾರಿನಲ್ಲಿ ಕಾಲೇಜಿಗೆ ಹೋಗುವ ಪರಿಪಾಠವನ್ನು ನಮ್ಮ ಮನೆಯಲ್ಲಿ ಬೆಳೆಸಿರಲಿಲ್ಲ, ಆದ್ದರಿಂದ ಆ ಮೊತ್ತಮೊದಲ ಕಾರ್‌ಗೂ ನನಗೂ ಅವಿನಾಭಾವ ಸಂಬಂಧ ಏರ್ಪಟ್ಟಿತು. ಕಾರು ಇರುವುದೇ ಸ್ಪೀಡಾಗಿ ಓಡಿಸಲು ಎಂದು ನಂಬಿಕೊಂಡಿದ್ದ ನಾನು ಮದರಾಸಿನ ರಸ್ತೆಗಳಲ್ಲಿ ಅದನ್ನು ಸ್ಪೀಡಾಗಿ ಓಡಿಸುತ್ತಿದ್ದೆ. ಗೆಳೆಯರನ್ನೆಲ್ಲ ಕಾರಿನಲ್ಲಿ ಕುಳ್ಳಿರಿಸಿಕೊಂಡು ಮದರಾಸಿನಲ್ಲೆಲ್ಲ ರೌಂಡು ಹೊಡೆಯುತ್ತಿದ್ದೆ.


ಫಿಲ್ಮ್ ಇನ್‌ಸ್ಟಿಟ್ಯೂಟಿಗೆ ಸೇರುವಾಗ ನನ್ನ ಕಾಲೇಜು ಗೆಳೆಯರಿಗೆ ಟಾಟಾ ಹೇಳಲು ಮನಸ್ಸೇ ಬರಲಿಲ್ಲ, ಅವರಿಗೂ ಅಷ್ಟೇ. ಆದರೆ ನಮ್ಮ ನಮ್ಮ ದಿಕ್ಕಿನಲ್ಲಿ ಹೋಗುವುದು ಅನಿವಾರ್ಯವಾಗಿತ್ತು, ತುಂಬ ಹತ್ತಿರದ ಗೆಳೆಯರನ್ನು, ನನ್ನ ಕಷ್ಟ ಕಾಲದಲ್ಲಿ ನನ್ನೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ನಿಂತ ಗೆಳೆಯರನ್ನೆಲ್ಲ ಬಿಟ್ಟು ಹೊಸ ವಾತಾವರಣಕ್ಕೆ ಅಡ್ಜಸ್ಟ್ ಆಗಬೇಕಿತ್ತು.

ಕಾಲೇಜು ಜೀವನಕ್ಕೂ ಫಿಲ್ಮ್ ಇನ್‌ಸ್ಟಿಟ್ಯೂಟಿನ ಜೀವನಕ್ಕೂ ಅಜಗಜಾಂತರ ವ್ಯತ್ಯಾಸವಿತ್ತು, ನಾನು ಫಿಲ್ಮ್ ಇನ್‌ಸ್ಟಿಟ್ಯೂಟಿಗೆ ಕಾಲಿಟ್ಟಾಗ ಮತ್ತೆ ಏಕಾಂಗಿಯಾದೆ. ಹೊಸ ವಾತಾವರಣ, ಹೊಸ ಜನ, ಹೊಸ ರೀತಿಯ ಪಾಠಗಳು... ಇದೆಲ್ಲದಕ್ಕೆ ಅಡ್ಜಸ್ಟ್ ಆಗುವುದಕ್ಕೆ ಮತ್ತೆ ಸಮಯ ಬೇಕಿತ್ತು.

ನಾನಿದ್ದ ಕ್ಲಾಸಿನಲ್ಲಿ ಒಟ್ಟು ಇಪ್ಪತ್ತು ಜನ ವಿದ್ಯಾರ್ಥಿಗಳು. ಆ ಇಪ್ಪತ್ತರಲ್ಲಿ ಮೂರು ಜನ ಹುಡುಗರು ನನಗೆ ತುಂಬಾ ಆತ್ಮೀಯ ಸ್ನೇಹಿತರಾದರು. ಅವರ ಹೆಸರು ಗುರು, ಚಂದ್ರು ಮತ್ತು ಪಳನಿರಾಜ್. ಈಗ ಖ್ಯಾತ ಖಳನಟ ಆನಂದ್‌ರಾಜ್ ಇದ್ದಾರಲ್ಲ? ಅವರೇ ಈ ಪಳನಿ ರಾಜ್. ಗುರು ಮತ್ತು ಚಂದ್ರು ಕನ್ನಡದವರಾಗಿದ್ದರು.

ನಿರೂಪಣೆ: ಸದಾಶಿವ ಶೆಣೈ

19



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ನಮ್ಮ ತರಗತಿಯಲ್ಲಿ ಆರು ಜನ ಹುಡುಗಿಯರು ಕೂಡ ಇದ್ದರು. ಅವರಲ್ಲಿ ಮೂವರು ಮಲಯಾಳಿಗಳು, ಇಬ್ಬರು ತೆಲುಗಿನವರು, ಮತ್ತೊಬ್ಬಾಕೆ ಅಪ್ಪಟ ಕನ್ನಡದ ಹುಡುಗಿ. ಈ ಆರು ಜನರಲ್ಲಿ ಒಬ್ಬಾಕೆ ಗಗನಸಖಿಯಾಗಿದ್ದಾಳೆ. ಉಳಿದವರು ಎಲ್ಲಿದ್ದಾರೆ? ಏನು ಮಾಡುತ್ತಿದ್ದಾರೆ? ಎಂಬುದು ನನಗೆ ಗೊತ್ತಿಲ್ಲ, ಆದರೆ ಅವರ್‍ಯಾರೂ ನಾಯಕಿ ಅಥವಾ ನಟಿಯರಾಗಲಿಲ್ಲ ಎಂಬುದು ನಿಜ.

ಪಳನಿರಾಜ್ ಮತ್ತು ನಾನು ತುಂಬಾ ಕ್ಲೋಸ್ ಫ್ರೆಂಡ್ಸ್ ಆದೆವು. ನಾನು ಫಿಲ್ಮ್ ಇನ್‌ಸ್ಟಿಟ್ಯೂಟಿಗೆ ಹೋಗುವಾಗ ಅವನ ಮನೆಗೆ ಹೋಗಿ ಆತನನ್ನು ಪಿಕ್‌ಅಪ್ ಮಾಡಿ ಹೋಗುತ್ತಿದ್ದೆ. ಕಾಲೇಜು ಮುಗಿಸಿ ಮನೆಗೆ ಬರುವಾಗಲೂ ಅಷ್ಟೇ, ಆತನನ್ನು ಮನೆಗೆ ಡ್ರಾಪ್ ಮಾಡುತ್ತಿದ್ದೆ. ಹೀಗೆ ನಾನು ಮತ್ತು ಪಳನಿರಾಜ್ ಈ ಹೊಸ ವಾತಾವರಣದಲ್ಲಿ ಹೊಸ ಗೆಳೆಯರಾಗಿದ್ದೆವು.

ಮೊದಲೇ ಹೇಳಿದಂತೆ ಇನ್‌ಸ್ಟಿಟ್ಯೂಟಿನ ವಾತಾವರಣ, ಕಲಿಸುವ ಶೈಲಿ ಎಲ್ಲವೂ ವಿಭಿನ್ನವಾಗಿತ್ತು, ಕಾಲೇಜಿನಲ್ಲಿದ್ದಂತೆ ನಾವು ಇಲ್ಲಿ ಬೆಂಚು ಮತ್ತು ಡೆಸ್ಕುಗಳನ್ನು ಯೂಸ್ ಮಾಡುತ್ತಿರಲಿಲ್ಲ, ನಾವೆಲ್ಲಾ ಒಂದು ಅರ್ಧ ವೃತ್ತಾಕಾರದಲ್ಲಿ ಕುಳಿತುಕೊಳ್ಳುತ್ತಿದ್ದೆವು. ಹಾಗೆ ಕುಳಿತುಕೊಳ್ಳಲು ಎಲ್ಲರಿಗೂ ಸೋಫಾ ಹಾಕಿದ್ದರು. ಸೋಫಾದಲ್ಲಿ ನಾವು ಆರಾಮವಾಗಿ ಕುಳಿತುಕೊಂಡರೆ ನಮ್ಮ ಎದುರಿಗೆ ಮಧ್ಯದಲ್ಲೊಂದು ಬೋರ್ಡು ಇರುತ್ತಿತ್ತು, ಅದೊಂದು ಚಿಕ್ಕ ವೇದಿಕೆಯೂ ಆಗಿತ್ತು, ಇಂತಹ ರೂಮಿನಲ್ಲಿ ಅಧ್ಯಾಪಕರು ಪಾಠ ಕಲಿಸುತ್ತಿದ್ದರು. ನಮಗೆ ಒಟ್ಟು ನಾಲ್ಕು ಜನ ಅಧ್ಯಾಪಕರು ನಟನೆಯ ಬಗ್ಗೆ ಕಲಿಸುತ್ತಿದ್ದರು. ಅವರಲ್ಲಿ ಚಂದ್ರಮೋಹನ್ ಲಾಯರ್, ಗೇಬ್ರಿಯಲ್, ವೈ.ಎಸ್.ವಿ. ರಾವ್ .... ಈ ಮೂವರ ಹೆಸರು, ವ್ಯಕ್ತಿತ್ವ ಹಾಗು ಮುಖಚಹರೆ ಈಗಲೂ ನೆನಪಿದೆ. ಆದರೆ ನಾಲ್ಕನೆಯ ಅಧ್ಯಾಪಕರ ಹೆಸರು ಯಾಕೋ ಏನೋ ಮರೆತುಹೋಗಿದೆ. ಆದರೆ ಅವರು ತುಂಬಾ ಚೆನ್ನಾಗಿ ಪಾಠ ಹೇಳಿಕೊಡುತ್ತಿದ್ದರು.

ಇವರೆಲ್ಲಾ ನಮಗೆ ಪಾಠ ಹೇಳಿಕೊಡುವಾಗ ಒಂದು ದೃಶ್ಯದ ನಟನೆಯನ್ನು ಹೇಗೆ ಮಾಡಬೇಕು, ಅದನ್ನು ಇನ್ನೂ ಹೇಗೆ ಇಂಪ್ರೂವ್ ಮಾಡಿಕೊಳ್ಳಬಹುದು, ಆಕ್ಷನ್ ಮೆಮೊರಿಯನ್ನು ಹೇಗೆ ಉಳಿಸಿಕೊಳ್ಳಬೇಕು, ಡೈಲಾಗ್ ಡೆಲಿವರಿಯನ್ನು, ಮಾತಿನ ಏರಿಳಿತವನ್ನು ಹೇಗೆ ರೂಢಿ ಮಾಡಿಕೊಳ್ಳಬೇಕು ಎಂಬಿತ್ಯಾದಿ ವಿಷಯಗಳ ಬಗ್ಗೆ ತಿಳಿಸುತ್ತಿದ್ದರು. ಎಲ್ಲ ಪಾಠಗಳೂ ಪ್ರಾಕ್ಟಿಕಲ್ ಮತ್ತು ಥಿಯರಿ ರೂಪದಲ್ಲಿರುತ್ತಿದ್ದವು. ಹೀಗಾಗಿ ಫಿಲ್ಮ್ ಇನ್‌ಸ್ಟಿಟ್ಯೂಟಿನಲ್ಲಿ ಪಾಠ ಕಲಿಯುವುದು ಒಂಥರಾ ಹೊಸ ಅನುಭವವನ್ನು ನೀಡುತ್ತಿತ್ತು.

ಮಧ್ಯಾಹ್ನದ ಹೊತ್ತು ಅಲ್ಲೇ ಇದ್ದ ಕ್ಯಾಂಟಿನ್‌ನಲ್ಲಿ ನಾವೆಲ್ಲಾ ಹುಡುಗ-ಹುಡುಗಿಯರು ಒಟ್ಟಿಗೇ ಊಟ ಮಾಡುತ್ತಿದ್ದೆವು. ಕೆಲವೊಮ್ಮೆ ಮನೆಯಿಂದ ಯಾರಾದರೂ ಊಟ ತಂದರೆ ಅದನ್ನು ಎಲ್ಲರೂ ಹಂಚಿಕೊಳ್ಳುತ್ತಿದ್ದೆವು. ಕ್ಯಾಂಟೀನ್‌ನಲ್ಲಿ ಊಟ ಮಾಡುವಾಗಲೂ ಹೆಚ್ಚಾಗಿ ನಾವು ಪಾಠದ ವಿಷಯವನ್ನೇ ಚರ್ಚಿಸುತ್ತಿದ್ದೆವು. ನಮ್ಮಲ್ಲಿ ಯಾರಾದರು ಹೊಸ ಅಥವಾ ಪ್ರಮುಖ ಸಿನಿಮಾ ನೋಡಿದ್ದರೆ, ಆ ಸಿನಿಮಾದಲ್ಲಿ ನಾಯಕ, ನಾಯಕಿಯ ನಟನೆ ಬಗ್ಗೆ ಚರ್ಚಿಸುತ್ತಿದ್ದೆವು. ಇದು ಕೂಡ ನಮ್ಮ ಪಠ್ಯಕ್ರಮ ಅಲ್ಲವೇ?

ನಾವು ನಮ್ಮ ನಟನಾ ತರಗತಿ ಮಾತ್ರವಲ್ಲ, ಪಕ್ಕದಲ್ಲಿದ್ದ ಛಾಯಾಗ್ರಹಣ ಮತ್ತು ಡ್ಯಾನ್ಸಿಂಗ್ ಕ್ಲಾಸ್‌ಗಳಿಗೂ ಆಗಾಗ ಭೇಟಿ ನೀಡುತ್ತಿದ್ದೆವು. ಛಾಯಾಗ್ರಹಣದ ವಿದ್ಯಾರ್ಥಿಗಳಿಗೆ ಪ್ರಾಕ್ಟಿಕಲ್ ಸಂದರ್ಭದಲ್ಲಿ ಕನಿಷ್ಟ ನೂರು ಜನ ಮಾಡಲ್‌ಗಳು ಬೇಕಾಗಿರುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ನಾವೆಲ್ಲಾ ಅವರಿಗೆ ಸಹಕರಿಸುತ್ತಿದ್ದೆವು. ಕೆಲವು ಬಾರಿ ಅವರು ತಮ್ಮ ಪ್ರಾಜೆಕ್ಟ್‌ಗಳಿಗೆ ನಮ್ಮನ್ನು ಮಾಡೆಲ್‌ಗಳಾಗಲು ಆಹ್ವಾನಿಸುತ್ತಿದ್ದರು.

ಇಂಥ ಸಂದರ್ಭದಲ್ಲಿ ನಾವು ಅನೇಕ ಬಾರಿ ಅವರ ಜಾಹೀರಾತುಗಳಿಗೆ ರೂಪದರ್ಶಿಗಳಾಗಿ ಕೆಲಸ ಮಾಡಿದ್ದುಂಟು. ನಿರ್ದೇಶನ ಕಲಿಯುತ್ತಿದ್ದ ವಿದ್ಯಾರ್ಥಿಗಳು ಬರೆದ ಚಿತ್ರಕತೆಯಲ್ಲಿ ನಾವೆಲ್ಲ ನಟಿಸಿದ್ದೂ ಉಂಟು. ಇದೆಲ್ಲ ನಮಗೆ ಪ್ರಾಕ್ಟಿಕಲ್ ಆಗಿ ಉತ್ತಮ ಅನುಭವವನ್ನು ನೀಡುತ್ತಿತ್ತು, ಇದಕ್ಕೇ ಹೇಳಿದ್ದು ಕಾಲೇಜಿನಲ್ಲಿರುವ ವಾತಾವರಣಕ್ಕೂ, ಇಲ್ಲಿಯ ವಾತಾವರಣಕ್ಕೂ ಅಜಗಜಾಂತರ ವ್ಯತ್ಯಾಸವಿತ್ತು ಎಂದು.

ಪಳನಿರಾಜನಿಗೆ ಮದ್ರಾಸಿನಲ್ಲಿ ಮನೆ ಇದ್ದು, ನನ್ನ ಗೆಳೆಯರಾದ ಗುರು ಮತ್ತು ಚಂದ್ರು ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದರು. ಹಲವೊಮ್ಮೆ ಇವರಿಬ್ಬರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿ ನಾವೆಲ್ಲ ಊಟಮಾಡುತ್ತಿದ್ದೆವು. ಹಾಗೆಯೆ ಗುರು ಮತ್ತು ಚಂದ್ರು ಜೊತೆ ಅನೇಕ ದಿನ ಮತ್ತು ರಾತ್ರಿಗಳನ್ನು ಅವರ ಹಾಸ್ಟೆಲ್‌ನಲ್ಲಿ ಕಳೆಯುತ್ತಿದ್ದೆ, ಹಾಗೆ ಉಳಿದುಕೊಂಡಾಗಲೆಲ್ಲ ನಾವೇ ಅಡುಗೆ ಮಾಡಿಕೊಂಡು, ನಾವೇ ಬಡಿಸಿಕೊಂಡು ಊಟ ಮಾಡುತ್ತಿದ್ದೆವು. ಅದೆಲ್ಲ ನನಗೆ ತುಂಬಾ ಆನಂದವನ್ನು ನೀಡುತ್ತಿತ್ತು, ಹಾಗೆಯೇ ರಾಜ್‌ಕುಮಾರ್ ಅವರ ಮಗ ತಮ್ಮ ಹಾಸ್ಟೆಲ್ಲಿಗೆ ಬಂದಿದ್ದ ಎಂಬುದು ಅಲ್ಲಿಯ ಹುಡುಗರಿಗೆಲ್ಲ ಸಂತೋಷ ಕೊಡುತ್ತಿತ್ತು.

ಈ ಮೂವರಲ್ಲಿ ಗುರು ಅತ್ಯುತ್ತಮ ಸಂಗೀತಗಾರ. ಆತ ಮೂಲತಃ ತೆಲುಗಿನವನಾದರೂ ಕನ್ನಡದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ. ಅದರಲ್ಲೂ ಅಪ್ಪಾಜಿಯವರ ಬಹುತೇಕ ಎಲ್ಲ ಹಾಡುಗಳನ್ನೂ ಹಾಡುತ್ತಿದ್ದ. ಈ ಹಾಡುಗಳನ್ನು ಕೇಳುತ್ತಾ ಹಾಸ್ಟೆಲ್‌ನ ಮಹಡಿಯ ಮೇಲೆ ಕೂತು ಆಕಾಶದಲ್ಲಿದ್ದ ನಕ್ಷತ್ರಗಳನ್ನು ನೋಡುತ್ತ ನಾನು ಕಂಡ ಕನಸುಗಳಿಗೆ ಲೆಕ್ಕವೇ ಇಲ್ಲ, ಅದು ಕನಸು ಕಾಣುವ ವಯಸ್ಸು ತಾನೆ?

ಫಿಲ್ಮ್ ಇನ್‌ಸ್ಟಿಟ್ಯೂಟಿನಲ್ಲಿ ಒಂದು ಸ್ಕ್ರಿಪ್ಟಿಗೆ ನಟಿಸಿ ಒಂದು ಕಿರುಚಿತ್ರ ತಯಾರಿಸಿದ್ದೆವು. ಅದನ್ನು ನೋಡಿ ಕ್ಯಾಲಿಫೋರ್ನಿಯಾ ಯೂನಿವರ್ಸಿಟಿಯ ವಿದ್ಯಾರ್ಥಿಗಳು ಆಶ್ಚರ್ಯಪಟ್ಟಿದ್ದರು. ಆ ಸ್ಕ್ರಿಪ್ಟಿನಲ್ಲಿ ಇದ್ದ ಎಮೋಷನ್ಸ್ ಮತ್ತು ಸೆಂಟಿಮೆಂಟುಗಳನ್ನು ಅವರು ತುಂಬಾ ಇಷ್ಟಪಟ್ಟರು. ಅದನ್ನು ಬಾಯ್ತುಂಬ ಹೊಗಳಿದರು. ಅಷ್ಟೇ ಅಲ್ಲ ಅವರು ಈ ಚಿತ್ರಕತೆಯನ್ನು ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದಾಗ ನಮಗೆ ಆದ ಸಂತೋಷ ಅಷ್ಟಿಷ್ಟಲ್ಲ.

ಈ ಚಿತ್ರಕತೆಯನ್ನು ನಾವೇ ವಿದ್ಯಾರ್ಥಿಗಳೇ ಕುಳಿತು ರಚಿಸಿದ್ದೆವು. ನಮ್ಮ ನಮ್ಮಲ್ಲೇ ಚರ್ಚಿಸಿ, ಹೊಸ ಹೊಸ ಐಡಿಯಾಗಳನ್ನು ಸೇರಿಸಿ ತಯಾರಿಸಿದ್ದೆವು. ಅದನ್ನು ತಯಾರಿಸಿದ ಪ್ರತೀ ಕ್ಷಣವನ್ನೂ ನಾನು ಎಂಜಾಯ್ ಮಾಡಿದ್ದೆ. ಟೀಂ ಎಫರ್ಟಿನ ಮಹತ್ವ ನನಗೆ ಗೊತ್ತಾಗಿದ್ದೇ ಆಗ.

ಇಪ್ಪತ್ತು ಜನರಿದ್ದ ನಮ್ಮ ತಂಡದಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯವಿರಲಿಲ್ಲ, ಇನ್ನೊಂದು ರೀತಿಯಲ್ಲಿ ಹೇಳ ಬೇಕೆಂದರೆ, ನಾವೆಲ್ಲಾ ಒಂದು ಕ್ರಿಕೆಟ್ ತಂಡದಂತೆ ಜೊತೆ ಗೂಡಿ ಕೆಲಸ ಮಾಡುತ್ತಿದ್ದೆವು. ಹೀಗಾಗಿ ಯಶಸ್ಸು ಬಂದಾಗ ಎಲ್ಲರೂ ಸೇರಿ ಎಂಜಾಯ್ ಮಾಡುತ್ತಿದ್ದೆವು.

ಹೀಗೆ ನಾನು ಇನ್‌ಸ್ಟಿಟ್ಯೂಟಿನಲ್ಲಿ ಕಲಿಯುತ್ತಿದಾಗ ನಮ್ಮ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ಕಗ್ಗೊಲೆಯಾಯಿತು. ಇಡೀ ದೇಶದಂತೆ ಆ ಸುದ್ದಿ ಕೇಳಿ ನನಗೂ ಶಾಕ್ ಆಗಿತ್ತು, ಅವರ ಕಾವಲುಗಾರರೇ ಅವರನ್ನು ಕೊಂದ ವಿಷಯ ಕೇಳಿದಾಗ ಮತ್ತಷ್ಟು ಬೇಸರವಾಯಿತು. ಅದಾದ ಎರಡು ದಿನದ ನಂತರ ದೆಹಲಿಯಲ್ಲಿ ಸಿಖ್ಖರ ಮಾರಣಹೋಮ ಪ್ರಾರಂಭವಾಯಿತು. ಮದರಾಸಿನಲ್ಲೂ ಜನ ಸಿಖ್ ಜನಾಂಗದವರನ್ನು ಹಿಡಿದು ಹೊಡೆಯಲಾರಂಭಿಸಿದರು.

ಇದನ್ನು ಕೇಳಿ ನನಗೆ ತುಂಬಾ ಬೇಸರವಾಗಿತ್ತು, ಒಂದು ದಿನ ನಾನು ಕಾಲೇಜಿನಿಂದ ಮನೆಗೆ ಹೋಗುತ್ತಿದ್ದಾಗ ಹಲವು ದುಷ್ಕರ್ಮಿಗಳು ನಾಲ್ಕೈದು ಪುಟ್ಟ ಸಿಖ್ ಹುಡುಗರನ್ನು ಹಿಡಿದು ಹೊಡೆಯುತ್ತಿದ್ದದ್ದನ್ನು ನೋಡಿದೆ. ತಕ್ಷಣವೇ ನನ್ನ ಕಾರ್ ನಿಲ್ಲಿಸಿ ಆ ಮಕ್ಕಳನ್ನು ಅವರಿಂದ ಬಿಡಿಸಿ ನನ್ನ ಕಾರಿಗೆ ಹತ್ತಿಸಿಕೊಂಡೆ. ಇದನ್ನು ಸಹಿಸದ ಆ ಕಿಡಿಗೇಡಿಗಳು ನನ್ನ ಕಾರಿನ ಗಾಜನ್ನೇ ಒಡೆದುಹಾಕಿದರು.

ಆ ಗಲಾಟೆಯ ನಡುವೆಯೂ ಅದು ಹೇಗೊ ನಾನು ಆ ಸಿಖ್ ಹುಡುಗರನ್ನು ಅವರವರ ಮನೆಗಳಿಗೆ ತಲುಪಿಸಿದ್ದೆ. ಯಾವುದೇ ಹೀರೋಯಿಸಂ ತೋರಿಸುವ ಕಾರಣಕ್ಕೆ ನಾನು ಇದನ್ನೆಲ್ಲ ಮಾಡಿರಲಿಲ್ಲ, ಬದಲಾಗಿ ನಿರಪರಾಧಿಗಳನ್ನು ಯಾರೇ ಹೊಡೆದರೂ ಅದನ್ನು ಸಹಿಸಿಕೊಳ್ಳಲು ನನ್ನಿಂದ ಸಾಧ್ಯವಾಗುವುದಿಲ್ಲ, ಅಂತಹ ಅನ್ಯಾಯವನ್ನು ಕಂಡಾಗಲೆಲ್ಲ ನನ್ನ ರಕ್ತ ಕುದಿಯುತ್ತದೆ. ಯಾರು ಹೊಡೆಯುತ್ತಿದ್ದಾರೆ? ಯಾಕೆ ಹೊಡೆಯುತ್ತಿದ್ದಾರೆ? ಎಂದೆಲ್ಲ ನೋಡದೆ ಅಖಾಡಕ್ಕಿಳಿಯುವ ಜಾಯಮಾನ ನನ್ನದು. ಏಕೆಂದರೆ, ಹಲ್ಲೆಗೆ ಗುರಿಯಾಗುತ್ತಿರುವವರನ್ನು ಉಳಿಸುವುದಷ್ಟೇ ನನ್ನ ಉದ್ದೇಶವಾಗಿರುತ್ತೆ.

ಯಾವುದೇ ಟೆನ್ಶನ್ ಇಲ್ಲದೇ ಫ್ರೆಂಡ್ಸ್ ಜೊತೆ ಫ್ರೀ ಬರ್ಡ್ ಆಗಿ ಹಾರಾಡುತ್ತಿದ್ದ ನಾನು ನನಗರಿವಿಲ್ಲದಂತೆಯೇ ಆ್ಯಂಗ್ರಿ ಯಂಗ್ ಮ್ಯಾನ್ ಆಗಿ ಪರಿವರ್ತನೆಗೊಂಡಿದ್ದು ನನಗೇ ಆಶ್ಚರ್ಯವಾಗಿತ್ತು.....

(ಮುಂದುವರೆಯುವುದು...)



ಕಾಂಬ್ಳಿ: ಸೆಕೆಂಡ್ ಇನ್ನಿಂಗ್ಸ್!

ಫಸ್ಟ್ ಇನ್ನಿಂಗ್ಸ್‌ನಲ್ಲಿ ಮುಗ್ಗರಿಸಿದ ವಿನೋದ್ ಕಾಂಬ್ಳಿ ಸೆಕೆಂಡ್ ಇನ್ನಿಂಗ್ಸ್‌ಗೆ ಪ್ಯಾಡ್ ಅಪ್ ಆಗಿದ್ದಾನೆ.

ಈ ಸಲ ಆತನ ಜೊತೆ 'ಬ್ಯಾಟಿಂಗ್' ಮಾಡುವಾಕೆಯ ಹೆಸರು ಆಂಡ್ರಿಯಾ ಹೆವಿಟ್.... ಈಕೆ ಮಾಡೆಲ್ ಅಂತೆ....

ಕಾಂಬ್ಳಿ ಯಾಕೆ ಇಷ್ಟ? ಎಂದರೆ ಆಂಡ್ರಿಯಾ ಹೇಳ್ತಾಳೆ: "ಕಷ್ಟದ ಕ್ಷಣಗಳಲ್ಲೂ ಜನ ನಗುವಂತೆ ಮಾಡಲು ಕಾಂಬ್ಳಿ ಯತ್ನಿಸುತ್ತಾನೆ...."

ಅರೆ ಆಂಡ್ರಿಯಾ ಚಿನ್ನಾ, ಭಾರತ ತಂಡ ಕಷ್ಟದ ಕ್ಷಣಗಳಲ್ಲಿದ್ದಾಗ ಈ ಕಾಂಬ್ಳಿ ಮಹಾಶಯ ಪ್ರೇಕ್ಷಕರನ್ನು ಖುಷಿಗೊಳಿಸಲು ಯತ್ನಿಸುತ್ತಿದ್ದ, ಕಿವಿಗೆ ರಿಂಗ್ ಹಾಕಿ, ತಲೆ ಬೋಳಿಸಿಕೊಂಡು ಗಿಮಿಕ್ ಮಾಡುತ್ತಿದ್ದ... ಬ್ಯಾಟಿಂಗ್‌ನಲ್ಲಿ ಡಕ್ ಹೊಡೆದು ಭಾರತಕ್ಕೆ ಸೋಲು ತರುತ್ತಿದ್ದ... ಇಂತಹ ಈ ಗುಣ ನಿನಗೆ ಲೈಕ್ ಆಯ್ತಾ ಆಂಡ್ರಿಯಾ ಡಾರ್ಲಿಂಗ್?

ಶಾಟ್ ಕಟ್

ಶಿವಾದಲ್ಲಿ ನಿಶಾ....

ಮತ್ತೊಮ್ಮೆ 'ಶಿವಾ' ಬರ್ತಿದ್ದಾನೆ.

ಅದೇ ರಾಮ್‌ಗೋಪಾಲ್ ವರ್ಮಾನ 'ಶಿವಾ' ಹೊಸ ರೂಪದಲ್ಲಿ ದಾಳಿ ಇಡುತ್ತಿದ್ದಾನೆ. ಗೊತ್ತಲ್ಲ, ಸೈಕಲ್ ಚೈನ್‌ನ್ನೇ ಪಂಚ್‌ನಂತೆ ಉಪಯೋಗಿಸುವ ಶಿವಾ....

ಅದರ ಮುಂದುವರೆದ ಭಾಗ ಬರುತ್ತಿದೆ. ಬರೀ ಅಂಡರ್‌ವರ್ಲ್ಡ್ ಕತೆಯಲ್ಲ ಇದು... ಅಂಡರ್ ಕರೆಂಟೂ ಉಂಟು! ಅದು ನಿಶಾ ಕೊಠಾರಿ ಎಂಬ ಹೊಸ ಸೆಕ್ಸ್ ಬಾಂಬು...

Just see her here...

ಹೇಗೆ ಐತಾ?






ಮ್ಯಾನ್ ಈಟರ್ ಆಫ್ ಮಾಲ್ಗುಡಿ ಸುತ್ತ

ಸುಭಾಷ್ ಘಾಯ್ ಜೊತೆ.....

ಬಾಲಿವುಡ್‌ನ 'ಶೋ ಮ್ಯಾನ್' ಎಂದೇ ಖ್ಯಾತಿ ಪಡೆದಿರುವ ಸುಭಾಷ್ ಘಾಯ್ FTIIನಲ್ಲಿ ತರಬೇತಿ ಪಡೆದವರು ಎಂದರೆ ಅಚ್ಚರಿಯಾಗಬಹುದು..ಆದರೆ FTIIನ ಇತರೆ ನಿರ್ದೇಶಕರಿಗಿಂತ ಕಮರ್ಷಿಯಲ್ ಸಿನಿಮಾಗಳಲ್ಲಿ ತಮ್ಮ ಛಾಪನ್ನು ಮೂಡಿಸಿ ಈಗ ಅರ್ಥಗರ್ಭಿತ 'ಮಿಡಲ್' ಸಿನಿಮಾಗಳಲ್ಲಿ ತೊಡಗಿದ್ದಾರೆ. ಘಾಯ್ ಮತ್ತು ಕವಿತಾ ಲಂಕೇಶ್ ನಡುವಿನ ಒಂದು ಭೇಟಿಯ ತುಣುಕುಗಳು ಇಲ್ಲಿವೆ...





ಬೆಂಗಳೂರಿಗೆ ಬಂದಿರುವ ಸುಭಾಷ್ ಘಾಯ್‌ರನ್ನು ಭೇಟಿಯಾಗುವಿರಾ ಎಂದು ಫ್ರೆಂಡ್ ಒಬ್ಬರು ಕೇಳಿದಾಗ ಆ ಕ್ಷಣದಲ್ಲೇ 'ಖಂಡಿತ ಭೇಟಿ ಆಗುವೆ' ಎಂದೆ. ಅರೆ, ಇಂತಹ ಚಾನ್ಸ್ ಮಿಸ್ ಮಾಡಿಕೊಳ್ಳೋದಕ್ಕಾಗುತ್ತಾ?

ಎರಡನೇ ತಾರೀಖು ರಾತ್ರಿ 8 ಗಂಟೆಗೆ ವಿಂಡ್ಸರ್ ಮ್ಯಾನರ್‌ನಲ್ಲಿ ನಮ್ಮ ಮೀಟಿಂಗ್ ಫಿಕ್ಸ್ ಆಗಿತ್ತು. ಇಶಾ ಹುಟ್ಟಿದ ನಂತರ ಮಹತ್ವವಲ್ಲದ ಮೀಟಿಂಗ್‌ಗಳು ಸಂಜೆ ಇದ್ದರೆ ನಾನು ಹೋಗುವುದನ್ನೇ ಬಿಟ್ಟಿದ್ದೇನೆ. ಆದರೆ ತಮ್ಮ 'ಮುಕ್ತಾ ಆರ್ಟ್ಸ್' ಕಂಪನಿ ಮೂಲಕ ಸೂಪರ್‌ಹಿಟ್ ಮತ್ತು ಅರ್ಥಪೂರ್ಣ ಚಿತ್ರಗಳನ್ನು ನೀಡುತ್ತಿರುವ ಘಾಯ್‌ರನ್ನು ಭೇಟಿ ಆಗುವುದು ಮುಖ್ಯವಾಗಿತ್ತು. ನನ್ನ ಫ್ರೆಂಡ್ ಮೂಲಕ ನನ್ನ ಇಲ್ಲಿವರೆಗಿನ ಸಿನಿಮಾ ಚಟುವಟಿಕೆಗಳ ಕುರಿತು ಸಂಕ್ಷಿಪ್ತ ವಿವರ ಪಡೆದಿದ್ದರು ಘಾಯ್. ಫಿಲ್ಮ್‌ಫೀಲ್ಡಿನವರು ವಿಶೇಷ ತಳಿಗಳು! ಇಬ್ಬರು ತಮಿಳರು ಸೇರಿದರೆ ತಮಿಳಲ್ಲೇ ಹರಟೆ ಕೊಚ್ಚುವಂತೆ, ಇಬ್ಬರು ಸಿನಿಮಾ ಮಾಡುವವರು ಸೇರಿದರೆ ಸಿನಿಮಾ ನಿರ್ಮಾಣದ ಕುರಿತು ಚರ್ಚೆ ಶುರು ಮಾಡೇಬಿಡ್ತಾರೆ. ಪ್ರಸಿದ್ಧ FTII (ಫಿಲ್ಮ್ ಅಂಡ್ ಟೆಲಿವಿಜನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ)ನ ವಿದ್ಯಾರ್ಥಿಯಾಗಿದ್ದ ಘಾಯ್, ಅದೇ ಸ್ಕೂಲ್‌ನಿಂದ ಬಂದ ಶ್ಯಾಮ್ ಬೆನಗಲ್, ಗಿರೀಶ್ ಕಾಸರವಳ್ಳಿ, ಗೋವಿಂದ ನಿಹಲಾನಿಯವರಂತೆ ಆಫ್‌ಬೀಟ್ ಚಿತ್ರ ನಿರ್ಮಾಣದತ್ತ ಆಸಕ್ತಿ ವಹಿಸಲಿಲ್ಲ. ಅವರು ಮೇನ್‌ಸ್ಟ್ರೀಮ್ ರೂಟ್ ಆಯ್ದುಕೊಂಡು ಮೆಗಾಹಿಟ್ ಚಿತ್ರಗಳನ್ನು ಕೊಟ್ಟರು. ಘಾಯ್ ಜೊತೆಗಿನ ನನ್ನ ಚರ್ಚೆ ಸಂದರ್ಶನದಂತೆ ನಡೆದಿದ್ದರಿಂದ ಆಯ್ದ ಭಾಗಗಳನ್ನು ನಿಮಗೆ ನೀಡುತ್ತಿರುವೆ.

ಘಾಯ್: ನಿಮಗೊಂದು ವಿಷಯ ಗೊತ್ತಾ? ನನ್ನ 'ಹೀರೋ', 'ಖಳನಾಯಕ್', 'ಸೌದಾಗರ್' ಮುಂತಾದ ಹಿಟ್ ಚಿತ್ರಗಳ ಸ್ಕ್ರಿಪ್ಟ್‌ಗಳನ್ನು ನಾನು ಬೆಂಗಳೂರಲ್ಲೇ ಬರೆದಿದ್ದು.

ಕವಿತಾ: ಬೆಂಗಳೂರಿನಲ್ಲಿ ನಿಮಗೆ ಸ್ಫೂರ್ತಿ ನೀಡುವಂತಹ ವಿಶೇಷವೇನಿದೆ?

ಘಾಯ್: ಬಾಲಿವುಡ್‌ನ ಗದ್ದಲದಿಂದ ದೂರ ಇದ್ದರೆ ಒತ್ತಡವೂ ಕಡಿಮೆ ಇರುತ್ತದೆ. ಇದೇ ಸ್ಫೂರ್ತಿಯಂತಾಗುತ್ತದೆ. ನೀವು ಇತ್ತೀಚೆಗೆ ನೋಡಿದ ಚಿತ್ರ ಯಾವುದು?

ಕವಿತಾ: (ನೆನಪಿಸಿಕೊಳ್ಳುತ್ತಾ) 'ಪೋಕ್ರಿ...' ನೀವು ಕೇಳಿರಲಿಕ್ಕಿಲ್ಲ. ಇದು ತೆಲುಗಿನ ಹೊಸ ಹಿಟ್ ಚಿತ್ರ. ಮತ್ತೆ 'ಓಂಕಾರ್' ಸಹ ನೋಡಿದೆ.

ಘಾಯ್: 'ಓಂಕಾರ್' ಇಷ್ಟವಾಯ್ತಾ?

ಕವಿತಾ: ತಾಂತ್ರಿಕವಾಗಿ ಅದ್ಭುತವಾಗಿದೆ. ಆದರೆ ಈ ಕಮರ್‌ಬಂಡ್ (ಢಾಬು) ಪರಿಕಲ್ಪನೆ ತುಂಬಾ ಹಳೆಯದೆನಿಸಿತು. ಕಲಾವಿದರ ನಟನೆ ಸೂಪರ್ಬ್. ಅದರಲ್ಲೂ ಸೈಫ್ ಅಲಿ ಖಾನ್ ನಟನೆ. ಆಶ್ಚರ್ಯಕರ ರೀತಿಯಲ್ಲಿ ನಟಿಸಿದ್ದಾನೆ. ಆತ ಇಂಡಸ್ಟ್ರಿಗೆ ಬಂದಾಗ ತಾಯಿ ಶರ್ಮಿಳಾ ಟಾಗೂರ್‌ನಂತೆಯೇ ಇದ್ದಾನೆ ನೋಡು ಎಂದು ನಾನು, ನನ್ನ ತಾಯಿ ಮಾತಾಡಿದ್ದೆವು.

ಘಾಯ್: ಸೈಫ್ ಮತ್ತು ಅಕ್ಷಯ್‌ಖನ್ನಾ ವಿಭಿನ್ನ ಸ್ಕೂಲ್‌ಗಳಿಂದ ಬಂದವರು. ನಿಮಗೀಗ ಕೇಳಿದಂತೆ ಅಕ್ಷಯ್ ಖನ್ನಾಗೂ ಕೇಳಿದ್ದೆ. ಆತ ಇಂಗ್ಲಿಷ್ ಸಿನಿಮಾಗಳ ಲಿಸ್ಟನ್ನೇ ಹೇಳಿದ್ದ. ಆತ ಒಂದೂ ಹಿಂದಿ ಸಿನಿಮಾ ನೋಡಿರಲಿಲ್ಲ. ಸೈಫ್ ಕೂಡ ಹೊಸತರಲ್ಲಿ ರೆಗ್ಯುಲರ್ ಮಸಾಲಾ ಹೀರೋ ತರಹ ನಟಿಸಲು ಯತ್ನಿಸಿದ್ದ. ಆದರೆ ಈಗ ಆತ ಸೈಫ್ ಆಗಿಯೇ ನಟಿಸುತ್ತಿರುವುದರಿಂದ ಅದ್ಭುತ ನಟನಾಗಿದ್ದಾನೆ.

ಕವಿತಾ: ಎಫ್.ಟಿ.ಐ.ಐ. ನಿಂದ ಬಂದ ನೀವು ನಿಮ್ಮ ಅಲ್ಲಿನ ಸಂಗಾತಿಗಳಂತೆ ಆಫ್‌ಬೀಟ್ ಸಿನಿಮಾ ಮಾಡದೇ ಕಮರ್ಷಿಯಲ್ ನತ್ತ ತಿರುಗುವುದು ಹೇಗೆ ಸಾಧ್ಯವಾಯ್ತು?

ಘಾಯ್: ನನ್ನ ಕನಸುಗಳ ವ್ಯಾಪ್ತಿ ವಿಶಾಲವಾದದ್ದು. ಈಗ ಮುಕ್ತಾ ಆರ್ಟ್ಸ್ ಮೂಲಕ ನಾನು ಸಣ್ಣ ಪ್ರಮಾಣದಲ್ಲಿ ಆಫ್‌ಬೀಟ್ ಚಿತ್ರಗಳನ್ನೂ ಮಾಡುತ್ತಿರುವೆ. ಒಂದು ಫಿಲ್ಮ್ ಕಂಪನಿಯನ್ನು ನಡೆಸುತ್ತಿರುವುದರಿಂದ ಇದು ಸಾಧ್ಯವಾಗಿದೆ. ವಿಶಾಲ ಕ್ಯಾನ್ವಾಸ್‌ನಲ್ಲಿ ನಾನು 'ಕಿಸ್ನಾ' ಮಾಡಬಲ್ಲೆ. ಹಾಗೆಯೇ ಇನ್ನೊಂದು ಕಡೆ 'ಇಕ್ಬಾಲ್' ನಿರ್ಮಿಸಬಲ್ಲೆ. ನಾವು ಪ್ರತಿವರ್ಷ ತಯಾರಿಸುವ 8 ರಿಂದ 10 ಫಿಲ್ಮ್‌ಗಳಲ್ಲಿ 4 ಆವರೇಜ್ ಹಿಟ್ ಆಗಬಹುದು. ಒಂದೆರಡು ಮೆಗಾ ಹಿಟ್ ಆಗಬಹುದು. ಒಂದು ನಾಲ್ಕು ಫ್ಲಾಪ್ ಕೂಡ ಆಗಬಹುದು. ಆದರೆ ಈ ಪ್ರಕ್ರಿಯೆಯಲ್ಲಿ ವಿಭಿನ್ನ ಚಿತ್ರಗಳನ್ನು ಮಾಡುತ್ತಿರಬಹುದು. 'ಇಕ್ಬಾಲ್' ಹೆಚ್ಚು ಹಣ ತಂದಿರಲಿಕ್ಕಿಲ್ಲ. ಆದರೆ ನಮ್ಮ ಸಂಸ್ಥೆಯ ಮೌಲ್ಯವನ್ನು ವೃದ್ಧಿಸಿದೆ. ಹಾಗೆಯೇ ನನ್ನ ಇನ್ನೊಂದು ಪ್ರೀತಿಯ ಪ್ರಾಜೆಕ್ಟ್ 'ಜಾಗರ್ಸ್ ಪಾರ್ಕ್' ಅನ್ನು ಹಲವಾರು ವರ್ಷಗಳಿಂದ ಮಾಡಬೇಕು ಅಂದುಕೊಂಡಿದ್ದೆ. ಅದು ಸಾಧ್ಯವಾಗಿದ್ದಕ್ಕೆ ಖುಷಿ ಇದೆ. '36-ಚೀನಾಗೇಟ್', 'ಶಾದಿ ಸೆ ಪೆಹಲೆ...' ಹೀಗೇ ಮುಂದುವರೆಯುತ್ತಾ ಇರುತ್ತೆ. ನೀವು 'ಕಭೀ ಅಲ್ವಿದ ನಾ ಕೆಹನಾ' ನೋಡಿದಿರಾ?

ಕವಿತಾ: (ನಾನು ಅಪರಾಧಿ ಭಾವನೆಯಲ್ಲಿ... ಏಕೆಂದರೆ ಎಲ್ಲರೂ ಅದನ್ನು ನೋಡಿರಬಹುದು ಅಥವಾ ಅದರ ಬಗ್ಗೆ ಕೇಳಿರಬಹುದು ಎಂದುಕೊಂಡು) ಅದು ಬೋರ್ ಹೊಡೆಯುತ್ತೆ ಅಂತಾ ಕೇಳಿರುವೆ. ನಂತರ ಬಿಡುವಾದಾಗ ನೋಡುವೆ.

ಘಾಯ್: (ನಗುತ್ತಾ) ಕರಣ್ ಜೋಹರ್ ಸಮಸ್ಯೆ ಏನೆಂದರೆ ಆತ ಎಲ್ಲ ಪಾತ್ರಗಳನ್ನೂ ಹೀರೋ ಮಾಡಲು ಬಯಸುತ್ತಾನೆ. ಅಲ್ಲಿ ದುಷ್ಟರಿರುವುದಿಲ್ಲ, ಕಪ್ಪು ನೆರಳಿರುವುದಿಲ್ಲ. ಅದಿರಲಿ, ನಿಮಗೆಂತಹ ಚಿತ್ರಗಳು ಇಷ್ಟ?

ಕವಿತಾ: ಬಹಳಷ್ಟು. ಇತ್ತೀಚೆಗೆ ನನ್ನನ್ನು ಡಿಸ್ಟರ್ಬ್ ಮಾಡಿ ಕಾಡಿದ್ದು 'ಮಾತೃಭೂಮಿ' (ಘಾಯ್ ಇದನ್ನು ನೋಡಿಲ್ಲ) ಮತ್ತು 'ಮೈನೆ ಗಾಂಧಿ ಕೊ ನಹಿ ಮಾರಾ'. ಅನುಪಮ್ ಖೇರ್ ಅತ್ಯದ್ಭುತ ಅಭಿನಯ ನೀಡಿದ್ದಾರೆ.

ಘಾಯ್: ನಿಮಗೆ ಹಾಗೆ ಅನಿಸಿತಾ? ವೈಯಕ್ತಿಕವಾಗಿ ಅನುಪಮ್ ಪರಿಚಯ ನನಗೆ ಇರುವುದರಿಂದ ಆತ ಓವರ್ ಆಕ್ಟ್ ಮಾಡಿದ್ದಾರೆ ಅನಿಸುತ್ತದೆ. ನನಗೆ ಊರ್ಮಿಳಾ ಮಾತೊಂಡ್ಕರ್ ಒಳ್ಳೆ ಅಭಿನಯ ನೀಡಿದ್ದಾಳೆ ಎನಿಸಿತು. ಒಬ್ಬ ನಟಿಯಾಗಿ ಆಕೆ ನಿಜವಾಗಿಯೂ ಎತ್ತರಕ್ಕೆ ಬೆಳೆದಿದ್ದಾಳೆ.

(ನಮ್ಮ ಮಾತುಕತೆ ಹೀಗೆ ಸಾಗುತ್ತಿದ್ದಾಗ ರಾತ್ರಿ 11 ಗಂಟೆಯಾಗಿತ್ತು. ಸಿನಿಮಾದ ಬಗ್ಗೆ ಬಹಳಷ್ಟು ಅರಿತಿರುವ, ಸಿನಿಮಾವನ್ನೇ ಪ್ರೀತಿಸುವ ಇಂತಹ ವ್ಯಕ್ತಿಯೊಂದಿಗೆ ಮಾತಾಡುತ್ತಾ ಇರುವುದು ಕುತೂಹಲಕರ. ವೇಳೆ ಬಹಳವಾಗಿದ್ದರಿಂದ ನಾನು ಭೇಟಿಗೆ ಬಂದ ಮುಖ್ಯ ಪಾಯಿಂಟ್‌ನತ್ತ ತಿರುಗಿದೆ.)

ಕವಿತಾ: ಡ್ರೀಮ್ ಪ್ರಾಜೆಕ್ಟ್‌ಗಳ ಕುರಿತು ಮಾತಾಡಿದೆವಲ್ಲ..... ನನ್ನಲ್ಲೂ ಅಂತಹದೊಂದಿದೆ. ಆರ್.ಕೆ. ನಾರಾಯಣ್‌ರವರ 'ಮ್ಯಾನ್ ಈಟರ್ ಆಫ್ ಮಾಲ್ಗುಡಿ' ಕಾದಂಬರಿ ಆಧರಿಸಿದ ಪ್ರಾಜೆಕ್ಟ್. ನಿಮ್ಮ ಕಂಪನಿಗೆ ಇದರಲ್ಲಿ ಇಂಟರೆಸ್ಟ್ ಇದೆಯಾ?

ಘಾಯ್: ಆರ್.ಕೆ. ನಾರಾಯಣ್ ಮತ್ತು ಮಾಲ್ಗುಡಿ ಬಗ್ಗೆ ಯಾರಿಗೆ ಗೊತ್ತಿಲ್ಲ ಹೇಳಿ? ಕತೆ ವಿಸು ಹೇಳಿ ಸ್ವಲ್ಪ....

ಕವಿತಾ: ಇದು ಸ್ವಾತಂತ್ರ್ಯ ನಂತರದಲ್ಲಿ ಮಾಲ್ಗುಡಿಯಲ್ಲಿ ನಡೆಯುವ ಥ್ರಿಲ್ಲರ್. ರೋಚಕವಾಗಿದೆ. ಟ್ಯಾಕ್ಸಿಡರ್ಮಿಸ್ಟ್ ಒಬ್ಬನ ಆಗಮನದಿಂದ ಹಳ್ಳಿಯೊಂದು ಸಂಪೂರ್ಣವಾಗಿ ಗೊಂದಲಗೊಳ್ಳುವ ಕತೆಯದು.

(ಮಾಲ್ಗುಡಿ ಎನ್ನುವುದು ಕಿವಿಗೆ ಬಿದ್ದಿದ್ದೇ ತಡ, ಘಾಯ್‌ರವರ ಅಳಿಯ, ಮುಕ್ತಾ ಆರ್ಟ್ಸ್‌ನ ಡೈರೆಕ್ಟರ್ ರಾಹುಲ್ ಪುರಿ ಆಸಕ್ತಿಯಿಂದ ಮಾತಾಡತೊಡಗಿದರು.)

ರಾಹುಲ್: ವಾವ್! ನಾನು ಮಾಲ್ಗುಡಿ ಕತೆಗಳೊಂದಿಗೆ ಬೆಳೆಯುತ್ತಾ ಬಂದೆ. ಸ್ಕ್ರಿಪ್ಟ್ ಇದ್ದರೆ ಕೊಡಿ. ಓದಲು ನಮಗಿಷ್ಟ.

ಕವಿತಾ: ಈಗ ತಂದಿಲ್ಲ, ನಾಳೆ ಕಳಿಸಿಕೊಡುವೆ. ಈ ಚಿತ್ರವನ್ನು ದೊಡ್ಡ ಪ್ರೊಡಕ್ಷನ್ ಹೌಸ್‌ನವರೇ ಮಾಡಿದರೆ ಮಾರ್ಕೆಟಿಂಗ್ ಸುಲಭವಾಗುತ್ತದೆ. ಇಲ್ಲಿ ನನಗೆ ನಿರ್ಮಾಪಕರಿದ್ದಾರೆ. ಆದರೆ ಮುಂದೆ ಬೆಂಗಳೂರಿನಿಂದ ಮಾರ್ಕೆಟಿಂಗ್‌ಗೆ ತೊಂದರೆ ಆಗುತ್ತೆ. ಸರಿಯಾಗಿ ಮಾರ್ಕೆಟ್ ಮಾಡಿದರೆ ಈ ಚಿತ್ರ ಮತ್ತೊಂದು 'ಮಾನ್ಸೂನ್ ವೆಡ್ಡಿಂಗ್'ನಂತೆ ಹಿಟ್ ಆಗುತ್ತದೆ.

ಘಾಯ್: 'ಮಾನ್ಸೂನ್'... ಅದೆಷ್ಟೊಂದು ಮಿಲಿಯನ್ ಡಾಲರ್ ಗಳಿಸಿತು ಗೊತ್ತಾ? ಸ್ಕ್ರಿಪ್ಟನ್ನು ನೀವೇ ಬರೆಯುತ್ತೀರಾ?

ಕವಿತಾ: ನನ್ನ ಎಲ್ಲಾ ಸ್ಕ್ರಿಪ್ಟ್‌ಗಳನ್ನು ನಾನೇ ಬರೆಯುವೆ. ಒಮ್ಮೊಮ್ಮೆ ಕೆಲವು ಪ್ರಮುಖರೊಂದಿಗೆ ಚರ್ಚಿಸಿ ಬರೆಯುವೆ.

ಘಾಯ್: ನಾನೂ ಹಾಗೆಯೇ. ನನ್ನ ಎಲ್ಲ ಸ್ಕ್ರಿಪ್ಟ್‌ಗಳನ್ನು ನಾನೇ ಬರೆಯುವುದು. ನಿಮ್ಮ ಸ್ಕ್ರಿಪ್ಟ್ ಕಳಿಸಿಕೊಡಿ. ಹಾಗೆಯೇ ಮಾಲ್ಗುಡಿ ಹೊರತಾಗಿ, ನಾವೇ ಸೂಚಿಸುವ concept ಮೇಲೆ ಚಿತ್ರ ಮಾಡಲು ಬಯಸುತ್ತೀರಾ?

ಕವಿತಾ: (ಸ್ವಲ್ಪ ಹಿಂಜರಿಕೆಯಿಂದ) ಕತೆ ಇಷ್ಟವಾದರೆ ಮತ್ತು ಅದಕ್ಕೆ ನಾನು ನ್ಯಾಯ ಸಲ್ಲಿಸಬಲ್ಲೆ ಎನಿಸಿದರೆ ಖಂಡಿತಾ ಮಾಡಲು ಬಯಸುವೆ.

(ಅವಕಾಶ ಸಿಕ್ಕಿತೆಂದು ಎಲ್ಲ ಅವಕಾಶ ಒಪ್ಪಿಕೊಳ್ಳುವುದಕ್ಕಿಂತ ನನಗಿಷ್ಟದ ಚಿತ್ರ ಮಾಡುವುದು ಒಳ್ಳೇದು ಎಂದು ನಾನು ಹೇಳಿದ್ದರಿಂದ ಘಾಯ್ ಕಣ್ಣುಗಳಲ್ಲಿ ನನ್ನ ಬಗ್ಗೆ ಮೆಚ್ಚುಗೆ ಕಾಣುತ್ತಿತ್ತು)

ಘಾಯ್: ನಿಮ್ಮ ನಿಲುವು ಇಷ್ಟವಾಯ್ತು. ಪ್ರತಿ ನಿರ್ದೇಶಕರೂ ತಾವು ಮಾಡುತ್ತಿರುವ ಸಬ್ಜೆಕ್ಟ್‌ನ್ನು ಪ್ರೀತಿಸಬೇಕು. ನಾವು ನಿಮ್ಮೊಂದಿಗೆ ಸಂಪರ್ಕದಲ್ಲಿರುತ್ತೇವೆ, ನಾವು ಖಂಡಿತ ಜೊತೆಯಾಗಿ ಕೆಲಸ ಮಾಡೋಣ. 'ಮ್ಯಾನ್ ಈಟರ್ ಆಫ್ ಮಾಲ್ಗುಡಿ' ಅಥವಾ ಇತರ ವಿಷಯವಾಗಿ ಸಧ್ಯದಲ್ಲೇ ನಾನು ನಿಮ್ಮನ್ನು ಸಂಪರ್ಕಿಸುವೆ. ಟೇಕ್ ಕೇರ್, ಗುಡ್‌ನೈಟ್.

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676… Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-…